ಕನ್ನಡ ವಿಶ್ವವಿದ್ಯಾಲಯ, ಹಂಪಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ವಿದ್ಯಾರಣ್ಯ-583276.

ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ 2016-17

ವಿಷಯ:

"ಡಾ|| ಕೆ.ಪಿ. ಪುತ್ತೂರಾಯರ ಸಾಹಿತ್ಯದಲ್ಲಿ ವೈಚಾರಿಕ-ವೈಜ್ಞಾನಿಕ ಪ್ರಜ್ಞೆ ಒಂದು ಅಧ್ಯಯನ"

ಸಂಶೋಧನಾ ವಿದ್ಯಾರ್ಥಿ
ಯಶಸ್ವಿನಿ ಕೆ.ಆರ್
ನೊಂ. ಸಂಖ್ಯೆ: 162001030069.

ಮಾರ್ಗದರ್ಶಕರು
ಡಾ|| ವೆಂಕಟಪ್ಪ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಎಸ್.ಎಲ್.ಎನ್. ಕಾಲೇಜ್, ಕೋಟೆ, ಬೆಂಗಳೂರು-560 002.

ಮಾನ್ಯತಾ ಸಂಸ್ಥೆ
ಕನ್ನಡ ಸಾಹಿತ್ಯ ಪರಿಷತ್ತು
ಕನ್ನಡ ಸಂಶೋಧನಾ ಕೇಂದ್ರ
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು-560 018.

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ವಿದ್ಯಾರಣ್ಯ-583276.

ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ 2016-17

ವಿಷಯ:

"ಡಾ॥ ಕೆ.ಪಿ. ಪುತ್ತೂರಾಯರ ಸಾಹಿತ್ಯದಲ್ಲಿ ವೈಚಾರಿಕ-ವೈಜ್ಞಾನಿಕ ಪ್ರಜ್ಞೆ ಒಂದು ಅಧ್ಯಯನ"

ಸಂಶೋಧನಾ ವಿದ್ಯಾರ್ಥಿ

ಯಶಸ್ವಿನಿ ಕೆ.ಆರ್

ನೊಂ. ಸಂಖ್ಯೆ: 162001030069.

ಮಾರ್ಗದರ್ಶಕರು

ಡಾ॥ ವೆಂಕಟಪ್ಪ

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ

ಎಸ್.ಎಲ್.ಎನ್. ಕಾಲೇಜ್, ಕೋಟೆ, ಬೆಂಗಳೂರು-560 002.

ಮಾನ್ಯತಾ ಸಂಸ್ಥೆ

ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಂಶೋಧನಾ ಕೇಂದ್ರ

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,

ಬೆಂಗಳೂರು-560 018.

ಸಂಶೋಧಕರ ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ **"ಡಾ॥ ಕೆ.ಪಿ. ಪುತ್ತೂರಾಯರ ಸಾಹಿತ್ಯದಲ್ಲಿ ವೈಚಾರಿಕ-ವೈಜ್ಞಾನಿಕ ಪ್ರಜ್ಞೆ ಒಂದು ಅಧ್ಯಯನ"** ಎಂಬ ಶೀರ್ಷಿಕೆಯ ಈ ಎಂ.ಫಿಲ್ ನಿಬಂಧವನ್ನು **ಡಾ॥ ವೆಂಕಟಪ್ಪ ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಎಸ್.ಎಲ್.ಎನ್. ಕಾಲೇಜ್, ಬೆಂಗಳೂರು-560 002,** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಈ ನಿಬಂಧವನ್ನು ಈ ಮೊದಲು ಯಾವುದೇ ವಿಶ್ವವಿದ್ಯಾಲಯದ ಪದವಿ ಅಥವಾ ಇತರೇ ಉದ್ದೇಶಗಳಿಗಾಗಲಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

Ya K.R

ದಿನಾಂಕ : 05/8/17
ಸ್ಥಳ : ಬೆಂಗಳೂರು

ಯಶಸ್ವಿನಿ ಕೆ.ಆರ್.
ಸಂಶೋಧನಾ ವಿದ್ಯಾರ್ಥಿ
ನೋಂ. ಸಂಖ್ಯೆ: 162001030069

<u>ಮಾರ್ಗದರ್ಶಕರ ದೃಢೀಕರಣ ಪತ್ರ</u>

ಯಶಸ್ವಿನಿ ಕೆ.ಆರ್. ರವರು ಎಂ.ಫಿಲ್ ಪದವಿಗಾಗಿ ಬರೆದು ಸಿದ್ಧಪಡಿಸಿರುವ **"ಡಾ॥ ಕೆ.ಪಿ. ಪುತ್ತೂರಾಯರ ಸಾಹಿತ್ಯದಲ್ಲಿ ವೈಚಾರಿಕ-ವೈಜ್ಞಾನಿಕ ಪ್ರಜ್ಞೆ –ಒಂದು ಅಧ್ಯಯನ"** ಎಂಬ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ಸಲ್ಲಿಸಲು ನನ್ನ ಮಾರ್ಗದರ್ಶನದಲ್ಲಿ ಸ್ವತಂತ್ರ ಅಧ್ಯಯನದ ಮೂಲಕ ಸಿದ್ಧಪಡಿಸಿರುತ್ತಾರೆ. ಈ ನಿಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಇದಕ್ಕೆ ಮೊದಲು ಬೇರೆ ಯಾವುದೇ ಪದವಿಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಲೀ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : 05|8|17
ಸ್ಥಳ : ಬೆಂಗಳೂರು

ಮಾರ್ಗದರ್ಶಕರು
ಡಾ॥ ವೆಂಕಟಪ್ಪ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಎಸ್.ಎಲ್.ಎಸ್. ಕಾಲೇಜು, ಕೋಟೆ,
ಬೆಂಗಳೂರು-560 002.

ಡಾ॥ ವೆಂಕಟಪ್ಪ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಎಸ್.ಎಲ್.ಎಸ್. ಕಾಲೇಜು
ಕೋಟೆ, ಬೆಂಗಳೂರು-560 002.

ಪರಿವಿಡಿ

ಅಧ್ಯಾಯ – 01

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಪೀಠಿಕೆ:-

ತಾಂತ್ರಿಕವಾಗಿ ಮತ್ತು ವೈಜ್ಞಾನಿಕವಾಗಿ ಆಧುನಿಕ ಸಮಾಜ ಎಷ್ಟೇ ಪ್ರಗತಿ ಹೊಂದಿದ್ದರು, ಮನುಷ್ಯ ಏನೇ ತಂತ್ರಜ್ಞಾನಗಳ ಬಳಕೆ ಮಾಡಿಕೊಂಡು ಚಂದ್ರಯಾನ, ಮಂಗಳಯಾನಗಳಂತಹ ಹಲವು ಗ್ರಹಗಳ ಮೇಲೆ ಅಡಿಯಿಟ್ಟು ತಾಂತ್ರಿಕವಾಗಿ ಉನ್ನತಿಯನ್ನು ಗಳಿಸಿದ್ದರೂ, ಮಾನವೀಯ ಮೌಲ್ಯಗಳ, ಮನುಜ ಮತದ ಸತ್ವ ಪಥದ ಅರಿವಿನ ಗರಿಮೆ ಅವನಲ್ಲಿ ಮೂಡದ ಹೊರತು, ಈ ಎಲ್ಲಾ ಆವಿಷ್ಕಾರಗಳು, ಅನ್ವೇಷಣಗಳು, ಪ್ರಗತಿಗಳು ಅರ್ಥಹೀನವಾಗುತ್ತವೆ. ಆದುದರಿಂದ ಮನುಜಮತದ ಸತ್ವ ಪಥದ ಹಿರಿಮೆಯನ್ನು ಅರಿತುಕೊಂಡು ಸುಸಂಸ್ಕೃತನಾಗಲು ವೈಚಾರಿಕ ಹಾಗೂ ವೈಜ್ಞಾನಿಕ ಚಿಂತನೆಗಳನ್ನು ಸಾಂಸ್ಕೃತಿಕ ನೆಲಗಟ್ಟಿನಲ್ಲಿ ಅಳವಡಿಸಿಕೊಳ್ಳಬೇಕು ಎಂಬುದನ್ನು ವಿಶಿಷ್ಟವಾಗಿ ತಮ್ಮ ಕೃತಿಗಳಲ್ಲಿ, ಉಪನ್ಯಾಸಗಳಲ್ಲಿ, ಬರಹಗಳಲ್ಲಿ, ಧ್ವನಿಸಾಂದ್ರಿಕೆಗಳಲ್ಲಿ, ಸಾಧಿಸಿ ತೋರಿಸಿಕೊಟ್ಟ ಚಿಂತಕ, ಸಾಹಿತಿ, ಸಂಶೋಧಕ, ಶಿಕ್ಷಣ ತಜ್ಞ ಡಾ॥ ಕೆ.ಪಿ. ಪುತ್ತೂರಾಯರವರು.

ಇವರು ಈಗಾಗಲೇ ಹಲವಾರು ವಿಚಾರಶೀಲ ಬರಹಗಳನ್ನು ಪ್ರಕಟಿಸಿ ಉತ್ತಮ ಬರಹಗಾರರೆಂದು ಹೆಸರಾದವರು. ಇವರು ವೃತ್ತಿಯಿಂದ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಶರೀರ ಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾಗಿ, ಮಾರ್ಗದರ್ಶಕರಾಗಿ, ಸಂಶೋಧಕರಾಗಿ, ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರೂ, ಸಾಹಿತ್ಯ ಕ್ಷೇತ್ರಕ್ಕೆ ಇವರು ಸಲ್ಲಿಸುತ್ತಿರುವ ಸೇವೆ ಅಪಾರವಾದದು. ಇವರು ತಮ್ಮ ವಿಚಾರಶೀಲ ಬರವಣಿಗೆಗಳ ಮೂಲಕ ಈ ಸಮಾಜದಲ್ಲಿ ತುಂಬಿರುವ ಮೌಢ್ಯ, ಕಂದಾಚಾರ, ಪಿಡುಗುಗಳನ್ನು ತೊಡೆದುಹಾಕಿ ಇಡೀ ಸಮಾಜವನ್ನೇ ಮೌಲ್ಯಧಾರಿತವನ್ನಾಗಿ ಮಾಡುವಲ್ಲಿ ಇವರ ವೈಚಾರಿಕ ಹಾಗೂ ವೈಜ್ಞಾನಿಕ ಚಿಂತನೆಗಳು ಅರ್ಥಪೂರ್ಣವಾಗಿವೆ.

20-21 ರ ದಶಕದಲ್ಲಿ ಸಾಮಾಜಿಕವಾಗಿ ಹಲವು ವೈಜ್ಞಾನಿಕ ಸಂಶೋಧನೆಗಳು ಹಾಗೂ ಚಿಂತನೆಗಳು ನಡೆಯುತ್ತಲೇ ಸಾಗಿವೆ. ಇಂತಹ ಕಾಲ ಘಟ್ಟದಲ್ಲಿ ವೈಚಾರಿಕ ಹಾಗೂ ವೈಜ್ಞಾನಿಕ ಚಿಂತನೆಗಳಲ್ಲಿ ಸಾಂಸ್ಕೃತಿಕ ನೆಲೆಗಟ್ಟಿನ ಹಿರಿಮೆಯನ್ನು ಜೊತೆಗೂಡಿಸಿ ಮನುಜನ ಮನೋಭಾವವನ್ನು ವೈಜ್ಞಾನಿಕ ಚಿಂತನೆಗಳ ಕಡೆ ಸೆಳೆದ ವಿಚಾರವಾದಿ ಚಿಂತಕರಾಗಿ ಗುರುತಿಸಿಕೊಂಡಿದ್ದಾರೆ. ವಿದ್ಯಾರ್ಥಿ ಜೀವನದಿಂದಲೂ ಮನುಜನ ಮನೋ ವೈಜ್ಞಾನಿಕ ಚಿಂತನೆಗಳ ಕಡೆಗೆ ಹೆಚ್ಚು ಚಿಂತಿಸುತ್ತಾ ತೊಡಗಿದ್ದ ಶ್ರೀಯುತರು ಮನೋಶರೀರ ಕ್ರಿಯಾಶಾಸ್ತ್ರದ ಅಧ್ಯಯನವನ್ನು ಮಾಡಿದವರಾದ್ದರಿಂದ ಇವರ ಎಲ್ಲಾ ವಿಚಾರ ಚಿಂತನೆಗಳು ಮನುಜನ ಮನೋ ಚಿಂತನೆಗಳನ್ನಾಧರಿಸಿದ ವಿಷಯಗಳನ್ನೊಳಗೊಂಡಿದ್ದು ಅವುಗಳನ್ನ ಜನತೆಯ ಮುಂದೆ ಕೊಂಡೊಯ್ಯಲು ಬಳಸಿದ ವಿಧಾನಗಳು ಕೂಡ ಅಷ್ಟೇ ಸಾಂಧರ್ಭಿಕ ಸತ್ವವನ್ನು ಒಳಗೊಂಡಿದ್ದಾಗಿವೆ.

ಸಾಂಸ್ಕೃತಿಕ ಪರಂಪರೆಯಲ್ಲಿ ಸೃಜನಶೀಲ ಚಿಂತಕನಿಗೆ ಕಾಲ ಮತ್ತು ಸಾಂದರ್ಭಿಕ ಸನ್ನಿವೇಶಗಳ ನಡುವೆ ಅಗತ್ಯವಾದ ಚಿಂತನೆಗಳನ್ನು ನೀಡುವ ವೈಚಾರಿಕ ಪ್ರಜ್ಞೆಯುಳ್ಳ ಸಾಹಿತಿಗಳು ವಿರಳ. ಅಂತಹ ಸಾಹಿತಿಗಳಲ್ಲಿ ಡಾ॥ ಕೆ.ಪಿ. ಪುತ್ತೂರಾಯರವರು ಸಾಂಸ್ಕೃತಿಕ ಚಿಂತನೆಗಳೊಳಗೆ ವೈಚಾರಿಕ ಹಾಗೂ

ವೈಜ್ಞಾನಿಕ ಪ್ರಜ್ಞೆಯನ್ನು ತಿಳಿಹಾಸ್ಯ ಚಿಂತನೆಗಳ ಮುಖಾಂತರ ಸರಳ ಕನ್ನಡದಲ್ಲಿ ಜನ ಮನಕ್ಕೆ ತಲುಪಿಸುವ ವ್ಯಕ್ತಿತ್ವವನ್ನು ರೂಪಿಸಿಕೊಂಡ ಚಿಂತಕರಾಗಿದ್ದಾರೆ.

ಡಾ॥ ಕೆ.ಪಿ. ಪುತ್ತೂರಾಯರವರ ಸೃಜನಶೀಲತೆ ಕೇವಲ ಕಾವ್ಯಕ್ಕೆ ಮಾತ್ರ ಸೀಮಿತಗೊಂಡಿರದೇ, ಸಾಂಸ್ಕೃತಿಕ, ವೈಚಾರಿಕ ವೈಜ್ಞಾನಿಕ, ಮನಃ ಶಾಸ್ತ್ರೀಯ, ಪರಿಸರ, ರಾಜಕಾರಣ, ಧರ್ಮ, ಶಿಕ್ಷಣ, ವಿದ್ಯಾರ್ಥಿ ಜೀವನ, ವ್ಯಕ್ತಿತ್ವ ವಿಕಸನ, ಮಾನವೀಯ ಮೌಲ್ಯಗಳು ಹೀಗೆ ಹತ್ತು ಹಲವು ಜ್ಞಾನ ಶಾಖೆಗಳೊಂದಿಗೆ ಅನುಸಂಧಾನದ ಮೂಲಕ ಬೌದ್ಧಿಕ ಸಾಮರ್ಥ್ಯವನ್ನು ಸ್ವಯಂ ಅಧ್ಯಯನದಿಂದ ಸಂಪಾದಿಸಿಕೊಂಡಿರುವುದು ಅಚ್ಚರಿಯೇ ಸರಿ. ಅಂತಹ ಹಲವು ಚಿಂತನೆಗಳಲ್ಲಿ ಅಗತ್ಯ ಚಿಂತನೆಗಳ ಒಂದು ಮುನ್ನೋಟ ಈ ಸಂಶೋಧನೆಯ ಭಾಗವಾಗಿದೆ.

ಅಧ್ಯಯನದ ಉದ್ದೇಶ

ಡಾ॥ ಕೆ.ಪಿ. ಪುತ್ತೂರಾಯರವರು ಈಗಾಗಲೇ ಹಲವಾರು ವಿಚಾರಶೀಲ ಬರಹಗಳನ್ನು ಪ್ರಕಟಿಸಿ ಉತ್ತಮ ಬರಹಗಾರರೆಂದು ಹೆಸರಾದವರು. ಇವರು ವೃತ್ತಿಯಿಂದ ವೈದ್ಯಕೀಯ ವಿದ್ಯಾಲಯಗಳ ಶರೀರ ಕ್ರಿಯಾಶಾಸ್ತ್ರದ ಪ್ರಾಧ್ಯಾಪಕರಾಗಿ, ಮಾರ್ಗದರ್ಶಕರಾಗಿ, ಸಂಶೋಧಕರಾಗಿ, ನಿರ್ದೇಶಕರಾಗಿ, ಸಂಯೋಜಕರಾಗಿ ಸೇವೆ ಸಲ್ಲಿಸಿದವರು. ಈ ಕ್ಷೇತ್ರದಲ್ಲಿ ಅವರ ಸಾಮರ್ಥ್ಯವನ್ನು ಎಲ್ಲರೂ ಮೆಚ್ಚಿಕೊಂಡವರು. ಇವರು ಪರಿಣಿತರಾದಂತಹ ವೈದ್ಯಲೋಕದ ಅನರ್ಘ್ಯ ರತ್ನ ಎಂದು ಹೇಳಬಹುದು. ಅಲ್ಲದೆ ಪ್ರವೃತ್ತಿಯಿಂದ ವಾಗ್ಮಿಯಾಗಿ, ಸಾಹಿತಿಯಾಗಿ, ವಿಮರ್ಶಕರಾಗಿ ಚಿಂತಕರಾಗಿ, ಲೇಖಕರಾಗಿ, ಹಾಸ್ಯ ಪಟುವಾಗಿ, ಪ್ರವಚನಕಾರರಾಗಿ ತಮ್ಮ ಬರವಣಿಗೆ, ಉಪನ್ಯಾಸಗಳ ಮೂಲಕ ಇಡೀ ಸಮಾಜವನ್ನು ಮೌಲ್ಯಾಯುತವಾಗಿ ಪರಿವರ್ತಿಸುವ ದಿಸೆಯಲ್ಲಿ ಮೌಢ್ಯ, ಅಂಧಕಾರ, ಪಿಡುಗುಗಳನ್ನು ತೊಡೆದು ಹಾಕುವ ಪ್ರಯತ್ನ ಮಾಡುತ್ತಿರುವ ಇವರ ಸಾಹಿತ್ಯದ ಬಗ್ಗೆ ಅಧ್ಯಯನ ಮಾಡುವುದು ಈ ನಿಬಂಧದ ಉದ್ದೇಶವಾಗಿದೆ.

ಸಂಶೋಧನಾ ಅಧ್ಯಯನ ಎಂದರೆ ಅಧ್ಯಯನದಲ್ಲಿ ಏನಾದರು ಒಂದು ಹೊಸತನ್ನು ಹುಡುಕುವುದಾಗಿದೆ. ಪ್ರಸ್ತುತ ಅಧ್ಯಯನವು ವ್ಯಕ್ತಿರಚಿತ ಸಾಹಿತ್ಯ ಅಧ್ಯಯನವಾಗಿದೆ. ವೃತ್ತಿಯಲ್ಲಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಶರೀರ ಕ್ರಿಯಾಶಾಸ್ತ್ರ ವಿಭಾಗದಲ್ಲಿ ಭೋಧಕರಾಗಿ, ಪರೀಕ್ಷಕರಾಗಿ, ಸಂಶೋಧಕರಾಗಿ, ತಜ್ಞರಾಗಿ, ಆಡಳಿತಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದರೂ ಸಹ, ಪ್ರವೃತ್ತಿಯಲ್ಲಿ ಸಾಹಿತಿಯಾಗಿ, ವಾಗ್ಮಿಯಾಗಿ, ವಿಚಾರವಾದಿಯಾಗಿ, ಶಿಕ್ಷಣ ತಜ್ಞರಾಗಿ, ಚಿಂತಕರಾಗಿ ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಸೇವೆ ಸಲ್ಲಿಸುತ್ತಿರುವ ಇವರ ಹಲವಾರು ಕೃತಿಗಳಿಂದ ವೈಚಾರಿಕ ಹಾಗೂ ವೈಜ್ಞಾನಿಕ ಚಿಂತನೆಗಳನ್ನು ತೆಗೆದುಕೊಂಡು ಅದನ್ನು ವಿಶ್ಲೇಷಿಸುವುದು. ಅದನ್ನು ನಿಬಂಧಕ್ಕೆ ಒಳಪಡಿಸಿಕೊಳ್ಳುವುದು ಅಧ್ಯಯನದ ಬಹು ಮುಖ್ಯ ಉದ್ದೇಶವಾಗಿದೆ.

ಇಲ್ಲಿಯವರೆಗೆ ಅವರು ಬರೆದಿರುವ ಕೃತಿಗಳು, ಪ್ರಕಟವಾಗಿರುವ ವಿಷಯಗಳನ್ನು ಸಂಗ್ರಹಿಸಿ, ಕಾರ್ಯಕ್ರಮಗಳನ್ನು ಆಧರಿಸಿ, ಇವರ ಸಾಹಿತ್ಯದ ಪ್ರಾಕಾರಗಳಿಂದ ವಿವಿಧ ಆಯಾಮಗಳನ್ನು ತಿಳಿದುಕೊಳ್ಳಲಾಗಿದೆ. ಸಾಹಿತ್ಯ ಬರವಣಿಗೆಯ ಪರಿಚಯವನ್ನು ಅದರ ನೆಲೆ-ಬೆಲೆಯನ್ನು ಗುರುತಿಸಲು ಹಾಗೂ ಮಾನವನ ಪ್ರಸ್ತುತ ಜೀವನಕ್ಕೆ ಬೇಕಾದಂತಹ ಮೌಲ್ಯಯುತ ವಿಚಾರಗಳನ್ನು ತಿಳಿಸುವುದು ಈ ನಿಬಂಧದ ಮೂಲ ಉದ್ದೇಶವಾಗಿದೆ.

ಅಧ್ಯಯನದ ವ್ಯಾಪ್ತಿ

ಪುತ್ತೂರಾಯ, ಸಂಶೋಧನೆ, ಉಪನ್ಯಾಸ, ಬರಹ, ವಿಚಾರ ಸಂಕೀರ್ಣ, ಈ ಎಲ್ಲಾ ವಿಚಾರಗಳಲ್ಲಿ ಬಳಕೆಯಾಗುವ ವಿಷಯ ಹಾಗೂ ವಿಚಾರಗಳು ಕೇವಲ ಒಂದು ಕ್ಷೇತ್ರಕ್ಕೆ ಸೀಮಿತಗೊಳ್ಳದೇ ಸಾಮಾಜಿಕ, ಧಾರ್ಮಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ, ನೈತಿಕ, ವೈಚಾರಿಕ, ವೈಜ್ಞಾನಿಕ ಹೇಗೆ ಹಲವಾರು ಕ್ಷೇತ್ರ (ವಲಯ) ಗಳಿಗೆ ಇವರ ಚಿಂತನೆಗಳು ವ್ಯಾಪಕಗೊಂಡಿವೆ.

ಲೇಖಕರನ್ನು ದಶಕಗಳ ಕಾಲ ಗಾಢವಾಗಿ ಪ್ರಭಾವಿಸಿರುವ ವೈಚಾರಿಕ ವೈಜ್ಞಾನಿಕ ಚಿಂತನೆಗಳ ಕುರಿತ ಅವರ ನಿಲುವುಗಳ ಹೊಸ ಆಯಾಮಗಳನ್ನು ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ ಹಾಗೆಯೇ ಅವರ ಈ ಚಿಂತನೆಗಳನ್ನು ಅಧ್ಯಯನ ಮಾಡುವುದು. ಈ ನಿಬಂಧದ ಪ್ರಧಾನ ಭಾಗವಾಗಲಿದೆ.

ಮಾಹಿತಿ ಸಂಗ್ರಹಣೆಯ ನೆಲೆಗಳು:

ಸಂಶೋಧನೆಯ ಮುಖ್ಯವಾದ ಹಂತವೆಂದರೆ ಆಕರ ಅಥವಾ ಮಾಹಿತಿ ಸಂಗ್ರಹಣೆ ಇಲ್ಲಿ ಆಕರ ಸಾಮಾಗ್ರಿಯನ್ನು 2 ನೆಲಗಳಲ್ಲಿ ಕಲೆ ಹಾಕಲಾಗಿದೆ.

1. **ಮೂಲ ಆಕರಗಳು:** ಅಧ್ಯಯನದಲ್ಲಿ ಮೂಲ ಆಕರಕ್ಕು ಹೆಚ್ಚಿನ ಪ್ರಾಶಸ್ತ್ಯ ನೀಡಿರುತ್ತೇನೆ ಏಕೆಂದರೆ ಇವು ನಿಬಂಧಕ್ಕೆ ಹೆಚ್ಚು ಆಧಾರವಾಗಿರುತ್ತದೆ.
   ಡಾ॥ ಕೆ.ಪಿ. ಪುತ್ತೂರಾಯರನ್ನು ಬೇಟಿ ಮಾಡಿ ಪ್ರಶ್ನಾವಳಿಯ ಮೂಲಕ ಮಾಹಿತಿ ಸಂಗ್ರಹಣೆ ಮಾಡಲಾಗಿದೆ. ಹಾಗೂ ಇವರ ಕೃತಿಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.
2. **ಅನುಷಂಗಿಕ ಅಥವಾ ಪೂರಕ ಆಕರಗಳು:** ಲೇಖಕರಿಂದಲೆ ಕೆಲವು ಮಾಹಿತಿಗಳನ್ನು ಸಂಗ್ರಹಿಸುವುದರ ಜೊತೆಗೆ, ಅವರೇ ಬರೆದಿರುವಂತಹ ವಿವಿಧ ಗ್ರಂಥಗಳು, ಕೃತಿಗಳು, ಸಂಶೋಧನಾ ಲೇಖನಗಳು, ಉಪನ್ಯಾಸ ಮಾಲಿಕೆಗಳು ಹಾಗೂ ಅಂತರ್ಜಾಲ ತಾಣಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ.

ಸ್ವರೂಪ:

ಈ ಅಧ್ಯಯನವು ಸಮಾಜದಲ್ಲಿನ ಸುಶಿಕ್ಷಿತ, ಆರೋಗ್ಯಕರ, ಉತ್ತಮ ಸಮಾಜ ನಿರ್ಮಾಣ ಮಾಡುವ ಕಾಯಕಲ್ಪದ ಸ್ವರೂಪವನ್ನು ಹೊಂದಿದೆ. ಲೇಖಕರ ಸಾಹಿತ್ಯಾಧ್ಯಯನಗಳ ಮೂಲ ಚಿಂತನೆಗಳನ್ನು ಕ್ರೋಡಿಕರಿಸಿ ಆ ಮೂಲಕ ಸತ್ಯ ಸತ್ವಗಳನ್ನು ದಾಖಲಿಸಿ ವೈಚಾರಿಕ ಹಾಗೂ ವೈಜ್ಞಾನಿಕ ಚಿಂತನೆಗಳನ್ನು ಅಭ್ಯಸಿಸುವುದಾಗಿದೆ.

ಸಮಾಜದಲ್ಲಿನ ಆರೋಗ್ಯಕರ ಮನಸ್ಥಿತಿಯನ್ನು ಕಾಪಾಡಿಕೊಳ್ಳಲು ಹಾಗೂ ಸಾಮಾಜಿಕವಾದ ಬರಹಗಳಲ್ಲಿ, ನೀಡಿರುವ ಚಹರೆಗಳನ್ನು ತಿಳಿದುಕೊಳ್ಳಲು ಇವರ ಅಧ್ಯಯನ ಪ್ರಮುಖವಾದುದಾಗಿದೆ. ಇವರು ವೈದ್ಯ ಸಾಹಿತ್ಯ ಲೋಕಕ್ಕೆ ವಿಭಿನ್ನ ಸ್ವರೂಪಗಳಲ್ಲಿ ಮಾದರಿಯಾಗಿದ್ದಾರೆ. ಒಟ್ಟಾರೆ ಇವರ ಅಧ್ಯಯನ ಈ ನಿಬಂಧಕ್ಕೆ ಉತ್ತಮ ಸ್ವರೂಪದ್ದಾಗಿದೆ.

ಅಧ್ಯಾಯ – 2
ಡಾ॥ ಕೆ.ಪಿ. ಪುತ್ತೂರಾಯರವರ ಜೀವನ ಮತ್ತು ವ್ಯಕ್ತಿತ್ವ

ಜೀವನದಲ್ಲಿ ಒಳ್ಳೆ ಆಲೋಚನೆಗಳನ್ನು ಅನುಭವಗಳನ್ನು ವಿಮರ್ಶ್ಮಾತ್ಮಕವಾಗಿ ವಿಶ್ಲೇಷಿಸಿ ಅದನ್ನು ತನ್ನಲ್ಲಿ ಅಳವಡಿಸಿಕೊಂಡು ತಾನೇ ಮಾದರಿಯಾಗಿ ಉಳಿದವರಿಗೂ ಮಾರ್ಗದರ್ಶಕರಾಗಿ ಬಾಳುವವರು ವಿರಳ. ಅಂತಹ ಅಪರೂಪದವರಲ್ಲಿ ಚಿಂತಕ, ಚತುರ ವಾಗ್ಮಿ ಮತ್ತು ಉತ್ತಮ ಬರಹಗಾರರಾದ ಡಾ॥ ಕೆ.ಪಿ. ಪುತ್ತೂರಾಯರವರು ಒಬ್ಬರು. ಹಾಗೇಯೇ ಸರಳತೆ ಇವರಲ್ಲಿ ಎದ್ದು ಕಾಣುವ ಗುಣ. ಶ್ರೀಯುತರು ಕನ್ನಡದ ಉತ್ತಮ ವಾಗ್ಮಿಗಳು, ಅಷ್ಟೆ ಅಲ್ಲದೇ ಬಹುಮುಖ ಪ್ರತಿಭೆವುಳ್ಳವರು.

"ಇವರು 1943 ಸೆಪ್ಟೆಂಬರ್ 13 ರಂದು ದಿ॥ ವಾಸುದೇವ ಪುತ್ತೂರಾಯ ಮತ್ತು ದಿ॥ ಗಂಗಮ್ಮ ದಂಪತಿಗಳಿಗೆ ಮೂರನೆಯ ಮಗನಾಗಿ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಆರ್ಯಾಪು ಗ್ರಾಮದ ಕುಕ್ಕಾಡಿ ಮನೆಯಲ್ಲಿ 'ಅನಂತ ಚತುರ್ದಶಿ' ಹಬ್ಬದಂದು ಜನಿಸಿದರು. ಇಂತಹ ಶುಭದಿನದಂದು ಜನಿಸಿದ ಇವರಿಗೆ ಅನಂತಪದ್ಮನಾಭನೆಂದು ನಾಮಕರಣ ಮಾಡಲಾಯಿತು. ಮುಂದೆ ಇವರನ್ನು ಮನೆಯವರು ಪ್ರೀತಿಯಿಂದ 'ಪದ್ದ' ಎಂದು ಕರೆಯುತ್ತಿದ್ದರು. ಇವರು ಹುಟ್ಟಿದ ಸ್ವಲ್ಪ ದಿನಕ್ಕೆ ಕೇರಳದ ಕೆಲವು ಜ್ಯೋತಿಷ್ಯರು ಮನೆಗೆ ಭೇಟಿ ನೀಡಿದ್ದರಂತೆ, ಇವರ ಹುಟ್ಟಿದ ಘಳಿಗೆ ಪರಿಶೀಲಿಸಿ ಈ ಮಗುವಿಗೆ ಸಾಧ್ಯವಾದಷ್ಟು ವಿದ್ಯಾಭ್ಯಾಸ ಕೊಟ್ಟುಬಿಡಿ ಮುಂದೆ ಎಲ್ಲವನ್ನು ತಾನಾಗೇ ಸ್ವತಃ ಸಂಪಾದಿಸಿಕೊಂಡು ತುಂಬಾ ಕೀರ್ತಿವಂತನಾಗಿ ಕುಟುಂಬದ ಗೌರವವನ್ನು ಹೆಚ್ಚಿಸುವಂತಹ ಅದೃಷ್ಟಶಾಲಿ, ಭಾಗ್ಯಶಾಲಿ ಮಗನಾಗಿ ಬೆಳೆಯುವನೆಂಬ ಭವಿಷ್ಯವಾಣಿ ನುಡಿದಿದ್ದರಂತೆ"[1] ಹಾಗೆಯೇ ಇವರು ಇಂದು ಭವಿಷ್ಯವಾಣಿಯಂತೆಯೇ ಹೆಸರುವಾಸಿಯಾಗಿದ್ದಾರೆ.

ಹೀಗೆಯೇ ಇವರು ಅವಿಭಕ್ತ ಕುಟುಂಬದಲ್ಲಿ ಎಲ್ಲರೊಡಗೂಡಿ ಬೆಳೆದವರು. ಓದಿನಲ್ಲಿ ಅತ್ಯುತ್ತಮವಾದ ಜ್ಞಾನವನ್ನು ಹೊಂದಿದ್ದವರು. ಹಾಗೆಯೇ ಇವರು ಶಾಲೆಯಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಬರೆದ 100 ಕ್ಕೂ ಮಿಕ್ಕಿದ ಮಕ್ಕಳ ಪೈಕಿ, ಕೇವಲ 4 ವಿದ್ಯಾರ್ಥಿಗಳಷ್ಟೆ ಫಸ್ಟ್ ಕ್ಲಾಸಿನಲ್ಲಿ ತೇರ್ಗಡೆಯಾಗಿದ್ದರಂತೆ, ಅದರಲ್ಲಿ ಇವರು ಒಬ್ಬರು. ಹೀಗಿರುವಾಗ ಮುಂದಿನ ವಿದ್ಯಾಭ್ಯಾಸಕ್ಕೆ ಯಾವ ವಿಷಯವನ್ನು ಆರಿಸಿಕೊಂಡು ಮುಂದುವರಿಯುವುದು ಎಂಬ ಪ್ರಶ್ನೆ ಉದ್ಭವಿಸಿತು. ಆಗ ಮಾರ್ಗದರ್ಶನ ಮಾಡಲು ಯಾರು ಇರದ ಕಾರಣ, ತನ್ನ ಗೆಳೆಯರು ಯಾವ ವಿಷಯವನ್ನು ಆರಿಸಿಕೊಂಡರೋ, ಅದೇ ವಿಷಯವನ್ನು ಇವರು ಆರಿಸಿಕೊಂಡರಂತೆ. ಹೀಗೆ ವಿದ್ಯಾಭ್ಯಾಸ ಮುಂದುವರಿಯಿತು. ಅಂದಿನಿಂದಲೇ ಎಲ್ಲಾ ವರ್ಗದ ಸ್ನೇಹಿತರೊಡನೆ ಒಂದಾಗಿ ಬೆಳೆಯುವ ಮನೋಭಾವನೆ ಆರಂಭವಾಗಿತ್ತು. "ಫೇಲಾದರೆ ಮುಂದಿನ ಶಿಕ್ಷಣ ರದ್ದು" ಎಂಬ ಇವರ ತಂದೆಯವರ ತೀರ್ಮಾನದಿಂದ ಇವರು ಪಾಸಾಗಲೇ ಬೇಕಾದದ್ದು ಕಡ್ಡಾಯವಾಗಿತ್ತು. ಈ ರೀತಿಯಾಗಿ ಫೇಲಾಗದೇನೇ ಕಾಲೇಜಿನಲ್ಲಿ ಬಿಎಸ್‌ಸಿ ಪದವಿ ಕೂಡ ಮುಗಿಯಿತು ಅವರ ತಂದೆ ನನ್ನಿಂದ ಧನ ಸಹಾಯ ನಿರೀಕ್ಷಿಸಬೇಡ ಎಂಬ ಕಟ್ಟಪ್ಪಣೆ ಮಾಡಿದ್ದರಂತೆ. ಆಗ ಇವರು ತನ್ನ ಅಣ್ಣ ದಾಂಡೇಲಿಯಲ್ಲಿ ಫೆರ್ರೋ ಮ್ಯಾಂಗನೀಸ್ ಫ್ಯಾಕ್ಟರಿ ನೌಕರಿ ಮಾಡುತ್ತಿದ್ದಲ್ಲಿಗೆ ಪ್ರಯಾಣ ಬೆಳಸಿ ಒಬ್ಬ ಶಿಫ್ಟ್ ಕೆಮಿಸ್ಟ್ ಆಗಿ ತಿಂಗಳಿಗೆ 150 ಸಂಬಳದ ನೌಕರಿಗೆ ಸೇರಿದರು. ಆಗ ಇವರಿಗೆ ಹಣದಲ್ಲಿ ಸ್ವಲ್ಪ ಉಳಿತಾಯ ಮಾಡಿ, ವಿದ್ಯಾಭ್ಯಾಸ ಮುಂದುವರಿಸಬೇಕೆಂಬ ತವಕ ಮನದಲ್ಲಿ ಮಿಡಿಯುತ್ತಿತ್ತಂತೆ. ಹಾಗೇ

ಹತ್ತಿರದ ಹುಬ್ಬಳ್ಳಿಯಲ್ಲಿರುವ ಕರ್ನಾಟಕ ಮೆಡಿಕಲ್ ಕಾಲೇಜಿನತ್ತ ಮನಸ್ಸು ಓಡತೊಡಗಿತ್ತಂತೆ, ಅಲ್ಲಿ ಪ್ರವೇಶವನ್ನು ಪಡೆದು, ಶರೀರಕ್ರಿಯಾಶಾಸ್ತ್ರದಲ್ಲಿ ಪ್ರಥಮ ದರ್ಜೆಯಲ್ಲಿ ಸ್ನಾತಕೋತ್ತರ ಪದವಿ ಮುಗಿಸಿಕೊಂಡು ಹೊರ ಬಂದರು. ವಿದ್ಯೆಗೆ ಅನುಗುಣವಾದ ವೃತ್ತಿಯ ಹುಡುಕಾಟ ಆರಂಭವಾಯಿತು. ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ಟ್ಯೂಟರ್ ಆಗಿ ನೌಕರಿ ಆರಂಭಿಸಿದರು. ಪಬ್ಲಿಕ್ ಸರ್ವೀಸ್ ಕಮಿಷನಲ್ಲೂ ಸೆಲೆಕ್ಟ್ ಆಗಿ ನೌಕರಿಯಾ ಭದ್ರತೆಯೂ ಆಯಿತು. ಆಗ ಇವರಿಗೆ 23 ವರ್ಷ. ಇದೇ ರೀತಿ 2 ವರ್ಷ ಕಾಲೇಜಿನಲ್ಲಿ ಇಷ್ಟದ ಬೋಧಕ ವೃತ್ತಿಯನ್ನು ಆರಂಭಿಸಿದರು.

ನಂತರ ಇವರು 1970 ರಲ್ಲಿ ಜೂನ್ 19 ರಂದು ಶ್ರೀಮತಿ ಜ್ಯೋತಿಯವರನ್ನು ಮದುವೆಯಾಗಿ ಸಂಸಾರವನ್ನು ಜಯನಗರದ ಬಡಾವಣೆಯ ಪುಟ್ಟ ಮನೆಯಲ್ಲಿ ಆರಂಭಿಸಿದ ಇವರಿಗೆ ಎರಡು ಮಕ್ಕಳಾದವು. ಮುಂದೆ ದೆಹಲಿಯ AIIMS ನಿಂದ ಚಿನ್ನದ ಪದಕದೊಂದಿಗೆ 1979 ರಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದರು. "ಬೆಳೆಯುವ ಮಿದುಳಿನಲ್ಲಿ ಅಪೌಷ್ಟಿಕತೆಯಿಂದ ಆಗುವ ಪರಿಣಾಮಗಳು" ಎಂಬ ವಿಷಯದ ಕುರಿತು ಇವರು ಡಾಕ್ಟರೇಟ್ ಪದವಿಗೆ ಸಲ್ಲಿಸಿದ ಮಹಾಪ್ರಬಂಧವು ಚಿನ್ನದ ಪದಕವನ್ನು ಗಳಿಸಿತು. ಅಂತೆಯೇ ಈ ಸಂಶೋಧನೆಯನ್ನು 1980 ರಲ್ಲಿ ಸ್ವಿಡ್ಜರ್‌ಲ್ಯಾಂಡ್‌ನಲ್ಲಿ ನಡೆದ IBRO ಸಮ್ಮೇಳನದಲ್ಲಿ ಪ್ರಸ್ತುತಪಡಿಸಿ ವಿಜ್ಞಾನಿಗಳ ಮೆಚ್ಚುಗೆಯನ್ನು ಪಡೆಯಿತು. ಫಲಶೃತಿಯಾಗಿ ಜಪಾನ್ ದೇಶದ Kyshu ವಿಶ್ವವಿದ್ಯಾಲಯದಿಂದ ಉನ್ನತ ಸಂಶೋಧನೆಗಾಗಿ ನಾಲ್ಕು ವರ್ಷಗಳ ನಂತರ ಆಮಂತ್ರಣವೂ ಬಂದಿತು. ನಂತರ 2000 ದಲ್ಲಿ ದೆಹಲಿಯ National Academy of Medical Science ನಿಂದ ಸದಸ್ಯತ್ವ (MNAMS) ಹಾಗೂ 2012 ರಲ್ಲಿ ಅಮೇರಿಕಾದ Einstein University, Florida ದಿಂದ ಗೌರವ ಡಾಕ್ಟರೇಟ್ ಪದವಿಯನ್ನ ಪಡೆದರು.

ಉಪನ್ಯಾಸಕರಾಗಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದರು. ವೃತ್ತಿಯ ಜೊತೆಜೊತೆಯಲ್ಲಿಯೇ ಇವರ ಮನದಲ್ಲಿ ತುಡಿಯುತ್ತಿದ್ದ ಸಾಹಿತ್ಯಾಸಕ್ತಿಯ ಮನೋಭಾವ ಇದ್ದುದ್ದರಿಂದ ಇವರು 'ಭಾವ ಮಯೂರಿ' ಎಂಬ ಪ್ರಪ್ರಥಮ ಕವನ ಸಂಕಲನವನ್ನು ರಚಿಸಿದರು. ಮುಂದೆ ಸಹಾಯಕ ಪ್ರಾಧ್ಯಾಪಕರಾಗಿ ತಮ್ಮ ವೃತ್ತಿ ಜೀವನವನ್ನು ಮುಂದುವರಿಸಿದರು. ಮುಂದೆ ಪ್ರೊಫೆಸರ್ ಆಗಿ, ಡೆಪ್ಯೂಟಿ ಡೈರೆಕ್ಟರ್ ಆಗಿ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿದ ಮೇಲೂ, ರಾಜೀವ್ ಗಾಂಧಿ ಹೆಲ್ತ್ ಯೂನಿವರ್ಸಿಟಿಯಲ್ಲಿ ರಿಸರ್ಚ್ & ಡೆವೆಲಪ್‌ಮೆಂಟ್ ಡಿಪಾರ್ಟ್‌ಮೆಂಟ್ ನಲ್ಲಿ ಡೈರೆಕ್ಟರ್ ಆಗಿ, ಸಮಾಲೋಚಕರಾಗಿ ಕೆಲಸ ನಿರ್ವಹಿಸಿ ಮುಂದೆ ಎಂ.ವಿ.ಜೆ. ಮೆಡಿಕಲ್ ಕಾಲೇಜ್, ಕೆಂಪೇಗೌಡ ಮೆಡಿಕಲ್ ಕಾಲೇಜ್, ಎಂ.ಎಸ್. ರಾಮಯ್ಯ ಇಂಟರ್ ನ್ಯಾಷನಲ್ ಮೆಡಿಕಲ್ ಕಾಲೇಜ್ ಹಾಗೂ ಆಕ್ಸ್‌ಫರ್ಡ್ ಡೆಂಟಲ್ ಕಾಲೇಜಿನಲ್ಲಿ ತಮ್ಮ ಬೋಧನಾ ವೃತ್ತಿಯನ್ನು ಮುಂದುವರಿಸಿದರು. ಪ್ರಸ್ತುತ ಶ್ರೀಯುತರು ಈ ಕಾಲೇಜುಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

"ಯಾರ ಒಂದು ಕೃಪಾ ಕಟಾಕ್ಷದ ಭಿಕ್ಷೆಯಿಲ್ಲದೆ ತಮ್ಮ ಉತ್ತಮ ಲೇಖನಗಳ ಮೂಲಕ ಟಿ.ವಿ. ಚಾನೆಲ್‌ಗಳಲ್ಲಿ ವಿಮರ್ಶಕರಾಗಿ, ಚಿಂತಕರಾಗಿ, ಚರ್ಚೆ, ವಿಮರ್ಶೆಗಳಲ್ಲಿ ಭಾಗವಹಿಸುವ ಮೂಲಕ, ಸಾಮಾಜಿಕ ಪಿಡುಗುಗಳ ಬಗ್ಗೆ ನೇರ ನುಡಿಯ ಬರೆವಣಿಗೆಗಳನ್ನು ಮಾಸ ಪತ್ರಿಕೆಗಳಲ್ಲಿ ಹಾಗೂ ದೈನಂದಿನ ವೃತ್ತ ಪತ್ರಿಕೆಗಳಲ್ಲಿ ಪ್ರಕಟಿಸುತ್ತಾ ಬಂದಿರುತ್ತಾರೆ. ಉತ್ತಮ ಪ್ರಭಾವಿ ಭಾಷಣಕಾರರಾಗಿ ಸೇವೆ ಸಲ್ಲಿಸುತ್ತಾ

ಸಾರ್ವಜನಿಕ, ವಿದ್ಯಾ ಸಂಸ್ಥೆಯ ಸಮಾರಂಭಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾ ಜೀವನದ ಸಾರ್ಥಕತೆಯನ್ನು ಮಾಡಿಕೊಳ್ಳುತ್ತಿದ್ದಾರೆ". [೨]

ಹಾಗೆಯೇ ಇವರು ಒಳ್ಳೆಯ ಸಾಹಿತಿ, ವಾಗ್ಮಿ ಹಾಗೂ ಚಿಂತಕರಾಗಿರುವುದರಿಂದ ಅಪಾರ ಅಭಿಮಾನಿಗಳ ಬಳಗವನ್ನು ಪಡೆದಿರುತ್ತಾರೆ. ಜೊತೆಗೆ ಉತ್ತಮ ಭೋದಕರಾಗಿರುವುದರಿಂದ ಜಗತ್ತಿನ ಎಲ್ಲಾ ಮೂಲೆಗಳಲ್ಲೂ ಅವರ ಶಿಷ್ಯ ಸಂಪತ್ತು ಬೆಳೆಯುತ್ತಿರುವುದನ್ನು ಕಾಣುತ್ತೇವೆ. ಹಾಗೆಯೇ 25 ಹೊರದೇಶಗಳನ್ನು ಸಂದರ್ಶಿಸಿರುವ ಇವರ ಅನುಭವ ಅಪಾರ.

ಡಾ|| ಕೆ.ಪಿ. ಪುತ್ತೂರಾಯರ ವ್ಯಕ್ತಿತ್ವ:

ಆರ್ಯಭಟ ಪ್ರಶಸ್ತಿಗೆ ಪುರಸ್ಕೃತರಾದಂತಹ ಡಾ|| ಕೆ.ಪಿ. ಪುತ್ತೂರಾಯರವರ ವ್ಯಕ್ತಿತ್ವ ಬಹಳ ಸರಳವಾದುದು, ವಿರಳವಾದದ್ದು. ಅಚ್ಚುಕಟ್ಟಾದ ಉಡುಗೆ-ತೊಡುಗೆ, ನೋಡಿದೊಡನೆಯೇ ಗೌರವ ಭಾವ ಮೂಡುವಂತಹ ವ್ಯಕ್ತಿತ್ವ. ಅಳತೆ ಮೀರಿದ ಔದಾರ್ಯತೆ, ಪ್ರಾಮಾಣಿಕತೆ, ಸಮಯ ಪರಿಪಾಲನೆ, ಮಾತುಮೀರದ ವಿನಯ ಇವರ ಹುಟ್ಟು ಗುಣ, ಕನ್ನಡದ ಉತ್ತಮ ವಾಗ್ಮಿಗಳು, ಪಂಡಿತರೂ ಆಗಿದ್ದು, ವಾಕ್ ವಿಶಾರದರೂ, ಘನ ಹಾಸ್ಯ ವಾಚಸ್ಪತಿಗಳು ಎಂದೇ ಪ್ರಖ್ಯಾತರಾದವರು. ಸರಳ ಸಜ್ಜನಿಕೆ, ಹೊಂದಿಕೊಂಡು ಹೋಗುವ ಸ್ವಭಾವ ಇವರದು. ಉಡುಗೆ-ತೊಡುಗೆಗಳಲ್ಲಿ ಎಷ್ಟು ಅಚ್ಚುಕಟ್ಟೋ ಅಷ್ಟೇ ಅಚ್ಚಕಟ್ಟು ಸಾಹಿತಿಗಳನ್ನು, ಕಲಾವಿದರನ್ನು ಹಾಗೂ ಜನ ಸಾಮಾನ್ಯರನ್ನು ಗೌರವಿಸುವುದರಲ್ಲಿ. ಎಂತಹ ದೊಡ್ಡ ಸಭೆಯನ್ನದರೂ ಎಷ್ಟು ಹೊತ್ತಿನವರೆಗಾದರೂ ಸರಳ ಹಾಗೂ ಪಾಂಡಿತ್ಯ ಪೂರ್ಣವಾದ ಉಪನ್ಯಾಸ ನೀಡುವ ಮೂಲಕ ರಂಜಿಸುವ ಗುಟ್ಟನ್ನು ಸಾಧಿಸಿಕೊಂಡಿರುವವರು. ಅನ್ಯರ ಕಷ್ಟಕ್ಕೆ ಮರುಗಿ ಕೈಲಾದ ಸಹಾಯ ಮಾಡಲು ಮುಂದೆ ಬರುವ ಮಾನವೀಯ ಗುಣವನ್ನು ಹೊಂದಿರುವವರು. ಇವರ ಈ ಮಾನವೀಯ ಗುಣದ ಪ್ರತಿಫಲವಾಗಿ ಸ್ಥಾಪನೆಗೊಂಡಿರುವ "ಅನಂತ ಜ್ಯೋತಿ" ಚಾರಿಟಬಲ್ ಟ್ರಸ್ಟ್ ಸಾಕ್ಷಿಯಾಗಿದೆ.

ಮೌಲ್ಯಾಧಾರಿತ ವಿಚಾರಧಾರೆಗಳನ್ನೊಳಗೊಂಡ ಕೃತಿಗಳನ್ನು ಬರೆದ ಲೇಖಕರಾಗಿ ಸಮಾಜಕ್ಕೆ ಬಹಳ ಅಚ್ಚು ಮೆಚ್ಚಿನ ವ್ಯಕ್ತಿಯಾಗಿ ಹಾಗೂ ಭಾರತೀಯ ಸಂಸ್ಕೃತಿಯ ಬಗ್ಗೆ ಅತ್ಯಂತ ಹೆಮ್ಮೆವುಳ್ಳವರು, ಗುರು ಹಿರಿಯರ ಹಾಗೂ ದೈವದ ಬಗ್ಗೆ ಅಪಾರ ಭಕ್ತಿಭಾವವುಳ್ಳವರಾಗಿದ್ದು, ಎಲ್ಲರಿಗೂ ಚಿರಪರಿಚಿತರಾಗಿರುವ ಇವರು ಬಹುಮುಖ ಪ್ರತಿಭೆಯುಳ್ಳವರು. ಇವರು ವೃತ್ತಿಯಿಂದ ಸಂದರ್ಶಕ ಪ್ರಾದ್ಯಾಪಕರಾಗಿ, ಶರೀರ ಕ್ರಿಯಾ ಶಾಸ್ತ್ರ ವಿಭಾಗದಲ್ಲಿ ಸೇವೆ ಸಲ್ಲಿಸಿರುವುದು ಮಾತ್ರವಲ್ಲದೇ ಪ್ರವೃತ್ತಿಯಿಂದ ವಾಗ್ಮಿಯಾಗಿ, ಸಾಹಿತಿಯಾಗಿ ಚಿಂತಕರಾಗಿ, ಅಂಕಣಕಾರರಾಗಿ, ಲೇಖಕರರಾಗಿ, ಶಿಕ್ಷಣ ತಜ್ಞರಾಗಿ, ಸಾಮಾಜಿಕ ಕಳಕಳಿಯುಳ್ಳವರಾಗಿ ಇವರ ಸೇವೆ ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರವಾದುದಾಗಿದೆ.

ಅಡಿ ಟಿಪ್ಪಣಿ

೧. ಅಂತಿಂತವರಲ್ಲ ನಮ್ಮ ಪ್ರೊ॥ ಡಾ॥ ಕೆ.ಪಿ. ಪುತ್ತೂರಾಯರು - ಶ್ರೀಮತಿ ಜ್ಯೋತಿ ಪುತ್ತೂರಾಯ, ಜ್ಯೋತಿ ಪ್ರಕಾಶನ ೨೦೧೪, ಪುಟ ೧

೨. ಅದೇ, ಪುಟ ೨೬

ಅಧ್ಯಾಯ – ೩

ಡಾ॥ ಕೆ.ಪಿ. ಪುತ್ತೂರಾಯರ ಸಾಹಿತ್ಯದಲ್ಲಿ ವೈಚಾರಿಕ ಚಿಂತನೆಗಳು

ಕ್ರಿಯಾಶೀಲವಾದ ಮುನುಷ್ಯನ ಮನಸ್ಸು ಪ್ರತಿ ಕ್ಷಣ ಏನನ್ನಾದರೂ ಚಿಂತಿಸುತ್ತಲೇ ಇರುತ್ತದೆ. ಯಾವುದಾದರೊಂದು ಒಳ್ಳೆಯ ವಿಷಯದ ಮೇಲೆ ಆರಂಭಗೊಂಡ ಚಿಂತನೆ ಮದ್ಯದಲ್ಲಿ ನಿಂತು ಹೋದರೆ, ಅದೊಂದು ಅಪೂರ್ಣ ಚಿಂತನೆಯಾಗುತ್ತದೆ. ಬದಲಾಗಿ ಯಾವುದೋ ಒಂದು ರೂಪದಲ್ಲಿ ಫಲವನ್ನು ಕೊಡುವಷ್ಟು ಮುಂದೆ ಸಾಗಿದರೆ ಅದೊಂದು ಪೂರ್ಣ ಚಿಂತನೆಯಾಗುತ್ತದೆ. ಅಂತಹ ಚಿಂತನೆಗಳ ಫಲಶೃತಿಯೇ "ಮನ ಮಂಥನ ಶುಭ ಚಿಂತನೆ".

ಇವರ ಈ ಕೃತಿಯನ್ನು ಕುರಿತು ಖ್ಯಾತ ಸಾಹಿತಿ ಪ್ರೊ॥ ಎಲ್.ಎಸ್. ಶೇಷಗಿರಿರಾವ್‌ರವರು ಹೀಗೆ ಹೇಳಿದ್ದಾರೆ. "ಭಾಷಣದಿಂದ ಭಗವಂತನವರೆಗೆ, ಧನದಿಂದ ಧರ್ಮದವರೆಗೆ, ಸಚಿವರಿಂದ ಸಾವಿನವರೆಗೆ, ಅಪೂರ್ವ ವ್ಯಾಪ್ತಿಯ ಲೇಖನಗಳ ಸಂಗ್ರಹ "ಮನಮಂಥನ-ಶುಭಚಿಂತನ". ಡಾ॥ ಪುತ್ತೂರಾಯರ ವಿಶಾಲ ಓದು, ವಿಸ್ತಾರದ ಅನುಭವ, ವಿವೇಚನೆ-ಇವುಗಳ ತ್ರಿವೇಣಿ ಸಂಗಮವನ್ನು ಇಲ್ಲಿ ಕಾಣಬಹುದು. ಇವರು ದೇಹದ, ಮನಸ್ಸಿನ, ಸಮಾಜದ ಮತ್ತು ಆತ್ಮದ ಆರೋಗ್ಯ-ಹೀಗೆ ಎಲ್ಲ ಬಗೆಯ ಆರೋಗ್ಯಗಳ ಸಾಧನೆಗೆ ಇಲ್ಲೊಂದು ಮಿತ್ರಸಂಹಿತೆಯನ್ನು ಸಿದ್ದಪಡಿಸಿದ್ದಾರೆ. ಆದರ್ಶಪ್ರಿಯತೆಯೊಂದಿಗೆ ವಾಸ್ತವದ, ಹೃದಯ ಮತ್ತು ಮಿದುಳು ಎರಡಕ್ಕೂ ಕೊಡಬೇಕಾದ ಪ್ರಾಧಾನ್ಯದ ಅರಿವೂ ಇದೆ. ವ್ಯಕ್ತಿ-ಕುಟುಂಬ-ಸಮಾಜ ಎಲ್ಲದರ ಪ್ರಾಮುಖ್ಯತೆ ಮತ್ತು ಪರಸ್ಪರ ಸಂಬಂಧಗಳ ವಿವೇಚನೆ ಇದೆ, ಸಮತೋಲನವಿದೆ. ಎಲ್ಲರ ಕಪಾಟುಗಳಲ್ಲಿದ್ದು ಮತ್ತೆ ಮತ್ತೆ ಕೈಗಳಿಗೆ ಬರಬೇಕಾದ ಪುಸ್ತಕ" ಎಂದಿದ್ದಾರೆ

ಪುತ್ತೂರಾಯರು ತಮ್ಮ ಕೃತಿ ಮನಮಂಥನ ಶುಭ ಚಿಂತನದಲ್ಲಿ ವ್ಯಕ್ತಿಗತವಾಗಿ, ಶೈಕ್ಷಣಿಕವಾಗಿ ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಆಧ್ಯಾತ್ಮಿಕವಾಗಿ ಹೇಗೆ ವೈಚಾರಿಕತೆಗಳನ್ನು ಬೆಳಸಿಕೊಳ್ಳಬೇಕೆಂದು ಅರ್ಥಪೂರ್ಣವಾಗಿ ತಿಳಿಸಿದ್ದಾರೆ. ಮಾನವ ಹೇಗೆ ತನ್ನ ದೈನಂದಿನ ಚಟುವಟಿಕೆಗಳನ್ನು ವಿಚಾರವಂತನಾಗಿ ನಿಭಾಯಿಸಬೇಕು ಎಂಬುದನ್ನು ತಿಳಿಸಿದ್ದಾರೆ. ಜೊತೆಗೆ ವಾಸ್ತವ ಜೀವನಕ್ಕೆ ಹತ್ತಿರವಾದಂತಹ ವಿಚಾರಧಾರೆಗಳನ್ನು ಬಹಳ ಸುಸಂಬದ್ಧವಾಗಿ ತಿಳಿಸಿದ್ದಾರೆ. ಇಲ್ಲಿ ಮಾನವ ಜೀವನದ ಮೌಲ್ಯಗಳ ಬಗೆಗೆ ಹೆಚ್ಚು ಹೊತ್ತನ್ನು ನೀಡಿದ್ದಾರೆ.

ಇವರ ಈ ಕೃತಿಯಲ್ಲಿ ವ್ಯಕ್ತಿಗತವಾದ ಭಾಗದಲ್ಲಿ ಪ್ರಮುಖವಾಗಿ ಬಾಳುವ ಕಲೆ, ವ್ಯಕ್ತಿಯಿಂದ ವ್ಯಕ್ತಿತ್ವದೆಡೆಗೆ, ಎಲ್ಲರೊಳು ಒಂದಾಗಿ, ಪರಿಶ್ರಮದಿಂದ ಮಾತ್ರ ಫಲ ಪ್ರಾಪ್ತಿ, ಮಾತಿನ ಬೆಲೆ ಮಾತನಾಡುವ ಕಲೆ, ಜೀವನದಲ್ಲಿ ಮೌಲ್ಯಗಳು ಇವುಗಳ ಬಗ್ಗೆ ಅತ್ಯುತ್ತಮವಾಗಿ ವಿಚಾರ ಚಿಂತನೆಗಳನ್ನು ಹೇಳಿದ್ದಾರೆ.

"The most important and difficult art, is the art of Living" ಎಂದಿದ್ದಾರೆ ಬಲ್ಲವರು ಅಂದರೆ ಕಲೆಗಳಲ್ಲಿ ಅತ್ಯಂತ ಶ್ರೇಷ್ಠವಾದ ಆದರೆ ಕಷ್ಟ ಸಾಧ್ಯವಾದ ಕಲೆ ಎಂದರೆ **"ಬಾಳುವ ಕಲೆ"**, ಇದನ್ನೇ ಡಿ.ವಿ.ಜಿ. ಯವರು "ಕಲೆಗಳಲ್ಲಿ ಪರಮ ಕಲೆ, ಜೀವನದ ಕಲೆ" ಎಂದರು. ಮನುಷ್ಯರಾಗಿ ಹುಟ್ಟಿದ ಮೇಲೆ, ಒಳ್ಳೆಯ ಮಾನವರಾಗಿ ಬಾಳ ಸಂತೋಷದ ಸುದೀರ್ಘ, ಸಾರ್ಥಕ ಬದುಕನ್ನು ಬಾಳುವುದು ಅತೀ ಶ್ರೇಷ್ಠ

ಆದರೆ ಬಲು ಕಷ್ಟ ಇದಕ್ಕೆ ಶ್ರಮ ಪಡಬೇಕು. ಸಾಧನೆ ಮಾಡಬೇಕು. ಬಾಳುವ ಕಲೆಯನ್ನು ಅರಿಯದವರು, ತಿಳಿದೋ, ತಿಳಿಯದೆಯೋ, ಅಜ್ಞಾನದಿಂದಲೋ ಇಲ್ಲವೇ, ಅನುಭವದ ಅಭಾವದಿಂದಲೋ, ಮಾಡುವ ತಪ್ಪುಗಳಿಂದ ಜೀವನವನ್ನೇ ಹಾಳು ಮಾಡಿಕೊಂಡು, ಸಫಲತೆಯ ಬದುಕನ್ನು ಬಾಳುವಲ್ಲಿ ವಿಫಲರಾಗುತ್ತಾರೆ ಹೀಗಾಗದಿರಲೆಂದು ಹಾರೈಸುವುದೇ ಈ ಶುಭ ಚಿಂತನೆ".[೧]

"Our Birth is Incidental, Death is inevitable but Life is Unavailable" ಎಂಬ ಮಾತಿನಂತೆ, ನಮ್ಮ ಹುಟ್ಟು ಆಕಸ್ಮಿಕ, ಸಾವು ನಿಶ್ಚಿತ ಆದರೆ ಸಾಯುವವರೆಗೆ ಬದುಕಿ ಬಾಳಲೇ ಬೇಕಾದ ಜೀವನ ಅನಿವಾರ್ಯ. ಇದು ಜೀವನದ ಒಂದು ಸತ್ಯ".[೨]

ಹೌದು ಬಾಳುವ ಕಲೆಯೂ, ಒಂದು ಪರಮ ಕಲೆಯೇ ಸರಿ. ಮಾನವನು ವಿಶಾಲ ಮನಸ್ಸಿನ ವಿಶ್ವ ಮಾನವರಾಗಿ ಬದುಕುವ ಪ್ರಯತ್ನವೇ, ಬದುಕುವ ಕಲೆಯ ಮೊದಲ ಸಿದ್ಧಾಂತವಾಗಿದೆ. ಮಾನವ ಜಾತಿ, ಮತ, ಧರ್ಮ ಎಂಬ ಕಟ್ಟುಪಾಡುಗಳನ್ನು ಹಾಕಿಕೊಂಡು ಬೆಳೆದು, ಕೊನೆಗೆ ಈ ಜಗತ್ತಿನಿಂದಲೇ ಮರೆಯಾಗುತ್ತೇವೆ. ಇದು ಒಂದು ಬದುಕಲ್ಲ. ಎಲ್ಲರೊಡನೆ "ಸಮಬಾಳು, ಸಮಪಾಲು" ತತ್ವವನ್ನು ಅನುಸರಿಸಿ ಬಾಳ ಬದುಕುವುದೇ ಜೀವನದ ಕಲೆಯಾಗಿದೆ. ದಾಸವಾಣಿಯಂತೆ 'ಮಾನವ ಜನ್ಮ ದೊಡ್ಡದು ಹಾಳು ಮಾಡಿಕೊಳ್ಳಬೇಡಿ ಹುಚ್ಚಪ್ಪಗಳಿರ' ಎಂದು ಹೇಳಿರುವುದು ಸರ್ವಸಮ್ಮತವಾಗಿದೆ.

ನಾವ್ಯಾರು ಈ ಭೂಮಿ ಮೇಲೆಯೇ ಶಾಶ್ವತವಾಗಿ ಇರೋಕೆ ಬಂದವರು ಅಲ್ಲ, ಅದು ಸಾಧ್ಯವೂ ಇಲ್ಲ. 'ಜಾತಸ್ಯ ಮರಣಂ ದ್ರುವಂ' ಎಂಬ ಸೂಕ್ತಿಯಂತೆ ಹುಟ್ಟಿದ ಪ್ರತಿಯೊಂದು ಜೀವಿಗೂ ಸಾವು ನಿಶ್ಚಿತ. ಇದು ಕಟ್ಟಿಟ್ಟ ಬುತ್ತಿ. ಇದನ್ನು ಅರಿತು, ಇದರೊಡನೆ ಅರಿತು ಬೆರೆತು ನಡೆಯುವುದೇ ಜೀವನದ ಕಲೆಯಾಗಿದೆ. ಹಾಗೆಯೇ ಸಾವು ಶತಸಿದ್ಧ ಎಂದು, ಸತ್ತವರಂತೆ ಬಾಳಲು ಸಾಧ್ಯವೇ, ಬಾಳಬಾರದು "ಈಸಬೇಕು ಇದ್ದು ಜಯಿಸಬೇಕು" ಎಂಬ ನಾಣ್ನುಡಿಯಂತೆ ಎಲ್ಲವನ್ನು ನಿಭಾಯಿಸಿಕೊಂಡು ಬಾಳ ಬದುಕಿ ಜೀವನ ಸವೆಸುವುದೇ, ಸಾರ್ಥಕ ಬದುಕಾಗಿಸುವುದೇ ಜೀವನದ ಅತ್ಯದ್ಭುತ ಕಲೆಯಾಗಿದೆ ಎಂದಿದ್ದಾರೆ.

ಬದುಕುವ ಕಲೆಯನ್ನು ಕರಗತ ಮಾಡಿಕೊಳ್ಳಲು ಕೆಲವು ಅಂಶಗಳನ್ನು ಅನುಸರಿಸಬೇಕು, ಆಗಲೇ ಬದುಕುವ ಕಲೆ ಕರಗತವಾಗುತ್ತವೆ.

- ಬಾಳುವ ಕಲೆಗೆ, ಬಾಳಿನ ಗುರಿಗೆ ಒಂದು ಕಾರ್ಯ ಸೂಚಿ ಇರಬೇಕು.
- ಸಾಧಿಸುವ ಛಲ ಇರಬೇಕು.
- ಸಮಯವನ್ನು ವ್ಯರ್ಥವಾಗಿ ಕಳೆಯಬಾರದು.
- ಬೇರೆಯವರೊಂದಿಗೆ ಇಲ್ಲಸಲ್ಲದ ವಿಚಾರಗಳಿಗೆ ತುಲನೆ ಮಾಡಿಕೊಳ್ಳುವುದನ್ನು ನಿಲ್ಲಿಸಬೇಕು.

ವ್ಯಕ್ತಿಗತವಾಗಿ ಇನ್ನೂ ಅನೇಕ ಲೇಖನಗಳನ್ನು ಬರೆದಿದ್ದಾರೆ. ವ್ಯಕ್ತಿಯಿಂದ ವ್ಯಕ್ತಿತ್ವದೆಡೆಗೆ ಇದರಲ್ಲಿ ಒಬ್ಬ ಮಾನವನಲ್ಲಿ ವ್ಯಕ್ತಿತ್ವ ವಿಕಸನ ಹೇಗೆ ಸಾಧ್ಯವಾಗುತ್ತದೆ ಎಂಬುದನ್ನು ತಿಳಿಸಲಾಗಿದೆ. ವ್ಯಕ್ತಿಯಿಂದ ವ್ಯಕ್ತಿಯೆಡೆಗೆ, ವ್ಯಕ್ತಿಯಿಂದ ವ್ಯಕ್ತಿತ್ವದೆಡೆಗೆ ಹೇಗೆ ಸಾಗಿ ಬರುತ್ತದೆ ಬದುಕು ಎಂಬುದನ್ನು ಇಲ್ಲಿ ಗಮನಿಸಬಹುದು. ಸಾಮಾನ್ಯ ವ್ಯಕ್ತಿಯೊಬ್ಬನು ಅಸಾಮಾನ್ಯ ವ್ಯಕ್ತಿಯಾಗಬೇಕಾದಲ್ಲಿ ಅವನಲ್ಲಿ ವಿಶೇಷವಾದ

ಗುಣಗಳಿರಬೇಕಾಗುತ್ತದೆ. ಓರ್ವ ವ್ಯಕ್ತಿಯು ಸರ್ವತೋಮುಖವಾಗಿ ಬೆಳೆದು ಬಂದು ಅಪೂರ್ವ ವ್ಯಕ್ತಿತ್ವವಾಗಿ ಪರಿವರ್ತನೆಗೊಳ್ಳಬೇಕಾದರೆ ಎಲ್ಲಾ ದಿಸೆಗಳಲ್ಲಿ ಅವನ ಬೆಳವಣಿಗೆ ಆಗಿರಬೇಕು, ಅವುಗಳೆಂದರೆ, ಶಾರೀರಿಕ ಬೆಳವಣಿಗೆ (Physical Development), ಮಾನಸಿಕ ಬೆಳವಣಿಗೆ (Mental Development), ನೈತಿಕ ಬೆಳವಳಣಿಗೆ (Moral Development), ಸಾಂಸ್ಕೃತಿಕ ಬೆಳವಣಿಗೆ (Cultural Development), ಸಾಮಾಜಿಕ ಬೆಳವಣಿಗೆ (Social Development), ಆಧ್ಯಾತ್ಮಿಕ ಬೆಳವಣಿಗೆ (Spiritual Development), ಈ ಎಲ್ಲಾ ಬೆಳವಣಿಗೆಗಳ ಜೊತೆಗೆ ಅಂಗಾಂಗ ಪುಷ್ಟಿ, ವಿದ್ವತ್ತು, ಗಾಂಭೀರ್ಯ, ಕುಶಲತೆ, ಧೈರ್ಯ, ವಾಕ್ ಚಾತುರ್ಯ ಹಾಗೂ ಸೃಜನಶೀಲತೆ ಇವುಗಳಿಂದ ವ್ಯಕ್ತಿಯು ವ್ಯಕ್ತಿತ್ವವನ್ನು ಸಾಧಿಸಬಹುದಾಗಿದೆ. ಒಟ್ಟಾರೆಯಾಗಿ ಸಕಾರಾತ್ಮಕ ಮನೋಭಾವದಿಂದ (Positive Attitude) ವ್ಯಕ್ತಿತ್ವವನ್ನು ರೂಢಿಸಿಕೊಂಡು, ವ್ಯಕ್ತಿಯಿಂದ ವ್ಯಕ್ತಿತ್ವದೆಡೆಗೆ ಸಾಗುವ ಪ್ರಯತ್ನ ಸದಾ ಇರಲಿ ಎನ್ನುತ್ತಾರೆ.

ಎಲ್ಲರೊಳು ಒಂದಾಗಿ ಬಾಳಬೇಕು ಆಗಲೇ ಈ ಜೀವನ ಸಾರ್ಥಕವೆನಿಸುತ್ತದೆ. ಇಲ್ಲದೆ ಹೋದರೆ ಬದುಕು ನಿಸ್ತೇಜವೆನಿಸುತ್ತದೆ. ಅದಕ್ಕಾಗಿಯೇ ಡಿ.ವಿ.ಜಿ ಯವರು ತಮ್ಮ ಮಂಕುತಿಮ್ಮನ ಕಗ್ಗದಲ್ಲಿ ಹೀಗೆ ಹೇಳಿದ್ದಾರೆ.

"ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು ।
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೇ ॥
ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ ।
ಎಲ್ಲರೊಳಗೊಂದಾಗು ಮಂಕುತಿಮ್ಮ ॥" [೩]

ಮನುಷ್ಯ ತನ್ನ ಸ್ವಾರ್ಥವನ್ನು ಬಿಟ್ಟು ಎಲ್ಲರಿಗೂ ಎಲ್ಲ ರೀತಿಯಲ್ಲೂ ಉಪಕಾರಿಯಾಗಿ ಸಾರ್ಥಕ ಬದುಕನ್ನು ನಡೆಸಬೇಕು, ಇದೇ ಸಮರಸದ ಜೀವನ ಎಂದು ಡಿ.ವಿ.ಜಿ. ಯವರು ತಮ್ಮ ಕಗ್ಗದಲ್ಲಿ ಹೇಳಿದ್ದಾರೆ. ತಾತ್ಪರ್ಯವೇನೆಂದರೆ ತಾರತಮ್ಯ ಮಾಡದೆ ಎಲ್ಲರೊಳಗೆ ಒಂದಾಗಿ ಬಾಳಬೇಕೆನ್ನುವುದೇ ಜೀವನದ ಸಾರವಾಗಿದೆ. ಕಷ್ಟದಲ್ಲಿರುವವರಿಗೆ ಬೆಲ್ಲ ಸಕ್ಕರೆಯಂತೆ ನಾವು ನಡೆದುಕೊಳ್ಳಬೇಕು ಎನ್ನುತ್ತಾರೆ.

ಎಲ್ಲರೊಳು ಒಂದಾಗಿ ಮೌಲ್ಯಧಾರಿತ ಜೀವನವನ್ನು ಕಟ್ಟಿಕೊಳ್ಳಬೇಕು. ಮೌಲ್ಯಗಳನ್ನು ಆಚರಿಸಿದರೇನೇ ವ್ಯಕ್ತಿಗೂ ಸಮಾಜಕ್ಕೂ ಒಳಿತು. ಜೀವನದ ಮೌಲ್ಯಗಳನ್ನು ಇತರರನ್ನು ಮೆಚ್ಚಿಸಲು ಅಲ್ಲದೇ ಸ್ವಯಂ ಪ್ರೇರಿತವಾಗಿ ನಮ್ಮ ಮೆಚ್ಚುಗೆಗೆ, ನಮಗೆ ಪೂರಿತವಾಗುವಂತೆ ಇರಬೇಕು. ಪರಿಶ್ರಮದಿಂದ ಮಾತ್ರ ಯಶಸ್ಸು ಸಾಧ್ಯ. ನಾಣ್ಣುಡಿಯಂತೆ "ಸತತ ಪರಿಶ್ರಮವೇ ಸಾಧನೆಯ ಫಲ" ಎಂಬಂತೆ ನಿರಂತರವಾಗಿ ಶ್ರಮಿಸುವಾಗ, ಫಲ ತತ್‌ಕ್ಷಣಕ್ಕೆ ಸಿಗದೇ ಇರಬಹುದು. ಆದರೆ ಮುಂದೊಂದು ದಿನ ಫಲ ನೀಡುವುದಂತು ಶತಃ ಸಿದ್ಧ. ಪರಿಶ್ರಮದ ಹಿಂದೆ ತ್ಯಾಗದ ಸಂಕೇತವೂ ಇದೆ. ಯಶಸ್ಸುಗಳ ಹಿಂದೆ ಪ್ರಾಮಾಣಿಕ ಪರಿಶ್ರಮವು ಮಹತ್ತರವಾದ ಪಾತ್ರವನ್ನು ವಹಿಸಿರುತ್ತದೆ. ಅಂದರೆ ನಿಷ್ಠೆಯಿಂದ ಮಾಡುವ ಪ್ರಾಮಾಣಿಕ ಕೆಲಸಗಳಿಗೆ ಯಶಸ್ಸು ಸಾಧ್ಯವಾಗುತ್ತದೆ. ಆದ್ದರಿಂದ ಪರಿಶ್ರಮದಿಂದ ಮಾತ್ರ ಫಲಪ್ರಾಪ್ತಿ. ಶ್ರಮಿಕನಾದವನು ಯಾವಾಗಲೂ ಜಯಶೀಲನಾಗಿಯೇ ಇರುತ್ತಾನೆ ಎಂದಿದ್ದಾರೆ.

ಪುತ್ತೂರಾಯರವರು ಶೈಕ್ಷಣಿಕ ಹಾಗೂ ಸಾಂಸ್ಕೃತಿಕವಾಗಿಯೂ ಹಲವಾರು ಮೌಲ್ಯಯುತವಾದ ವಿಚಾರ, ವೈಚಾರಿಕ ಚಿಂತನೆಗಳನ್ನು ನೀಡಿದ್ದಾರೆ, ಸಂಪೂರ್ಣ ಶಿಕ್ಷಣದ ರೂಪುರೇಷೆಗಳು, ಜ್ಞಾಪಕ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದು ಹೇಗೆ ? ಪರಿಕ್ಷಾ ಸಿದ್ಧತೆ ಹಾಗೂ ಪರೀಕ್ಷೆಗಳನ್ನು ಎದುರಿಸುವ ಬಗ್ಗೆ, ಆದರ್ಶ ಗುರು, ಆದರ್ಶ ವಿದ್ಯಾರ್ಥಿ, ಗುರು-ಶಿಷ್ಯರ ನಡುವಣ ಸಂಬಂಧ ಈ ರೀತಿಯ ಶೈಕ್ಷಣಿಕ ವಿಚಾರ ಚಿಂತನೆಗಳನ್ನು ನೀಡಿದ್ದಾರೆ. ಹಾಗೆಯೇ ಸಾಂಸ್ಕೃತಿಕವಾಗಿ ಕಲೋಪಾಸನೆ ಮತ್ತು ಸಂಗೀತ ಸಾಮ್ರಾಜ್ಯ ಇವುಗಳ ಬಗ್ಗೆಯು ವೈಚಾರಿಕತೆಯನ್ನು ಹೇಗೆ ಅಳವಡಿಸಿಕೊಳ್ಳಬೇಕು ಎಂಬುದನ್ನು ಹೇಳಿದ್ದಾರೆ.

ಸಾಂಸಾರಿಕ ಬಗ್ಗೆಯೂ, ಸಂಗಾತಿಯ ಆಯ್ಕೆ, ವಿವಾಹಗಳ ಬಗ್ಗೆ, ಆದರ್ಶ ದಂಪತಿಗಳು ಎಂದೆನಿಸಿಕೊಳ್ಳುವುದು ಹೇಗೆ ? ಸಂಸಾರ ಸಾಗರವನ್ನು ಈಜಿ ದಡ ಸೇರುವುದು ಹೇಗೆ, ಸಂಸಾರದ ಗುಟ್ಟು, ಹೆತ್ತವರ ಹೊಣೆಗಾರಿಕೆ, ಇವುಗಳ ಬಗ್ಗೆ ಮೌಲ್ಯಯುತವಾದಂತಹ ವಿಚಾರಧಾರೆಗಳನ್ನು, ಪ್ರಮುಖವಾದ ಅಂಶಗಳನ್ನು ತಿಳಿಸಲಾಗಿದೆ. ಇವುಗಳೆಲ್ಲವನ್ನು ನಮ್ಮ ಜೀವನಕ್ಕೆ ಅಳವಡಿಸಿಕೊಂಡಿದ್ದೆ ಆದರೆ ಸಾಂಸಾರಿಕ ಜೀವನದಲ್ಲಿ ಏಳು ಬೀಳುಗಳೇ ಇಲ್ಲದೇ, ನಿರ್ಭಯವಾಗಿ ಜೀವನವನ್ನು ಸಾಗಿಸಬಹುದು. ಸಾಂಸಾರಿಕ ಜೀವನಕ್ಕೆ ಸಂಬಂಧಿಸಿದಂತೆ 'ಸುಖ ಸಂಸಾರಕ್ಕೆ ಸರಳ ಸೂತ್ರಗಳು' ಎಂಬ ಧ್ವನಿ ಸಾಂದ್ರಿಕೆಯನ್ನು "ಶುಭಚಿಂತನ" ಎಂಬ ಶೀರ್ಷಿಕೆಯಡಿ ಇತ್ತೀಚೆಗೆ ಹೊರತಂದಿರುವುದು ಹೆಮ್ಮೆಯ ವಿಷಯವಾಗಿದೆ. ಇದರಲ್ಲಿ ಸುಖ ಸಂಸಾರಕ್ಕೆ ಬೇಕಾದಂತಹ ಸರಳ ಸೂತ್ರಗಳನ್ನು ವಿವರಿಸಿ ಹೇಳಿದ್ದಾರೆ.

ಮನಮಂಥನ ಶುಭಚಿಂತನ ಡಾ॥ ಕೆ.ಪಿ. ಪುತ್ತೂರಾಯರವರ ಅನುಭವ ಜನ್ಯ ಕೃತಿ ಇದನ್ನು ಕುರಿತು "ಇದು ಅನುಸರಣೆಗೆ ಮಾರ್ಗದರ್ಶಿ, ಜನ ಮನ್ನಣೆಯ ದೂರದರ್ಶಿ ಇದು ಓದಿ ಕಲಿಯಬೇಕಾದ ಅನೇಕ ಅಂಶಗಳನ್ನು ಬಿಂಬಿಸುವ ಒಂದು ಅನುಭವ ಕೋಶ" ಎಂದು ಶಬ್ದಸಾಗರ ಪ್ರೊ॥ ಜಿ. ವೆಂಕಟಸುಬ್ಬಯ್ಯನವರು ಶ್ಲಾಘಿಸಿದ್ದಾರೆ.

ಇವರ ಈ ಕೃತಿಯೂ ಸಮಾಜದ ಎಲ್ಲಾ ವಲಯಗಳ ಮೇಲೆ ತನ್ನದೇ ಆದಂತಹ ಬೆಳಕನ್ನು ಚೆಲ್ಲತ್ತದೆ. ಶೈಕ್ಷಣಿಕ ರಂಗದಿಂದ ಹಿಡಿದು ಆಧ್ಯಾತ್ಮಿಕ ರಂಗದವರೆಗೂ ಮಹತ್ತರವಾದ ಪ್ರಭಾವವನ್ನು ಬೀರಿದೆ. ಹಾಗೆಯೇ ಸಾಮಾಜಿಕವಾಗಿ ಅವಿಭಕ್ತ ಕುಟುಂಬಗಳ ಬಗ್ಗೆ ಮನ ಮುಟ್ಟುವಂತೆ ಹೇಳಲಾಗಿದೆ. Generation Gap (ತಲೆ ಮಾರುಗಳೊಳಗಿನ ಅಂತರಗಳು) ಅಂದರೆ ಹಿಂದಿನ ತಲೆಮಾರಿಗೂ, ಇಂದಿನ ತಲೆ ಮಾರನ್ನು ತುಲನೆ ಮಾಡಿ ನೋಡಲಾಗಿದೆ. ಹಿಂದಿನ ಕಾಲದಲ್ಲಿದ್ದಂತಹ ಪ್ರೀತಿ-ವಾತ್ಸಲ್ಯ, ಭಾಂದವ್ಯ, ಹಿರಿಯರಿಗೆ ಮನ್ನಣೆ ಹಾಗೂ ಇಂದಿನ ಕಾಲದಲ್ಲು ಇರುವಂತಹ ಸಂಬಂಧಗಳಿಗೂ ತುಲನೆ ಮಾಡಲಾಗಿದೆ. ಇಂದಿನ ಜನ ಕೆಲಸದ ಒತ್ತಡದಿಂದ ಹಿರಿಯರನ್ನು ಮಾತನಾಡಿಸುವ ಗೋಜಿಗೂ ಹೋಗುವುದಿಲ್ಲ ಇದರಿಂದ ಹಿರಿಯ ಜೀವಗಳು ಹೇಗೆ ಸ್ವೀಕರಿಸುತ್ತವೆ ಎಂಬುದನ್ನೇ Generation Gap ನಲ್ಲಿ ಹೇಳಿದ್ದಾರೆ. ಹಾಗೆಯೇ ತಾರುಣ್ಯಾವಸ್ಥೆಯಲ್ಲಿ ಅಂದರೆ ಹದಿಹರೆಯದವರಲ್ಲಿ ಉಂಟಾಗುವ ಶಾರೀರಿಕ, ಲೈಂಗಿಕ, ಮಾನಸಿಕ ಬದಲಾವಣೆಗಳ ಬಗ್ಗೆ ವೈಚಾರಿಕವಾಗಿ, ವೈಜ್ಞಾನಿಕವಾಗಿ ಹೇಳಿದ್ದಾರೆ. ಈ ಸಮಯದಲ್ಲಿ ತಾರುಣ್ಯಾವಸ್ಥೆಯಲ್ಲಿ ಆಗುವ ಅವಘಡಗಳನ್ನು ಹೇಗೆ ನಿವಾರಿಸಿಕೊಳ್ಳಬೇಕೆಂದರೆ ಸಮಯೋಚಿತವಾದ ಬುದ್ಧಿವಾದಗಳಿಂದಲೂ, ಪ್ರೀತಿ ವಿಶ್ವಾಸಗಳಿಂದ ಮಾತ್ರ ಎಲ್ಲವನ್ನು ಬಗೆ ಹರಿಸಿ, ಮುಂದಾಗುವ ಆಘಾತಗಳಿಂದ ರಕ್ಷಿಸಲು ಸಾಧ್ಯ ಎನ್ನುತ್ತಾರೆ.

ಮಾನವ ತನ್ನ ಜೀವನದಲ್ಲಿ ಸೋತಾಗ ಆತ ಯೋಚಿಸುವುದೇ ಆತ್ಮಹತ್ಯೆ. ಅವಮಾನ, ಅಪಮಾನಗಳಿಂದ, ತಪ್ಪಿಸಿಕೊಳ್ಳಲು ಆತ ಹುಡುಕುವ ದಾರಿ ಇದೊಂದೆ. ಆತ ಆತ್ಮಹತ್ಯೆ ಕಡೆ ಯೋಚಿಸದೇ ಆತ್ಮ ವಿಶ್ವಾಸದತ್ತ ಸಾಗುವುದೇ ಲೇಖನದ ಆಶಯವಾಗಿದೆ. ನಿವೃತ್ತಿ ಜೀವನ ಹೇಗಿರಬೇಕು ? ವೃದ್ಧಾಪ್ಯ ಬಂದಾಗ ಜೀವನವನ್ನು ಹೇಗೆ ಸ್ವೀಕರಿಸಬೇಕು ? ಯಾವುದೇ ವೃತ್ತಿಯಲ್ಲಿದ್ದರೂ ಇಂದಲ್ಲ ನಾಳೆ ನಿವೃತ್ತಿಯಾಗಲೇ ಬೇಕು ಇದು ಶತಸಿದ್ಧ "Appointment may be uncertain but retirement is certain" ವೃತ್ತಿಯಿಂದ ನಿವೃತ್ತಿಯಾದಾಗ ಸಾಮಾನ್ಯ ಬದಲಾವಣೆಗಳು ಸರ್ವೇಸಾಮಾನ್ಯವಾಗಿದೆ. ಶಾರೀರಿಕವಾಗಿ, ಮಾನಸಿಕವಾಗಿ ಲವಲವಿಕೆಗಳು ಕುಂಠಿತವಗಿರುತ್ತವೆ. ಹಾಗೆಯೇ ಸ್ಥಾನ ಮಾನಗಳು ಇಲ್ಲವಾದಾಗ ತಕ್ಷಣವಾಗಿ ಸಾಮಾನ್ಯ ಬಾಳಿಗೆ ಅಷ್ಟು ಸುಲಭವಾಗಿ ಹೊಂದಿಕೊಳ್ಳಲು ಸಾಧ್ಯವಿಲ್ಲ. ಆಧಾಯ ಪಿಂಚಣಿ ಮಟ್ಟಕ್ಕೆ ಇಳಿದಾಗ ಆರ್ಥಿಕ ಸ್ಥಿತಿ ಕಡಿಮೆಯಾಗುತ್ತದೆ. ಇದೆಲ್ಲವೂ ಮಾನಸಿಕವಾಗಿ ಅಹಿತಕರ ವಾತಾವರಣವನ್ನುಂಟು ಮಾಡುತ್ತದೆ. ಆದರೂ ವಯೋ ನಿವೃತ್ತಿಯಿಂದ ನಂತರ ತಮ್ಮ ಮನಸ್ಸನ್ನು ಆಧ್ಯಾತ್ಮಿಕ ಮತ್ತು ಧಾರ್ಮಿಕ ವಿಷಯಗಳ ಬಗ್ಗೆ ತಿರುಗಿಸಿ ತಮ್ಮ ಮನಸ್ಸನ್ನು ಹತೋಟಿಗೆ ತಂದುಕೊಂಡು, ಮುಂದಿನ ಜೀವನವನ್ನು ಸಂತೋಷಮಯವಾಗಿ ಸವೆಸುವುದು ಮಾನವ ಜೀವನದ ಬಹು ಮುಖ್ಯ ಉದ್ದೇಶವಾಗಿದೆ. ನಿವೃತ್ತಿಯ ನಂತರ ಆರೋಗ್ಯ ಕೆಟ್ಟು ಹೋಗಬಹುದು, ಮಕ್ಕಳು ಕೈ ಬಿಡಬಹುದು, ಮಕ್ಕಳು ವಿದೇಶದಲ್ಲಿ ನೆಲೆಸಿರಬಹುದು ಹೀಗೆ ಹತ್ತು ಹಲವು ಸಂದರ್ಭಗಳನ್ನು ಮುಂಚಿತವಾಗಿಯೇ ಅರಿತುಕೊಂಡು ಬದುಕುವ ಬಗೆಯನ್ನು ರೂಪಿಸಿಕೊಂಡಿರಬೇಕು. ಜೀವನವನ್ನು ಅರ್ಥಪೂರ್ಣವಾಗಿ ಕಳೆಯುವುದೇ ನಿವೃತ್ತಿ ಹೊಂದಿದವರ ವೃತ್ತಿಯಾಗಿರಬೇಕು. ಹಾಗೆಯೇ ವೃದ್ಧಾಪ್ಯ ಬಂದಾಗಲೂ ಎಲ್ಲರೊಡಗೂಡಿ ಹರ್ಷದಾಯಕವಾದ ಜೀವನವನ್ನು ನಡೆಸಬೇಕು ವೃದ್ಧಾಪ್ಯ ಶಾಪವಲ್ಲ, ಪ್ರಯತ್ನ ಪಟ್ಟರೆ ಎಲ್ಲರೂ ಸುಂದರವಾಗಿ ಮಾರ್ಪಡಿಸಿಕೊಳ್ಳಬಲ್ಲ ನಮ್ಮ ಬದುಕಿನ ಕೊನೆಯ ಅವಸ್ಥೆ ಎಂದು ತಿಳಿದು ಬಾಳಿ ಬದುಕಬೇಕು. ವೃದ್ಯಾಪ್ಯದಲ್ಲಿ ಆಧ್ಯಾತ್ಮಿಕತೆಯತ್ತ ವಾಲಿ, ಉತ್ಸಾಹದಿಂದ ಬಾಳಿ ಬದುಬೇಕು. ಇದೇ ನಿವೃತ್ತಿಯ ನಂತರದ ಸಂತೃಪ್ತ ಬದುಕು ಎನ್ನಲಾಗುತ್ತದೆ.

ರಾಜಕೀಯವಾಗಿಯೂ ಕಿವಿ ಮಾತುಗಳನ್ನು ಹೇಳಿದ್ದಾರೆ. ರಾಮರಾಜ್ಯ ಎಂದರೇನು ? ನಮ್ಮ ಚುನಾವಣೆಗಳು ಎಷ್ಟು ಅರ್ಥಪೂರ್ಣ ? ಹೀಗೆ ಹತ್ತು ಹಲವು ಮಜಲುಗಳಲ್ಲಿ ಈ ವಲಯಕ್ಕು ಸಹ ವೈಚಾರಿಕ ಚಿಂತನೆಗಳನ್ನು ಹೇಳಲಾಗಿದೆ. ಹಾಗೆಯೇ ಮಾನವ ತನ್ನ ಜೀವನದಲ್ಲಿ ಆಧ್ಯಾತ್ಮಿಕತೆಯತ್ತಲೂ ವಾಲಬೇಕು. ಮನಸ್ಸೆಂಬ ಹೂ ದೋಟವನ್ನು ಸ್ವಚ್ಚಗೊಳಸವ ಕ್ರಿಯೆಯೇ ಆದ್ಯಾತ್ಮ. ಹಾಗೆಯೇ ಮಂತ್ರಗಳ ಮಹತ್ವ ಜೀವನದ ಸತ್ಯ ಮಿಥ್ಯೆಗಳು, 'ಧನಬಲ' ಇತಿಇತಿಗಳು, ಪ್ರಕೃತಿಯಿಂದ ಪಡೆಯುವ ಸೂಕ್ಷ್ಮ ಸಂದೇಶಗಳು, ಹೇ ಭಗವಂತ ನೀನೆಲ್ಲರುವೇ ? "ಸಾವನ್ನು ಒಪ್ಪಿಕೊಳ್ಳಲು ಸಿದ್ಧವಾಗಿರಿ" ಎಂಬುದನ್ನು ಆಧ್ಯಾತ್ಮಿಕ ವಿಭಾಗದಲ್ಲಿ ಸುವಿಸ್ತಾರವಾಗಿ ತಿಳಿಸಿದ್ದಾರೆ. ಎಲ್ಲದರಲ್ಲೂ ವೈಚಾರಿಕತೆಯನ್ನು ಮೆರೆದಿದ್ದಾರೆ.

ಒಟ್ಟಾರೆಯಲ್ಲಿ ಮನಮಂಥನ ಶುಭ ಚಿಂತನದಲ್ಲಿ ವೈಚಾರಿಕತೆ ಎದ್ದು ಕಾಣುತ್ತಿದೆ. ಇಂದಿನ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ಸಂಶೋಧನೆಯ ಕುತೂಹಲವಿದೆ, ನಮಗಿರಬೇಕಾದ ಸಾಂಸ್ಕೃತಿಕ ಎಚ್ಚರದ ಕಾಳಜಿ, ಕಳಕಳಿಯಿದೆ. ಎಲ್ಲಕ್ಕಿಂತಲೂ ಹೆಚ್ಚಾಗಿ ನಮ್ಮನ್ನು ಕಾಡುತ್ತಿರುವ ಎಲ್ಲಾ ಸಮಸ್ಯೆಗಳಿಗೆ ಪರಿಹಾರದ ಹಾದಿಯಿದೆ. ಹಾಗೆಯೇ ಇದರಲ್ಲಿ ಆತುರ, ಆಸಕ್ತಿಗಳಿವೆ, ಮೌಲ್ಯ ಪ್ರಜ್ಞೆ ಮಾನವೀಯತೆಯ ಆದರ್ಶ, ನೈತಿಕತೆಯ ಎಚ್ಚರ ಎಲ್ಲವೂ ಡಾ|| ಕೆ.ಪಿ. ಪುತ್ತೂರಾಯರವರ ಈ ಅನುಭವ ಜನ್ಯ ಕೃತಿಯಲ್ಲಿ ಎದ್ದು

ಕಾಣುತ್ತಿದ್ದು ಸಮಸ್ಯೆಗಳಿಗೆ ಕ್ಷ-ಕಿರಣ ಹಿಡಿದಂತೆ ತೋರುವ, ಅರ್ಥಪೂರ್ಣವೆನಿಸುವ ಒಂದು ಸಮಯೋಚಿತ ಕೃತಿ ಎಂದರೆ ತಪ್ಪಾಗಲಾರದು. ಇವರ ಈ ಬರವಣಿಗೆಯಲ್ಲಿ ಸ್ವಾರಸ್ಯವಿದೆ ಔಚಿತ್ಯವಿದೆ, ಗೆಲುವಿದೆ. ಇದರಲ್ಲಿರುವ ಅಂಶಗಳನ್ನು ಅಳವಡಿಸಿಕೊಂಡು ಬದುಕನ್ನು ಹಸನುಗೊಳಿಸಿಕೊಳ್ಳಬೇಕು ಅದೆ ನಿಜವಾದ ಸಾರ್ಥಕ ಬದುಕು ಎಂದೆನಿಸುತ್ತದೆ.

ಸಭ್ಯತೆ-ಸೌಜನ್ಯ ಕೃತಿಯನ್ನು ಕುರಿತು 'ಪಾಜಾವರ ಮಠದ ಶ್ರೀ ಶ್ರೀ ವಿಶ್ವೇಶ್ವರ ತೀರ್ಥ ಸ್ವಾಮೀಜಿಯವರು', "ನಮ್ಮ ಸಂಸ್ಕೃತಿಯ ಉತ್ತಮ ಅಂಶಗಳನ್ನು, ಪಾಶ್ಚಾತ್ಯರ ಜೀವನದಲ್ಲಿ ಕಂಡುಬರುವ ಒಳ್ಳೆಯ ಅಂಶಗಳನ್ನು ಜೋಡಿಸಿ, ನಾವೆಲ್ಲರೂ ಅನುಸರಿಸಬಹುದಾದ ಉತ್ತಮ ಜೀವನ ಶ್ರಮದ ಬಗ್ಗೆ ಸರಿಯಾದ ಮಾರ್ಗದರ್ಶನವನ್ನು ಬೆಳಸುವುದು ಹಾಗೂ ಒಮ್ಮೆ ಆತ್ಮ ನಿರೀಕ್ಷಣೆಯನ್ನು ಮಾಡಿಕೊಂಡು ತಮ್ಮ ಓರೆಕೋರೆಗಳನೆಲ್ಲ ಸರಿಪಡಿಸಿಕೊಂಡು ಉತ್ತಮ ವ್ಯಕ್ತತ್ವವನ್ನು ರೂಪಿಸಿಕೊಳ್ಳುವಂತೆ ಲಭ್ಯವಾಗುತ್ತವೆ" ಎಂದಿದ್ದಾರೆ.

ಇತ್ತೀಚಿನ ದಿನಗಳಲ್ಲಿ, ಜನಗಳಲ್ಲಿ ಮುಖ್ಯವಾಗಿ ಯುವ ಪೀಳಿಗೆಯವರಲ್ಲಿ ಸಭ್ಯತೆ-ಸೌಜನ್ಯಗಳು ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗುತ್ತಿರುವುದು ಎಲ್ಲರೂ ಗಮನಿಸುತ್ತಿರುವ ಅಂಶ. ಹೀಗಾಗಲು ಸಂಸ್ಕಾರದ ಕೊರತೆಯೇ ಮೂಲ ಕಾರಣವಾಗಿದೆ. ಎಲ್ಲರೂ ಸುರಶಿಕ್ಷಿತರಾಗುತ್ತಿದ್ದಾರೆ ಆದರೆ ಸುಸಂಸ್ಕೃತರಾಗುತ್ತಿಲ್ಲ. ಶಿಕ್ಷಣ ಮತ್ತು ಸಂಸ್ಕಾರ ಭಿನ್ನ ಭಿನ್ನವಾದವು ಆದರೆ ಒಂದಕ್ಕೊಂದು ಪೂರಕ ಪ್ರಕ್ರಿಯೆಗಳೇ ಅಲ್ಲವೇ ಸಂಸ್ಕಾರವಿಲ್ಲದ ಶಿಕ್ಷಣ, ಶಿಷ್ಟಾಚಾರವಿಲ್ಲದ ಜೀವನ ಅಪೂರ್ಣ ಹಾಗೂ ಅಪಾಯಕಾರಿಯೂ ಹೌದು ಎಂದಿದ್ದಾರೆ.

ಶಿಷ್ಟಾಚಾರ ಮತ್ತು ಸಂಸ್ಕಾರದ ಪ್ರತಿ ರೂಪಗಳಾಗಿರುವ ಸಭ್ಯತೆ ಹಾಗೂ ಸೌಜನ್ಯಗಳ ಕೊರತೆಯಿಂದ ಆಗುವ ನೋವು, ಹಿಂಸೆ, ಅನಾನುಕೂಲತೆ, ಅಸಮಧಾನ, ಅವಘಡ ಇವುಗಳೆಲ್ಲದಕ್ಕೂ ಎಣೆಯೇ ಇಲ್ಲ. ಪ್ರತಿಯಾಗಿ ಒಳ್ಳೆಯ ಸಭ್ಯತೆ-ಸೌಜನ್ಯಗಳು ನಮ್ಮ ವ್ಯಕ್ತಿತ್ವ ವಿಕಸನಕ್ಕು ನೇರವಾಗಿ ಎಲ್ಲೆಡೆ ಸುಖ-ಶಾಂತಿ ನೆಮ್ಮದಿಗಳನ್ನೇ ಹರಡುತ್ತದೆ. ಸಭ್ಯತೆ-ಸೌಜನ್ಯಗಳನ್ನು ಹುಟ್ಟುಹಾಕಲು, ಮಕ್ಕಳಿಗೆ ಬಾಲ್ಯದಿಂದಲೇ ಸಂಸ್ಕಾರದ ಚುಚ್ಚುಮದ್ದನ್ನು ನೀಡಬೇಕು. ಇದು ಮುಂದೆ ಸಭ್ಯತೆ-ಸೌಜನ್ಯಗಳ ರೂಪದಲ್ಲಿ ಪ್ರತಿಬಿಂಬಿತವಾಗುತ್ತದೆ. ನಮಗೆ ನಾವೇ ಹಾಕಿಕೊಳ್ಳಬೇಕಾದ ರೀತಿ-ನೀತಿ, ಶಿಸ್ತು ನಿಯಮಗಳಿಂದಲೂ ಇತರರ ಬಗ್ಗೆ ನಮಗೆ ಇರಬೇಕಾದ ಕಾಳಜಿ, ಕನಿಕರ, ಕಳಕಳಿ, ಪ್ರೀತಿ ಗೌರವಗಳಿಂದಲೂ ಸಭ್ಯತೆ-ಸೌಜನ್ಯಗಳು ಹುಟ್ಟಿಕೊಳ್ಳುತ್ತವೆ.

ಪುತ್ತುರಾಯರ ಸಭ್ಯತೆ-ಸೌಜನ್ಯ ಕೃತಿಯಲ್ಲಿ ಬಹುಮುಖ್ಯವಾಗಿ "ಸಾಮಾಜಿಕ ಕಳಕಳಿ" ಯನ್ನು ಎತ್ತಿ ಹಿಡಿಯಲಾಗಿದೆ. ಮನುಷ್ಯ ಹೇಗೆ ಯಾವ ಯಾವ ಸ್ಥಳಗಳಲ್ಲಿ ನಡೆದುಕೊಳ್ಳಬೇಕು, ತಮ್ಮ ನಡವಳಿಕೆಗಳು ನುಡಿಗಳು ಹೇಗಿರಬೇಕು ಎಂಬುದನ್ನು ಇಲ್ಲಿ ವಿವರಿಸಿದ್ದಾರೆ. ವ್ಯಕ್ತಿಯಲ್ಲಿ, ವೃತ್ತಿಯಲ್ಲಿ, ಕುಟುಂಬದಲ್ಲಿ, ಮಿತ್ರರಲ್ಲಿ, ಉದ್ಯೋಗದಲ್ಲಿ, ಸಾರ್ವಜನಿಗ ಸ್ಥಳಗಳಲ್ಲಿ ಹೇಗೆ ನಡೆದುಕೊಂಡರೆ ಚೆನ್ನ ಎಂಬುದನ್ನು ಕೃತಿಯಲ್ಲಿ ಸೂಕ್ಷ್ಮವಾಗಿ ಅರ್ಥಗರ್ಭಿತವಾದ, ಸರಳವಾದ ರೀತಿಯಲ್ಲಿ ಅನಾವರಣಗೊಳಿಸಿದ್ದಾರೆ.

"ಆಂಗ್ಲ ಭಾಷೆಯಲ್ಲಿ ಸಭ್ಯತೆಗಳನ್ನು ಒಳ್ಳೆಯ Manners ಅಥವಾ Mannerisms ಎಂಬುದಾಗಿಯೂ, ಸಜ್ಜನಿಕೆ ಸೌಜನ್ಯಗಳನ್ನು Modesty, courtesy ಅಥವಾ being nice ಎಂಬುದಾಗಿಯೂ ಅರ್ಥೈಸಿಕೊಳ್ಳಬಹುದು. ಸಭ್ಯತೆಗಳು ಮತ್ತು ಸೌಜನ್ಯಗಳು ಶಿಷ್ಟಾಚಾರಯುಕ್ತ ವರ್ತನೆಯ ಪ್ರತೀಕ ಹಾಗೂ ಓರ್ವ ಸುಸಂಸ್ಕೃತ ವ್ಯಕ್ತಿಯಲ್ಲಿ ಕಾಣಬಹುದಾದ ಗುಣ ವಿಶೇಷ. ಈ ದೃಷ್ಟಿಯಿಂದ ಸಭ್ಯತೆ ಸೌಜನ್ಯಗಳನ್ನು ಶಿಷ್ಟಾಚಾರಗಳೆಂದು ಅರ್ಥೈಸಿಕೊಳ್ಳಬಹುದು. ಶಿಷ್ಟ ಎಂದರೆ ಸಂಸ್ಕೃತಿ, ಸಭ್ಯತೆ ಎಂದರ್ಥ ಆಚಾರ ಎಂದರೆ ನಡವಳಿಕೆ ಅಥವಾ ಸಂಪ್ರದಾಯ. ಶಿಷ್ಟಾಚಾರ ನಾಗರೀಕತೆಯ ಲಕ್ಷಣವಾದ್ದರಿಂದ ಒಂದು ನಾಗರೀಕ ಜನಜೀವನದ ಅವಿಭಾಜ್ಯ ಅಂಗವೂ ಹೌದು. ನಾನಾ ಮೌಲ್ಯಗಳ ಪರಿಪಾಕದ ಪ್ರತಿರೂಪಗಳೇ ಸಭ್ಯತೆ ಮತ್ತು ಸೌಜನ್ಯ" ೪ ಸಭ್ಯತೆ ಮತ್ತು ಸೌಜನ್ಯ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎನ್ನಬಹುದು.

ಯಾವುದು ಶಿಷ್ಟಾಚಾರ ? ಸಂಸ್ಕಾರಯುತವಾದ ನಡೆವಳಿಕೆಗಳನ್ನು ಶಿಷ್ಟಾಚಾರವೆಂದು ಕರೆಯಬಹುದು. ಆದರೆ ಇಂದು ಮುಂದುವರಿದ ಸಮಾಜದವರೆನಿಸಿಕೊಂಡವರು (Highly advanced society) ಅನುಸರಿಸುತ್ತಿರುವ ಆಧುನಿಕ ನಡವಳಿಕೆಗಳಿಗೆ ಶಿಷ್ಟಾಚಾರವೆಂಬ ಹಣೆಪಟ್ಟಿ ಕಟ್ಟಿ ಅದನ್ನೇ ಸಭ್ಯತೆ ಎಂದು ಪ್ರತಿಪಾದಿಸುತ್ತಿದ್ದಾರೆ, ಇವರುಗಳ ಪ್ರಕಾರ ಮಾತೃ ಭಾಷೆ ಕನ್ನಡವೇ ಆಗಿದ್ದರೂ, ಇಂಗ್ಲೀಷಿನಲ್ಲಿ ಮಾತನಾಡಿದರೆ ಇಲ್ಲವೇ ತಮ್ಮ ಮಾತಿನಲ್ಲಿ ಆಗಾಗ ಇಂಗ್ಲೀಷ್ ಪದಗಳನ್ನಷ್ಟೆ ಬಳಸಿದರೆ ಮಾತ್ರ ಮುಂದುವರಿದವರು ಎಂತಲೂ, ತಿಳಿದುಕೊಳ್ಳುವವರು ಇದ್ದಾರೆ. ಉಡುಪು-ತೊಡುಪುಗಳನ್ನು ವಿಚಿತ್ರವಾಗಿ ತೊಟ್ಟು ಆಧುನಿಕತೆ ಪ್ರದರ್ಶಿಸುವುದು ಹಾಗೆಯೇ ಯಾವುದಾದರೂ ಸಭೆ ಸಮಾರಂಭಗಳಿಗೆ ಹೋದಾಗ, ಮನೆಗಳಿಗೆ ಹೋದಾಗ ಕೊಟ್ಟ ತಿಂಡಿ ತಿನಿಸುಗಳನ್ನು ತಿಂದು ಖಾಲಿ ಮಾಡಿ ಬಿಟ್ಟರೆ, ಇವ ಹಳ್ಳಿಯವ, ತಿಂಡಿ ಪೋತ ಎಂದೆಲ್ಲ ಹೇಳುತ್ತೇವೆ. ಪಾರ್ಟಿಯಲ್ಲಿ ಮದ್ಯಪಾನ ಮಾಡದವ ಹಿಂದುಳಿದವ ಎಂತಲೂ, ಹಾಗೆಯೇ ಹೆಂಗಸು ಮದ್ಯಪಾನ ಮಾಡಿ, ಸಿಗರೇಟ್ ಸೇದಿದರೆ ಅವಳನ್ನು ಬಾರಿ forward ಮಹಿಳೆ ಎಂದು ತಿಳಿದುಕೊಳ್ಳುವವರು ಇದ್ದಾರೆ.

ಆದರೆ ನಿಜವಾದ ದೃಷ್ಟಿಯಲ್ಲಿ ಮುಂದುವರಿದವರೇ ಬೇರೆ. ಅವರ ನಾಗರೀಕತೆ ನಡವಳಿಕೆಯಲ್ಲಿ ತೋರುವ ಸಭ್ಯತೆ ಸೌಜನ್ಯತೆಗಳಿಂದ ವ್ಯಕ್ತವಾಗುತ್ತದೆ. ಇವರು ತೋರುವ ಸಭ್ಯತೆ-ಸೌಜನ್ಯಗಳು ಪ್ರದರ್ಶನವಾದವುಗಳಲ್ಲ, ಅವು ಆಂತರಿಕ ಸೌಂದರ್ಯವನ್ನು ಹೊಂದಿರುವ ಅವರ ಅಂತರಾಳದಿಂದ ಹೊರಹೊಮ್ಮುವ ಸಂಸ್ಕಾರಯುತ ವರ್ತನೆಗಳಾಗಿವೆ. ಸಭ್ಯತೆ-ಸೌಜನ್ಯಗಳು 'ಪಾಶ್ಚಾತ್ಯರ ಹಾಗೇ ನಡೆದುಕೊಳ್ಳುವುದರಲ್ಲಿ ಇಲ್ಲ, ಅದು ಅಂತರಾಳದಿಂದ ಬರುವಂತಹ ಗೌರವಯುತವಾದ ಒಂದು ಕ್ರಿಯೆ ಎನ್ನಲಾಗಿದೆ.

ಸಭ್ಯತೆ-ಸೌಜನ್ಯಗಳೆರಡು ಮಾನವ ಸಂಸ್ಕೃತಿಯ ಮಾನದಂಡ. ಶಿಕ್ಷಣ ಇವೆರಡನ್ನು ಮೈಗೂಡಿಸಿಕೊಳ್ಳಲು ನೆರವಾಗಬಲ್ಲುದಾದರೂ ಸುಶಿಕ್ಷಿತರೆನಿಸಿಕೊಂಡವರೆಲ್ಲ ಸುಸಂಸ್ಕೃತ ವ್ಯಕ್ತಿಗಳೇ ಆಗಬೇಕೆಂದಿಲ್ಲ ಅಂತೆಯೇ ಸುಸಂಸ್ಕೃತರೆನಿಸಿಕೊಂಡವರಲ್ಲೂ ಸಾಕಷ್ಟು ಅಸಭ್ಯರನ್ನು ಕಾಣಬಹುದು, ಅಶಿಕ್ಷಿತರಲ್ಲು ಸಾಕಷ್ಟು ಸಭ್ಯರನ್ನು ಕಾಣಬಹುದು. ಹೀಗಾಗಲು ಕಾರಣ ಬಹಳ ಸಲ ಶಿಕ್ಷಣ ಮತ್ತು ಸಂಸ್ಕಾರಗಳು ಜೊತೆ ಜೊತೆಯಾಗಿ ಪ್ರಾಪ್ತವಾಗುತ್ತಿಲ್ಲ. ಶಿಕ್ಷಣ ಕೇವಲ ಜ್ಞಾನವನ್ನು (Knowledge)

ನೀಡುತ್ತದೆಯೇ ಹೊರತು, ಸಂಸ್ಕಾರದ (Culture) ಪರಿಜ್ಞಾನವನ್ನಲ್ಲ. ಶಿಕ್ಷಣ ಸಂಸ್ಥೆಗಳು ಕೇವಲ ಶಿಕ್ಷಣವನ್ನು ನೀಡುತ್ತವೆಯೇ ಹೊರತು ಸಂಸ್ಕಾರವನ್ನಲ್ಲ. ಸಂಸ್ಕಾರವು ಉತ್ತಮರ ಸಂಘದಿಂದ, ಸತ್ಸಂಗದಿಂದ ಒಳ್ಳೆಯ ಮಾರ್ಗದರ್ಶನದಿಂದ ಪ್ರಾಪ್ತವಾಗುತ್ತದೆ. ಶಿಕ್ಷಣವನ್ನು ನೀಡುವುದು ಶಿಕ್ಷಕರ ಕೆಲಸವಾದರೇ, ಸಂಸ್ಕಾರವನ್ನು ತುಂಬುವುದು, ಹೆತ್ತವರ, ಪೋಷಕರ ಕರ್ತವ್ಯವಾಗುತ್ತದೆ. ಶಿಕ್ಷಕರೂ-ಪೋಷಕರೂ ಇಬ್ಬರೂ ಕೈ ಜೋಡಿಸಿದರಂತೂ, ಮಗು ಸುಶಿಕ್ಷಿತ ಹಾಗೂ ಸುಸಂಸ್ಕೃತ, ಸಭ್ಯ ವ್ಯಕ್ತಿಯಾಗುವುದರಲ್ಲಿ ಸಂದೇಹವಿಲ್ಲ. ಸಂಸ್ಕಾರವಿಲ್ಲದ ಶಿಕ್ಷಣ ಅಪೂರ್ಣ ಮಾತ್ರ ಅಲ್ಲ, ಅಪಾಯವೂ ಹೌದು. ಇದು ಅಕ್ಷರಸಹ ಸತ್ಯವಾದುದು. ಸಂಸ್ಕಾರವಿಲ್ಲದ ಶಿಕ್ಷಣ ಪುಷ್ಪಗಳಿಲ್ಲದ ತೋಟದಂತೆ, ತ್ರಾಣವಿಲ್ಲದ ಜೀವದಂತೆ ಎಂದರೆ ತಪ್ಪಾಗಲಾರದು.

ಸರ್ವೆ ಸಾಮಾನ್ಯವಾಗಿ ಸ್ವ ಗುಣ-ಸ್ವಭಾವಗಳು ಏಕರೂಪವಾಗಿ ಒಂದೆ ತೆರನಾಗಿರುವುದಿಲ್ಲ. ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ. ಕೆಲವರಿಗೆ ಇವು ಹುಟ್ಟು ಗುಣಗಳಾಗಿ ಜೊತೆಯಾಗಿಯೇ ಬಂದಿರುತ್ತವೆ. ಇದನ್ನು ಸರಿಪಡಿಸಲು ತುಂಬಾ ಕಷ್ಟ. ಮತ್ತೆ ಕೆಲವರು ತಾವು ಬೆಳೆದು ಬಂದ ದಾರಿಯಲ್ಲಿ ಗುಣ ಸ್ವಭಾವಗಳನ್ನು ರೂಪಿಸಿಕೊಂಡಿರುತ್ತಾರೆ. ಈ ಹಿನ್ನಲೆಯಲ್ಲಿ ಸಭ್ಯತೆ-ಸೌಜನ್ಯಗಳು ಸೇರಿದಂತೆ ಮನುಷ್ಯನ ಗುಣ ಸ್ವಭಾವಗಳನ್ನು ರೂಪಿಸುವ ಅಂಶಗಳೆಂದರೆ :-

- ಅನುವಂಶೀಯತೆ (Hereditary Characters)
- ಮಾನಸಿಕ ಆರೋಗ್ಯ
- ಹೆತ್ತವರ ಲಾಲನೆ ಪಾಲನೆ
- ಶಾಲಾ ಶಿಕ್ಷಕರು
- ಸಮಾಜ ಮತ್ತು ಸಂಸ್ಕೃತಿ

<u>ಅನುವಂಶೀಯತೆ:</u>

"ನಾವು ನಮ್ಮ ಜೀವಕೋಶಗಳಲ್ಲಿರುವ 23 ಜೊತೆ ವರ್ಣ ತಂತುಗಳ (Chromosoms) ಮೇಲಿರುವ ಲಕ್ಷಕ್ಕು ಮಿಕ್ಕಿ ಜೀನ್‌ಗಳ ಮೂಲಕ ನಮ್ಮ ಅನೇಕ ಗುಣ ಸ್ವಭಾವಗಳನ್ನು ನಮ್ಮ ಹೆತ್ತವರಿಂದಲೇ ಪಡೆಯುತ್ತೇವೆ. ಆದ್ದರಿಂದಲೇ "ಇವನು ಇವನ ತಾತನಂತೆ ಸಭ್ಯ" "ಅಪ್ಪನಂತೆ ಸಜ್ಜನ" "ಅಮ್ಮನಂತೆ ಸಾದು ಸ್ವಭಾವದವ" ಮುಂತಾದ ಹೋಲಿಕೆಗಳಿಂದ ಮಕ್ಕಳ ಗುಣ ಸ್ವಭಾವಗಳನ್ನು ಬಣ್ಣಿಸುತ್ತೇವೆ" ನಾವು ಹೆಚ್ಚೇನು ಮಾಡಲು ಸಾಧ್ಯವಾಗದಾದರೂ, ನಾವು ನಮ್ಮ ಜೀವನದಲ್ಲಿ ರೂಡಿಸಿಕೊಂಡ ಸಭ್ಯತೆ-ಸೌಜನ್ಯಗಳನ್ನು ಅನುವಂಶೀಯವಾಗಿ ನಮ್ಮ ಮಕ್ಕಳಿಗೆ ಮತ್ತು ಮೊಮ್ಮಕ್ಕಳಿಗೆ ಇಲ್ಲವೇ ಮುಂದಿನ ಪೀಳಿಗೆಗೆ ರವಾನಿಸಬಹುದು. ಹಾಗಾಗಿ ಅನುವಂಶೀಯತೆಯಿಂದ ಎಲ್ಲವೂ ಬರುತ್ತದೆ ಎಂದು ಹೇಳುವುದು. ಇಂದು ನಾವು ಸಭ್ಯತೆ-ಸೌಜನ್ಯಗಳನ್ನು ಕ್ರಮಬದ್ಧವಾಗಿ ರೂಡಿಕೊಂಡರೆ ನಮ್ಮ ಮುಂದಿನ ಪೀಳಿಗೆಗೆ ಇದನ್ನು ಧಾರೆಯೆರೆಯಬಹುದು.

ಮಾನಸಿಕ ಆರೋಗ್ಯ:

ಮಾನಸಿಕ ಆರೋಗ್ಯವೂ ವ್ಯಕ್ತಿಯ ಗುಣ ಸ್ವಭಾವಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಮಾನಸಿಕವಾಗಿ, ಶಾರೀರಿಕವಾಗಿ ಒಳ್ಳೆಯ ಬೆಳವಣಿಗೆಯನ್ನು ಪಡೆದ ಮಗು, ಸಭ್ಯತೆ-ಸೌಜನ್ಯಗಳ ಸೂಕ್ಷ್ಮತೆಗಳನ್ನು ಬೇಗ ಅರಿತುಕೊಳ್ಳುತ್ತದೆ. ಉತ್ತಮ ಮಾನಸಿಕ ಆರೋಗ್ಯವನ್ನು ಹೊಂದದ ಮಗು ಹಠಮಾರಿಯಾಗಬಹುದು, ಇಲ್ಲವೇ ಒರಟನಂತೆ ಅಸಭ್ಯನಂತೆ ವರ್ತಿಸಬಹುದು ಹಾಗಾಗಿ ಈ ಹಿನ್ನಲೆಯಲ್ಲಿ ಆರೋಗ್ಯ ಕೂಡ ನಮ್ಮ ವರ್ತನೆಗಳನ್ನು ಪ್ರಭಾವಗೊಳಿಸಬಲ್ಲ ಒಂದು ಅಂಶ. ಯಾವುದೇ ಒಬ್ಬ ಮನುಷ್ಯ ಮಾನಸಿಕವಾಗಿ ಸದೃಢನಾಗಿದ್ದರೆ ಮಾತ್ರ ಈ ಸಮಾಜದಲ್ಲಿ ಸರಿಯಾಗಿ ಬಾಳಿ ಬದುಕಲು ಸಾಧ್ಯ. ಇಲ್ಲದೇ ಹೋದರೆ ಈ ಸಮಾಜ ಮನುಷ್ಯನನ್ನು ಮಾನಸಿಕ ಅಸ್ವಸ್ಥನಂತೆ ಕೀಳರಿಮೆಯಿಂದ ನೋಡುತ್ತದೆ. ಮಾನಸಿಕ ಪ್ರಬುದ್ಧತೆ ಮಾನವನ ಏಳಿಗೆಗೆ ನಾಂದಿ ಎಂದರೆ ತಪ್ಪಾಗಲಾರದು. ಮಾನಸಿಕವಾಗಿ ಸುಸ್ಥಿತಿಯಲ್ಲಿರುವವನು ಏನೂ ಬೇಕಾದರೂ ಸಾಧಿಸಲು ಸಿದ್ಧನಾಗಿರುತ್ತಾನೆ ಎಂದಿದ್ದಾರೆ.

ಹೆತ್ತವರ ಲಾಲನೆ-ಪಾಲನೆ:

ಲಾಲನೆ ಬೇರೆ, ಪಾಲನೆ ಬೇರೆ, ಲಾಲನೆ ಎಂದರೆ ಕೊಂಡಾಟವೆಂದೂ, ಪಾಲನೆ ಎಂದರೆ ಪೋಷಣೆ ಎಂದು ಸಾಮಾನ್ಯ ಅರ್ಥವಾದರೂ ಇವೆರಡು ಪ್ರಕ್ರಿಯೆಗಳು ಸಭ್ಯತೆ ಸೌಜನ್ಯಗಳಿಂದ ಹೊರತಾಗಿರಬಾರದು. ಹೆತ್ತವರು ಮತ್ತು ಹಿರಿಯರು ಮಕ್ಕಳಿಗೆ ಸಭ್ಯತೆ-ಸೌಜನ್ಯಗಳನ್ನು ತಿಳಿ ಹೇಳುವುದರಲ್ಲಿ ಪ್ರಮುಖರು. ಹಾಗೂ ಮೊದಲಿಗರಾಗಬೇಕು. "ಗಿಡವಾಗಿ ಬಗ್ಗದು, ಮರವಾಗಿ ಬಗ್ಗೀತೆ ?" ಎಂಬ ಮಾತಿನಂತೆ ಬಾಲ್ಯದಲ್ಲಿ ಸರಿ ಮಾಡಲಾಗದುದನ್ನು ಬೆಳೆದು ವಯಸ್ಕನಾದ ಮೇಲೆ ಸರಿ ಮಾಡುವುದು ಕಷ್ಟದ ಕೆಲಸ. ಆದ ಕಾರಣ ಮಕ್ಕಳನ್ನು ಬಾಲ್ಯದಿಂದಲೇ ಸರಿಪಡಿಸಿಕೊಂಡು ಸಭ್ಯತೆ-ಸೌಜನ್ಯಗಳನ್ನು ಕಲಿಸುತ್ತಾ ಹೋಗಬೇಕು. ಬಾಲ್ಯದಲ್ಲಿ ಮಕ್ಕಳ ಮನಸ್ಸು ಮಣ್ಣಿನ ಮುದ್ದೆಯಂತೆ. ಅದನ್ನು ತಿದ್ದಿ ತೀಡಿ ಅದಕ್ಕೆ ಒಳ್ಳೆಯ ಆಕಾರ ಕೊಡೋದು ಬಲು ಸುಲಭದ ಕೆಲಸ. ಮಕ್ಕಳ ಮನಸ್ಸು ಒಂದು ಸುಂದರ ಬಿಳಿ ಹಾಳೆಯಂತೆ, ಅದರಲ್ಲಿ ಸುಂದರವಾಗಿ ಮೂಡಿಸಿದ ಚಿತ್ರಣಗಳು ಅವರ ಜೀವನದಲ್ಲಿ ಶಾಶ್ವತವಾಗಿ ಉಳಿಯುವಂತೆ ಮಾಡುತ್ತವೆ. ಮಕ್ಕಳಿಗೆ ಬಾಲ್ಯದಿಂದಲೇ ಉತ್ತಮ ಸಂಸ್ಕಾರಗಳನ್ನು ನೀಡುತ್ತಾ ಬಂದರೆ ಅವರು ಮುಂದೆ ಸದ್ಗುಣ ಸಂಪನ್ನರಾಗಿ ಬೆಳೆಯುತ್ತಾರೆ. ಬಾಲ್ಯಾವಸ್ಥೆ ಉತ್ತಮ ಸದ್ಗುಣ-ಸಂಸ್ಕಾರಗಳನ್ನು ಪಡೆಯಲು ವ್ಯಕ್ತಿಯ ಜೀವನದಲ್ಲಿ ಒಮ್ಮೆ ಮಾತ್ರ ಬಂದು ಹೋಗುವ ಏಕೈಕ ಸದವಕಾಶ ಎನ್ನುತ್ತಾರೆ.

"ಈ ಸತ್ಯವನ್ನರಿತೇ ಸಂಸ್ಕೃತದಲ್ಲಿ ಒಂದು ಮಾತಿದೆ. "ಲಾಲಯೇತ್ ಪಂಚವರ್ಷಾಣಿ, ತಾಡಯೇತ್ ದಶವರ್ಷಾಣಿ, ಪ್ರಾಪ್ತೇತು ಶೋಡಶೇ ವರ್ಷೇ, ಪುತ್ರಂ ಮಿತ್ರವತ್ ಆಚರೇತ್ ಎಂದರೆ 5 ವರುಷದವರೆಗೆ ಮಕ್ಕಳನ್ನು ಪ್ರೀತಿ-ಮಮತೆ, ವಾತ್ಸಲ್ಯಗಳಿಂದ ಕೊಂಡಾಡಬೇಕು', ಮುದ್ದಾಡಬೇಕು, ಹತ್ತು ವರುಷಗಳು ತುಂಬುತ್ತಿದ್ದಂತೆ ಅವರಲ್ಲಿ ದುರ್ಗುಣ, ಅಸಭ್ಯ ವರ್ತನೆ, ಕಂಡು ಬಂದಲ್ಲಿ ಅವರನ್ನು ತಿದ್ದಿ, ಗುದ್ದಿ ಸರಿ ಮಾಡಬೇಕು ಆದರೆ ವಯಸ್ಕಾರದ ಮಕ್ಕಳನ್ನು ಮಿತ್ರರಂತೆ ಕಾಣಬೇಕು" * ಎನ್ನಲಾಗಿದೆ.

ಮಗು, ಮಕ್ಕಳು ಏನಾದರನ್ನು ಆಗಿರಲಿ ಕಳ್ಳತನ ಮಾಡಿ ತಂದಾಗ ಪೋಷಕರು ಪಾಲಕರಾದ ನಾವು ಅದನ್ನು ಪ್ರಶ್ನೆ ಮಾಡಿ ಕೇಳಬೇಕು. ಎಲ್ಲಿಂದ ತಂದೆ ? ಹೇಗೆ ತಂದೆ ? ಎಂದು ಪ್ರಶ್ನೆ ಮಾಡಬೇಕು.

ಆಗ ಮಕ್ಕಳು ಇದಕ್ಕೆ ಉತ್ತರಿಸುತ್ತಾರೆ ಇಲ್ಲದೆ ಹೋದರೆ ಮಕ್ಕಳು ಮುಂದಿನ ದಿನಗಳಲ್ಲಿ ದೊಡ್ಡ ಕಳ್ಳರಾಗುವುದರಲ್ಲಿ ಸಂಶಯವೇ ಇಲ್ಲ. ಹಾಗಾಗಿ ಮಕ್ಕಳನ್ನು ನಾವು ತುಂಬಾ ಜಾಗರೂಕರಾಗಿ, ಜಾಗ್ರತೆಯಿಂದ ನೋಡಿಕೊಳ್ಳುವುದು ಹೆತ್ತವರ, ಪಾಲಕರ ಜವಾಬ್ದಾರಿಯಾಗಿರುತ್ತದೆ. ಮಕ್ಕಳಗೆ ಸಂಸ್ಕಾರ ಕಲಿಸುವುದು ಹೆತ್ತವರ ಕರ್ತವ್ಯವೂ ಹೌದು, ಎಂದಿದ್ದಾರೆ.

ಉದಾ:- ಒಂದು ದಿನ ಮಗು ಮಾವಿನ ಹಣ್ಣನ್ನು ಕದ್ದು ತಂದಿರುತ್ತಾನೆ. ಪಾಲಕರು ಏನನ್ನು ಕೇಳದೆ ಆ ಮಾವಿನ ಹಣ್ಣನ್ನು ಸವಿಯುತ್ತಾರೆ. ಮುಂದೊಂದು ದಿನ ಅವನು ದೊಡ್ಡ ಕಳ್ಳತನ ಪ್ರಾರಂಭ ಮಾಡುತ್ತಾನೆ. ಆಗ ನ್ಯಾಯಾದೀಶರು ಶಿಕ್ಷೆ ವಿಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸುತ್ತಾರೆ. ಆಗ ಅವನು ನೀವು ನನಗಿಂತ ಮೊದಲೇ ನನ್ನ ತಂದೆ-ತಾಯಿಗೆ ಶಿಕ್ಷೆ ವಿಧಿಸಿ ಅವರು ನಾನು ಮಾವಿನ ಹಣ್ಣನ್ನು ಕದ್ದು ತಂದಾಗ ನನ್ನ ಜೊತೆಯಲ್ಲಿ ಕೂಡಿ ತಿಂದರು. ಆಗ ಅವರು ಏನು ಪ್ರಶ್ನಿಸಲಿಲ್ಲ. ಅವರು ನನ್ನನ್ನು ಪ್ರಶ್ನಿಸಿದ್ದರೆ, ನಾನು ಇಂತಹ ದೊಡ್ಡ ಕಳ್ಳನಾಗುತ್ತಿರಲಿಲ್ಲವೇನೋ ಎಂದು ಹೇಳಿದಾಗ ಇವನ ತಂದೆ-ತಾಯಿಗೆ ಆಗ ಅರಿವಾಗುತ್ತದೆ. ಇವರು ನನ್ನನ್ನು ತಿದ್ದಿ ಬುದ್ಧಿ ಹೇಳಿದ್ದರೆ ಕದ್ದ ದಿನದಲ್ಲಿ, ನಾನು ನನ್ನ ದುರ್ಬದ್ಧಿಯನ್ನು ಬಿಟ್ಟು ಒಳ್ಳೆಯ ಮನುಷ್ಯನಾಗುತ್ತಿದ್ದೆ ಎಂದು ಹೇಳಿದಾಗ, ನ್ಯಾಯಾದೀಶರಿಗೆ ಇವನು ಹೇಳುವ ಮಾತಿನಲ್ಲಿ ಸತ್ಯಾಂಶವಿದೆ ಎಂದು ತಿಳಿದು ಬರುತ್ತದೆ. ಈ ಕಥೆಯಲ್ಲಿ ಹೆತ್ತವರೆ ಶಿಕ್ಷೆಗೆ ಒಳಪಡಬೇಕು ಎಂಬುದು ತಿಳಿದು ಬರುತ್ತದೆ. ಅವನ ಕಳ್ಳತನವನ್ನು ಮೊಳಕೆಯಲ್ಲಿಯೇ ಚಿವುಟಿದ್ದರೆ, ಇವತ್ತು ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲವೇನೋ ಎಂಬುದು ನಮಗೆ ತಿಳಿದು ಬರುತ್ತದೆ. ಆದ್ದರಿಂದ ಮಕ್ಕಳ ಮೇಲೆ ನಿಗಾ ವಹಿಸಬೇಕು. ಇದು ಎಲ್ಲ ಹೆತ್ತವರ ಪಾಲಕರ ಜವಾಬ್ದಾರಿಯಾಗಬೇಕು.

ಶಾಲಾ ಶಿಕ್ಷಕರು:

ಸಭ್ಯತೆ-ಸೌಜನ್ಯಗಳ ವ್ಯಕ್ತಿತ್ವ ವಿಕಸನದ ಒಂದು ಬಹು ಮುಖ್ಯ ಅಂಶವಾಗಿದೆ. ಶಿಕ್ಷಕರು ಬರೀ ಭೋಧನೆ ಮಾಡಿದರೆ ಸಾಲದು. ಭೋಧನೆಗೂ ಮೀರಿದ ಹಲವಾರು ಜವಾಬ್ದಾರಿಗಳನ್ನು ನಿಭಾಯಿಸಬೇಕು. ಮಕ್ಕಳನ್ನು ಬೆಳೆಸುವ ವಿಚಾರದಲ್ಲಿ ಹೆತ್ತವರು ಮಾಡಲಾಗದಂತಹ ಕೆಲಸಗಳನ್ನು ಶಿಕ್ಷಕರು ಮಾಡಬಹುದು. ಬಾಲ್ಯದಲ್ಲಿ ಮಕ್ಕಳು ಮನೆಯಲ್ಲಿ ಕಳೆದಷ್ಟೇ ಸಮಯವನ್ನು ಶಾಲಾ-ಕಾಲೇಜುಗಳಲ್ಲಿ ಕಳೆಯುತ್ತಾರೆ. ಆಗ ಮಕ್ಕಳು ಪಠ್ಯಕ್ಕೂ ಹೊರತಾದ ಹಲವಾರು ವಿಷಯಗಳನ್ನು ಕಲಿತುಕೊಳ್ಳುತ್ತಾರೆ. ಮಕ್ಕಳಲ್ಲಿ ಶಿಸ್ತು-ಕ್ರಮವನ್ನು ಕಲಿಸಬೇಕಾದದ್ದು ಪ್ರತಿಯೊಬ್ಬ ಶಿಕ್ಷಕರ ಆದ್ಯ ಕರ್ತವ್ಯವಾಗಿರುತ್ತದೆ.

ಹಿಂದಿನ ಕಾಲದಲ್ಲಿ 'Moral Science' ಎಂಬ ಒಂದು Period ಕಡ್ಡಾಯವಾಗಿ ಇರುತ್ತಿತ್ತು. ನಾನು ಕೂಡ ಶಾಲೆಯಲ್ಲಿ ಓದುತ್ತಿರುವಾಗ 1 ಗಂಟೆಗಳ ಕಾಲ ಈ Period ತೆಗೆದುಕೊಳ್ಳುತ್ತಿದ್ದರು. ಈ ರೀತಿ ತರಗತಿಗಳನ್ನು ತೆಗೆದುಕೊಳ್ಳುವುದರಿಂದ ಓದಿನ ಜೊತೆ ಜೊತೆಗೆ ಸಭ್ಯತೆ-ಸೌಜನ್ಯಗಳನ್ನು ಏಕ ಕಾಲದಲ್ಲಿಯೇ ನೀಡಬಹುದು. ಶಾಲೆಯಲ್ಲಿ ಶಿಕ್ಷಕರು ಹೆತ್ತವರಂತೆಯೂ, ಹೆತ್ತವರು ಶಿಕ್ಷಕರಂತೆಯೂ ವರ್ತಿಸಿ ಮಕ್ಕಳ ವ್ಯಕ್ತಿತ್ವ ವಿಕಸನದಲ್ಲಿ ಕೈ ಜೋಡಿಸಿದರೆ ಮಕ್ಕಳ ಭವಿಷ್ಯ ಉಜ್ವಲವಾಗಿರುತ್ತದೆ. ಹೆತ್ತವರೆ ಆಗಲಿ, ಶಿಕ್ಷಕರೇ ಆಗಲೀ ಮಕ್ಕಳನ್ನು ಕೆಟ್ಟ ಶಬ್ದಗಳಿಂದ ಬೈಯ್ಯದೆ, ಹೊಡೆಯದೇ ಅವರನ್ನ ತಿದ್ದಿ ಬುದ್ಧಿ ಹೇಳಬೇಕು. ಹೇಗೆಂದರೆ ಮಕ್ಕಳು ಏನಾದರೂ ತಪ್ಪನ್ನು ಮಾಡಿದ್ದರೇ ಅವರನ್ನು ಒಬ್ಬರನ್ನೆ ಕರೆದು

ನಯವಾಗಿ ಮನಮುಟ್ಟುವಂತೆ ತಿಳಿಸಿಕೊಡಬೇಕು. ಹಾಗೂ ಅವರು ಮಾಡಿದ ತಪ್ಪಿಗೆ ಅನುಸಾರವಾಗಿ ಪ್ರಯೋಜನವಾಗುವಂತಹ ಶಿಕ್ಷೆ ನೀಡಬೇಕು. ಉದಾ:- ತಪ್ಪು ಮಾಡಿ ಬರೆದ ಉತ್ತರಗಳನ್ನು ವಿದ್ಯಾರ್ಥಿಯಿಂದ ಹತ್ತು ಸಲ ಬರೆಸಿ, ಆಗ ಆ ತಪ್ಪನ್ನು ಮತ್ತೆ ಪುನಾರಾವರ್ತನೆ ಮಾಡುವುದಿಲ್ಲ. ಮಾಡಿದ ತಪ್ಪಿನಿಂದ ಉತ್ತಮ ಪಾಠವನ್ನೇ ಕಲಿಯುತ್ತವೆ. ಬರಿಯ ಕಣ್ಣಿನ ಸನ್ನೆಯಿಂದಲೇ ಹತೋಟಿಯಲ್ಲಿಡುವ ಶಿಕ್ಷಕರು ಇದ್ದಾರೆ, ಹೆತ್ತವರು ಇದ್ದಾರೆ, ಸಮರ್ಥ ಶಿಕ್ಷಕರು ಇದ್ದಾರೆ. ಇಂತಹ ಹಿರಿತನವನ್ನು ನಮ್ಮ ಘನತೆ ಗಾಂಭೀರ್ಯಗಳಿಂದ ಮಾತ್ರ ಸರಿ ಪಡಿಸಬೇಕೆ ಹೊರತು ಕೇವಲ ವಯಸ್ಸಿನಿಂದ ಇಲ್ಲವೇ ಅಧಿಕಾರ ಬಲದಿಂದ ಅಲ್ಲ. ಅದೂ ಸಾಧ್ಯವೂ ಇಲ್ಲ. "Parents and Teachers should be caring scaring" ಎಂಬ ಮಾತಿನಂತೆ ಭಯ ಹುಟ್ಟಿಸಿ ಮಕ್ಕಳನ್ನು ಬೆಳೆಸೋದು ಸಭ್ಯತೆಯೂ ಅಲ್ಲ, ಸೌಜನ್ಯವೂ ಅಲ್ಲ. ನಾಗರೀಕತೆ ಅಂತು ಅಲ್ಲವೇ ಅಲ್ಲ" ʿ ಹಾಗಾಗಿ ಮಕ್ಕಳಿಗೆ ಮೊದಲು ನಾವೇ ಮಾದರಿಯಾಗಬೇಕು. ಆಗ ಸಮಗ್ರವಾಗಿ ಮಕ್ಕಳ ಶ್ರೇಯೋಭಿವೃದ್ಧಿ ಸಾಧ್ಯ. ಇದಕ್ಕಾಗಿ ನಾವು ಶ್ರಮಿಸಬೇಕು. ಆಗಲೇ ಉತ್ತಮ ಸಮಾಜ ನಿರ್ಮಾಣ ಸಾಧ್ಯ ಎನ್ನುತ್ತಾರೆ.

ಸಮಾಜ ಮತ್ತು ಸಂಸ್ಕೃತಿ:

ಮಾನವ ಸಂಘ ಜೀವಿ (Social Animal) ಮಾನವನು ತನ್ನ ಸುತ್ತ ಮುತ್ತಲಿನ ಪರಿಸರದಿಂದಲೇ ಹಲವಾರು ವಿಷಯಗಳನ್ನು ಕಲಿಯುತ್ತಾನೆ. ಸಮಾಜದ ಕೆಲ ವರ್ಗಗಳ ವರ್ಣಗಳ ಭಾಷೆ, ನಡವಳಿಕೆ ಸೌಮ್ಯ, ಕೆಲವರದ್ದು ಒರಟು ಇಂತಹ ಸ್ವಭಾವದವರು ಆಂತರಿಕವಾಗಿ ಒಳ್ಳೆಯವರೇ ಆಗಿದ್ದರೂ, ತಮ್ಮನ್ನು ತಾವೂ ಪ್ರಸ್ತುತ ಪಡಿಸುವ ರೀತಿಯಲ್ಲಿ ಸಜ್ಜನಿಕೆ ಇಲ್ಲವಾದ್ದರಿಂದ, ಜನ ಇಂಥವರನ್ನು ಅಷ್ಟಾಗಿ ಮೆಚ್ಚುವುದಿಲ್ಲ. ಈ ಹಿನ್ನಲೆಯಲಿ ಸಮಾಜವು ಎಲ್ಲರ ಗುರುವೇ ಆಗಿರುತ್ತದೆ ಎನ್ನಬಹುದು.

ಸಭ್ಯತೆ, ಸಜ್ಜನತೆ ಹಾಗೂ ಸೌಜನ್ಯಗಳ ಪರಿಭಾಷೆ ಹಾಗೂ ಅದನ್ನು ವ್ಯಕ್ತಪಡಿಸುವ ರೀತಿ, ವಿಧಾನಗಳು ಪ್ರಾಂತ್ಯದಿಂದ ಪ್ರಾಂತ್ಯಕ್ಕೆ, ಜನಾಂಗದಿಂದ ಜನಾಂಗಕ್ಕೆ ದೇಶದಿಂದ ದೇಶಕ್ಕೆ ಭಿನ್ನವಾದರೂ ಇವುಗಳ ಮೂಲ ಅರ್ಥ ಹಾಗೂ ಉದ್ದೇಶಗಳು ಒಂದೇ. ಯಾರನ್ನೇ ಆಗಲಿ ಭೇಟಿಯಾದರೆ ಅವರವರ ಸಂಸ್ಕೃತಿ ಮತ್ತು ಸಂಪ್ರದಾಯಗಳಿಗೆ ಅನುಗುಣವಾಗಿ ಗೌರವಾದರಗಳಿಂದ ಗೌರವಿಸುತ್ತಾರೆ. ಇವೆಲ್ಲ ಪ್ರೀತಿಯನ್ನು ಹಾಗೂ ಮಾನವೀಯ ಗುಣಗಳನ್ನು ವ್ಯಕ್ತಪಡಿಸುವ ವಿಧಾನಗಳಾಗಿವೆ ಉದಾ:- ಭಾರತೀಯ ಸಂಸ್ಕೃತಿಯಲ್ಲಿ ಕೈ ಜೋಡಿಸಿ ನಮಸ್ಕರಿಸುವುದು, ಹಿರಿಯರಿಗೆ ಪಾದ ಮುಟ್ಟಿ ನಮಸ್ಕರಿಸುವುದು, ಯತಿಗಳಿಗೆ ಸಾಷ್ಟಾಂಗ ಪ್ರಮಾಣ ಮಾಡುವುದು, 'ಹಲೋ ಎನ್ನುವುದು ಪಾಶ್ಚಾತ್ಯರ ಕ್ರಮ, ಪರಸ್ಪರ ಭೇಟಿಯಾದಾಗ ಒಬ್ಬರನೊಬ್ಬರು ತಬ್ಬಿಕೊಂಡು ಎರಡೋ ಮೂರು ಬಾರಿ ಆಲಿಂಗನ ಮಾಡುವುದು ಮುಸ್ಲಿಂ ಭಾಂದವರ ಕ್ರಮವಾದರೆ, ಬಾಗಿ ತಮ್ಮ ಗೌರವ ವ್ಯಕ್ತಪಡಿಸೋದು ಜಪಾನೀಯರ ಕ್ರಮ ಆಫ್ರಿಕನ್ನರ ಕ್ರಮಗಳೇ ಬೇರೆ. ಕೆಲವು ಆದಿ ವಾಸಿ ಕ್ರಮಗಳಿಗೆ ವಿಚಿತ್ರ ಕನಿಷ್ಠ ಒಂದು ಮುಗುಳ್ನಗೆಯನ್ನಾದರೂ ಬೀರಿ ಒಬ್ಬರಿನೊಬ್ಬರ ಇರುವಿಕೆಯನ್ನು ಗೌರವಿಸುವುದು ಇಲ್ಲಿ ಸುಸಂಸ್ಕೃತ ಸಮಾಜದ ಸಭ್ಯತೆಯ ಲಕ್ಷಣ. ಮುಂದುವರಿದ ದೇಶಗಳಲ್ಲಂತೂ ಸಭ್ಯತೆ-ಸೌಜನ್ಯಗಳಿಗೆ ಹೆಚ್ಚಿನ ಒತ್ತು ಹಾಗೂ ಆಧ್ಯತೆಯನ್ನು ನೀಡುತ್ತಾರೆ. ಅಮೇರಿಕಾದಲ್ಲಂತೂ ವಾಯು ವಿಹಾರಕ್ಕೆಂದು ಹೊರಗೆ ಹೋದಾಗ ಯಾರಾದರೂ ಎದುರಾದರೆ ಅವರು ಅಪರಿಚಿತರಾಗಿದ್ದರೂ ಹಾಯ್ ಅಥವಾ How are you ಎಂದು ಹೇಳುವ ಪದ್ಧತಿ ತೀರ ಸಾಮಾನ್ಯ. ಆದರೆ

ನಮ್ಮ ದೇಶದಲ್ಲಿ ಪರಿಚಿತವಾದ ಜನರು ಸಿಕ್ಕರು ಮುಖ ತಿರುಗಿಸಿಕೊಂಡು ಹೋಗುವ ಜನರೇ ಹೆಚ್ಚು, ಈ ರೀತಿಯ ವರ್ತನೆ ನಮ್ಮವರಲ್ಲಿ ಸರ್ವೇ ಸಾಮಾನ್ಯವಾಗಿ ಬಿಟ್ಟಿದೆ. ಇಂದು ಎಲ್ಲರಲ್ಲು ಈ ಗುಣ ಹೆಚ್ಚಾಗಿರುವುದನ್ನು ಗಮನಿಸಬಹುದಾಗಿದೆ ಎನ್ನುತ್ತಾರೆ.

ಪ್ರಾಚೀನ ಅಂದರೆ ಹಿಂದಿನ ಕಾಲದಲ್ಲಿ ಸಭ್ಯತೆ, ಸಜ್ಜನಿಕೆ ಸೌಜನ್ಯಗಳು ಎದ್ದು ಕಾಣುತಿತ್ತು. ಆದರೆ ಈಗ ಹಿಂದಿನವರಿಗಿಂತ ಹೆಚ್ಚು ಶಿಕ್ಷಿತರಾಗುತ್ತಿದ್ದಾರೇ ಅಷ್ಟೇ ಆದರೆ ಸಭ್ಯತೆ ಸೌಜನ್ಯಗಳು ಕಡಿಮೆಯಾಗುತ್ತಿವೆ. ಅವರವರ ಬದುಕೇ ಅವರಿಗೆ ಹೆಚ್ಚು. ಬೇರೆಯವರ ಜೊತೆ, ಬೆರೆಯುವ, ಮಾತನಾಡುವ ವ್ಯವಧಾನವೂ ಇಲ್ಲ. ಇನ್ನೂ ಸಮಧಾನ ಹೇಳುವ ಸಂಗತಿ ಅಂತೂ ಇಲ್ಲವೇ ಇಲ್ಲ. ಮಾನವೀಯತೆ ಎನ್ನುವುದು ಮಾಯವಾಗಿಬಿಟ್ಟಿದೆ. ಮಾನವೀಯ ಗುಣಗಳೇ ಇಲ್ಲದೇ ಹೋದರೆ ಸಭ್ಯತೆ ಸೌಜನ್ಯಗಳಿಗೆ ಬೆಲೆ ಎಲ್ಲಿದೆ ? ಮಾನವೀಯ ಮೌಲ್ಯಗಳಿಗೆ ಬೆಲೆ ಕೊಡುತ್ತಾ, ಸಭ್ಯತೆ ಸೌಜನ್ಯವನ್ನು ನೀಡುತ್ತಾ ಹೋಗಬೇಕು. ಅದೇ ಮಾನವನ ಬಹುದೊಡ್ಡ ಸಂಪತ್ತು. ಅದೇ ಅವನ ಕೀರ್ತಿಯ ಮೆಟ್ಟಿಲು. ಸೌಜನ್ಯ, ಸಭ್ಯತೆಗಳನ್ನು ಹೆಚ್ಚಿಸಿಕೊಂಡಷ್ಟು ನಮಗೂ ಲಾಭ, ಇತರರಿಗೂ ನಮ್ಮ ಮೇಲೆ ಗೌರವ ಹೆಚ್ಚಾಗುತ್ತದೆ ಎನ್ನತ್ತಾರೆ.

ಮನುಷ್ಯ ತನ್ನ ಹಠ ಸ್ವಭಾವವನ್ನು ಬಿಡಬೇಕು. ಕೆಲವೊಬ್ಬರು ಗಂಡಸರು, ನಾನು ಗಂಡಸು ಎಂಬ ದರ್ಪ ದೌರ್ಜನ್ಯದಿಂದ ತಮ್ಮ ಹೆಂಡತಿಯನ್ನು ನಡೆಸಿಕೊಳ್ಳುವರು, ಹಾಗೇ ನಾನು, ಇರುವುದೇ ಹೀಗೆ ? ಬದಲಾಗುವುದಿಲ್ಲ ಎಂಬ ತಮ್ಮ ಕೆಟ್ಟ ಸ್ವಭಾವಗಳನ್ನು ಇಟ್ಟುಕೊಂಡು ತಾವು ನೆಮ್ಮದಿಯಾಗಿರದೇ, ಹೆಂಡತಿಯನ್ನು ನೆಮ್ಮದಿಯಾಗಿರಲು ಬಿಡುವುದಿಲ್ಲ. ಇಲ್ಲಿ ಸಭ್ಯತೆ–ಸೌಜನ್ಯದ ಕೊರತೆ ಎದ್ದು ಕಾಣುತ್ತಿದೆ. ಗಂಡಸಾದವರು ನಾನು ಗಂಡಸು ಎಂಬ ಅಹಂಭಾವ ಕಡಿಮೆ ಮಾಡಿಕೊಳ್ಳಬೇಕು. ಸಮಾನತೆಯಿಂದ ಸಾಗಬೇಕು. ಇದು ಎಲ್ಲ ಗಂಡಸರಿಗೂ ಅನ್ವಯವಾಗುವುದಿಲ್ಲ. ಕೆಲ ಗಂಡಸರು ಮಾತ್ರ ಹೇಗೆ ನಡೆದುಕೊಳ್ಳುತ್ತಾರೆ ಅಹಂವುಳ್ಳ ಗಂಡಸರು ಸ್ವಲ್ಪ ತಮ್ಮ ನಡವಳಿಕೆಗಳನ್ನು ಸರಿಪಡಿಸಿಕೊಂಡಾಗಲೇ ಸುಖ ಸಂಸಾರ ಸಾಧ್ಯವಾಗುವುದು ಎನ್ನಬಹುದು.

ಈ ಹಿನ್ನಲೆಯಲ್ಲಿ ಸಭ್ಯತೆ–ಸೌಜನ್ಯತೆಗಳೂ ಸೇರಿದಂತೆ ಮನುಷ್ಯನ ಗುಣ ಸ್ವಭಾವಗಳನ್ನು ಅನುವಂಶೀಯತೆ, ಮಾನಸಿಕ ಆರೋಗ್ಯ, ಹೆತ್ತವರ ಲಾಲನೆ–ಪಾಲನೆ, ಶಾಲಾ ಶಿಕ್ಷಕರು, ಸಮಾಜ ಮತ್ತು ಸಂಸ್ಕೃತಿ ರೂಪಿಸಿದರೆ, ಮನುಷ್ಯ ಮುಂದುವರಿದು ತಮ್ಮ ಸಭ್ಯತೆ–ಸೌಜನ್ಯಗಳು ಎಲ್ಲೆಲ್ಲಿ ಹೇಗಿರಬೇಕು ? ಯಾವುದು ಸಭ್ಯತೆ ? ಯಾವುದು ಸೌಜನ್ಯ ಸಜ್ಜನಿಕೆ ಅಥವಾ ಶಿಷ್ಠಾಚಾರ ? ಯಾವುದು ಅನಾಗರೀಕತೆ, ಒರಟುತನ, ಎಂಬುದರ ಬಗ್ಗೆಯೂ ವಿವರವಾಗಿ ತಿಳಿಸಲಾಗಿದೆ.

ಸಭ್ಯತೆ–ಸೌಜನ್ಯಗಳು ಒಳಗೆ–ಹೊರಗೆ ಎರಡು ಕಡೆಯು ಇರಬೇಕು. ಮನೆಯೊಳಗೆ ಅಸಭ್ಯನಾಗಿ ವರ್ತಿಸಿ, ಹೊರ ಪ್ರಪಂಚದಲ್ಲಿ ಸಭ್ಯರಾಗಿ ವರ್ತಿಸಿದರೆ ಅದು ಅವನ 'ಗೋಮುಖ ವ್ಯಾಘ್ರ' ತನವನ್ನು ತೋರಿಸುತ್ತದೆ. ಅಂದರೆ ಗಾದೆಯಲ್ಲಿ ಹೇಳುವಂತೆ ಮನೆಗೆ ಮಾರಿ ಊರಿಗೆ ಉಪಕಾರಿಯಾಗಿ ಬಾಳುವುದು ಸಭ್ಯತೆಯೇ ಅಲ್ಲ ಅದು ಅಸಭ್ಯ ವರ್ತನೆಯಾಗುತ್ತದೆ. ಅವನು ತನ್ನ ನೈಜತೆಯನ್ನೇ ಕಳೆದುಕೊಳ್ಳುತ್ತಾನೆ. ಅದಕ್ಕಾಗಿಯೇ ಹೇಳುವುದು ಸೌಜನ್ಯ–ಸಭ್ಯತೆಯನ್ನು ಪ್ರತಿಯೊಬ್ಬನು ಅಳವಡಿಸಕೊಳ್ಳಬೇಕು. ಎಲ್ಲಿ ? ಹೇಗೆ? ಯಾವಾಗ ? ಎಂದು ವಿವರಿಸಿದ್ದಾರೆ.

<u>ಸಭ್ಯತೆ-ಸೌಜನ್ಯ ಎಲ್ಲಿ ? ಯಾವಾಗ ? ಹೇಗೆ ?</u>

<u>'ಮನೆಯೇ ಮೊದಲ ಪಾಠಶಾಲೆ'</u>

'ಮನೆಯೇ ಮೊದಲ ಪಾಠಶಾಲೆ' ಎಂಬಂತೆ ಮನೆಯಲ್ಲಿ ಪ್ರಾರಂಭವಾಗಲಿ ಸಭ್ಯತೆ ಸೌಜನ್ಯ. ಮನುಷ್ಯ ಎಲ್ಲೆಲ್ಲೋ ಸುಖವನ್ನು ಹುಡುಕುತ್ತಾನೆ. ಆದರೆ ಸುಖ ಸಿಗುವುದು ಅವರವರ ಮನೆಯಲ್ಲಿಯೇ ಹೊರತು ಹೊರಗಡೆಯಲ್ಲ. ಆದುದರಿಂದಲೇ ಹೇಳುವುದು ಸಭ್ಯತೆ-ಸೌಜನ್ಯಗಳ ಅರಿವು ಆರಂಭವಾಗಬೇಕಿರುವುದು ಮನೆಯಿಂದಲೇ, ಇದನ್ನು ಮನೆಯಲ್ಲಿ ಮಕ್ಕಳಿಂದ ಹಿಡಿದು ದೊಡ್ಡವರವರೆಗೆ ಎಲ್ಲರೂ ಅನುಸರಿಸಬೇಕಾದ ಸೂತ್ರ. ಮುಖ್ಯವಾಗಿ ಬಾಲ್ಯದಿಂದಲೇ ಹೆತ್ತವರು ಇದನ್ನು ತಿಳಿಸಿಕೊಡಬೇಕು. ಮಕ್ಕಳನ್ನು ಹೆತ್ತು ಹೊತ್ತು ಶಾಲೆಗೆ ಬಿಟ್ಟರೇ ಹೆತ್ತವರ ಹೊಣೆ ಕೊನೆಯಾಗುವುದಿಲ್ಲ. ಬಾಲ್ಯದಲ್ಲಿ ನಾವು ಮಕ್ಕಳಿಗೆ ರೋಗಗಳು ಬಾರದಂತೆ, ರೋಗ ನಿರೋಧಕ ಚುಚ್ಚು ಮದ್ದು (Vaccination) ಕೊಡಿಸುವಂತೆ, ಸಭ್ಯತೆ-ಸೌಜನ್ಯವೆಂಬ ಚುಚ್ಚು ಮದ್ದನ್ನು ನಾವೇ ನೀಡಬೇಕು ಆಗ ಮಾತ್ರವೇ ಮಗು ಓರ್ವ ಸುಸಂಸ್ಕೃತ ಸಭ್ಯ ವ್ಯಕ್ತಿಯಾಗಲು ಸಾಧ್ಯ. ಮನೆಯೊಳಗೆ ಹಿರಿಯರೆನಿಸಿಕೊಂಡವರು ಮೊದಲು ಸಭ್ಯತೆಯಿಂದ ನಡೆದುಕೊಂಡರೆ ಮಗು ಅದನ್ನು ಗಮನಿಸುತ್ತ ತಾನು ಕಲಿತುಕೊಳ್ಳುತ್ತದೆ. "Husband and Wife can fight but not a Father and Mother' ಎಂಬ ಮಾತಿನಂತೆ ಗಂಡ ಜಗಳವಾಡಬಹುದು" ಆದರೆ ತಂದೆ ತಾಯಿಗಳು ಜಗಳವಾಡಬಾರದು"[2] ಹಿರಿಯರೇ ಮಾರ್ಗದರ್ಶಕರಾದರೇ ಕಿರಿಯರು ಸಭ್ಯವ್ಯಕ್ತಿಗಳಾಗಿ ಸಮಾಜಕ್ಕೆ ಮಾದರಿಯಾಗಿ ಬೆಳೆಯುತ್ತಾರೆ ಎಂದಿದ್ದಾರೆ.

ಮನೆಯಲ್ಲಿ ಮಾತು-ಮಾತಿಗೆ ನಾನು ನನ್ನದು ಎನ್ನಬಾರದು. ಈ ರೀತಿಯ ಭಾವನೆಗಳನ್ನು ಮಕ್ಕಳಿಗೆ ತುಂಬಬಾರದು. ಈ ರೀತಿಯ ಭಾವನೆಗಳಿಂದ ಮಕ್ಕಳಿಗೆ ಸ್ವಾರ್ಥ ಬರುತ್ತದೆ. ಹಾಗಾಗಿ ಈ ರೀತಿಯ ಭಾವನೆಗಳನ್ನು ಮಕ್ಕಳಿಗೆ ಕಲಿಸದಂತೆ ನಾವು ನಡೆದುಕೊಳ್ಳಬೇಕು. ಒಳ್ಳೆ ಒಳ್ಳೆಯ ನೀತಿ ಕಥೆಗಳನ್ನು ಹೇಳುತ್ತ ಮಕ್ಕಳನ್ನು ಪ್ರಚೋದಿಸಬೇಕು. ಆಗ ಮಹನೀಯರ ನೀತಿ ಕಥೆಗಳಿಂದ ಅವರ ಮನದಲ್ಲಿ ಒಳ್ಳೆಯ ಭಾವನೆಗಳು ಮಿಡಿತಗೊಳ್ಳುತ್ತದೆ ಎನ್ನುತ್ತಾರೆ.

ಹಿಂದೆ ಅವಿಭಕ್ತ ಕುಟುಂಬದಲ್ಲಿ ಬೆಳೆದ ಮಕ್ಕಳಿಗೆ ಸಭ್ಯತೆ-ಸೌಜನ್ಯಗಳು ಹಾಗೇ ಲಭ್ಯವಾಗುತ್ತಿದ್ದವು, ಕಾರಣ ಹೆತ್ತವರ ಹೊರತಾಗಿಯೂ ಸಭ್ಯತೆ-ಸೌಜನ್ಯಗಳನ್ನು ತಿಳಿಸುವವರು ಹಲವರಿದ್ದರು. ಆದರೆ ಈಗ ವಿಭಕ್ತ ಕುಟುಂಬಗಳೇ ಹೆಚ್ಚಾಗಿರುವುದರಿಂದ ಸಭ್ಯತೆ ಸೌಜನ್ಯಗಳನ್ನು ತಿಳಿಸಿಕೊಡುವವರೂ ಇಲ್ಲ. ಕಲಿತುಕೊಳ್ಳುವ ಸದವಕಾಶಗಳೂ ತೀರ ಕಡಿಮೆಯಾಗಿ ಬಿಟ್ಟಿವೆ. ಹಾಗೇ ತಿಳಿ ಹೇಳುವವರೂ ಇರುವುದಿಲ್ಲ. ಹಾಗಾಗಿ ಮಕ್ಕಳು ಹೇಗೆ ಬೇಕೋ ಹಾಗೇ ತಮ್ಮಿಷ್ಟದಂತೆ ಬೆಳೆಯುತ್ತಾರೆ. ಉದಾ:- ಶಾಲೆಯಿಂದ ಬಂದ ಮಗು ತನ್ನ ಶೂ, ಕಾಲು ಚೀಲವನ್ನು ಬಿಚ್ಚಿಟ್ಟು ಬ್ಯಾಗ್‌ಗಳನ್ನು ಬದಿಗಿಟ್ಟು ಕೈ ಕಾಲು ಮುಖ ತೊಳೆಯುವ ಅಭ್ಯಾಸವನ್ನು ನಾವು ಕಲಿಸಿಕೊಡಬೇಕು. ಆದರೆ ಕಲಿಸಿಕೊಡುವ ತಂದೆ-ತಾಯಿಗಳು ಮಕ್ಕಳು ಮನೆಗೆ ಬಂದಾಗ ಇರುವುದಿಲ್ಲ. ಇವರು ತಮ್ಮ ಆಫೀಸಿನ ಕೆಲಸದಲ್ಲಿ ಮಗ್ನರಾಗಿರುತ್ತಾರೆ. ತಿದ್ದಿ ಬುದ್ಧಿ ಹೇಳುವವರು ಯಾರು ಇಲ್ಲದಂತಾಗಿ ಮಗು ತನ್ನ ಇಷ್ಟದಂತೆ ಮನಬಂದಂತೆ ಕಲಿಯುತ್ತದೆ. ಹಾಗಾದಾಗ ಸಭ್ಯತೆ-ಸೌಜನ್ಯಕ್ಕೆ ಬೆಲೆ ಎಲ್ಲಿ ? ಅದಕ್ಕೆ ಹೇಳುವುದು ನಾವು ಬಿಡುವಿನ ವೇಳೆಯಲ್ಲಿ ಈ ಸುಸಂಸ್ಕೃತತನವನ್ನು

ಹೇಳುತ್ತಿರಬೇಕು. ಆಗ ಮಗುವಿನ ವ್ಯಕ್ತಿತ್ವ ವಿಕಸನ ಸಾಧ್ಯವಾಗುತ್ತದೆ. ಒಟ್ಟಾರೆ ಹೇಳುವುದಾದರೆ ಹಿರಿಯರನ್ನು ಗೌರವಿಸುವುದನ್ನು, ಹಾಗೇ ಸೌಜನ್ಯಯುತವಾಗಿ ಎಲ್ಲಿ, ಯಾವಾಗ, ಹೇಗೆ ಇರಬೇಕೆಂಬುದನ್ನು ಬುದ್ಧಿ ಮಾತುಗಳಿಂದ ತಿಳಿಸಬೇಕು. ನಯವಾಗಿ ಅವರನ್ನು ಹಂತ ಹಂತವಾಗಿ ತಿದ್ದಿ ಬುದ್ಧಿ ಹೇಳಬೇಕು. ಸಭ್ಯತೆ-ಸೌಜನ್ಯವನ್ನು ಹಿರಿಯರಲ್ಲಿ, ಬೇರೆಯವರಲ್ಲಿ, ಶಿಕ್ಷಣದಲ್ಲಿ, ಹಣಕಾಸಿನ ದುಂದುವೆಚ್ಚವನ್ನು ತಡೆಯುವಲ್ಲಿ, ಎಲ್ಲಾ ಕಡೆಯು ಅಳವಡಿಸಿಕೊಳ್ಳಬೇಕು ಎಂದು ತಿಳಿ ಹೇಳುವುದು ಪಾಲಕರ, ಪೋಷಕರ ಕರ್ತವ್ಯವಾಗಬೇಕು. ಮಕ್ಕಳಿಗೆ ಎಲ್ಲಾ ರೀತಿಯಲ್ಲಿ ನಾವೇ ಮಾರ್ಗ ದರ್ಶಕರಾಗಬೇಕು. ಆಗಲೇ ಮಕ್ಕಳ ಶ್ರೇಯೋಭಿವೃದ್ಧಿ ಸಾಧ್ಯವಾಗುತ್ತದೆ ಎನ್ನುತ್ತಾರೆ.

ಸಭ್ಯತೆಗಳ ಒಂದೊಂದು ರೂಪವನ್ನು ಅಚ್ಚುಕಟ್ಟಾಗಿ ತಿಳಿಸಿಕೊಡಬೇಕು. ಬಾಲ್ಯದಲ್ಲಿರುವಾಗಲೇ ದೇವರ ಪೂಜೆ ವೇಳೆ ಭಕ್ತಿಯಿಂದ ಕೈಮುಗಿದು ನಿಲ್ಲುವ ಹಾಗೇ, ಜೊತೆಗೆ ದೇವರ ಪುಟ್ಟ ಪುಟ್ಟ ಶ್ಲೋಕಗಳನ್ನು ಕಲಿಸಿಕೊಡುವ, ತೀರ್ಥ ಪ್ರಸಾದಗಳನ್ನು ಸ್ವೀಕರಿಸುವ ಎಲ್ಲಾ ಸಭ್ಯತೆಗಳನ್ನು ಕಲಿಸಿಕೊಡಬೇಕು. ಹಾಗೇ ಶಿಸ್ತು ಬದ್ಧವಾಗಿ ಊಟ ಮಾಡುವ ರೀತಿ ಕ್ರಮಗಳನ್ನು ತಿಳಿಯಪಡಿಸಬೇಕು. ಜೊತೆಗೆ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಪ್ರತಿಯೊಂದು ಸಂಬಂಧಕ್ಕೂ ಅದರದೇ ಆದ ಸಂಬಂಧ ಸೂಚಕ ಪದಗಳಿವೆ. ಅದೇ ಪದಗಳಿಂದ ನಾವು ಸಂಭೋದಿಸಬೇಕು. ಉದಾ:- ಅಜ್ಜ-ಅಜ್ಜಿ, ದೊಡ್ಡಪ್ಪ-ದೊಡ್ಡಮ್ಮ, ಚಿಕ್ಕಮ್ಮ-ಚಿಕ್ಕಪ್ಪ, ಅತ್ತೆ-ಮಾವ, ಅಣ್ಣ-ಅತ್ತಿಗೆ ಇತ್ಯಾದಿ ಹೀಗೆ ಅವರವರ ಸಂಬಂಧ ಹಿಡಿದು ಸಂಭೋಧಿಸುವುದರಿಂದ ಅವರೊಳಗಿನ ಬಾಂಧವ್ಯವೂ ಹೆಚ್ಚುತ್ತಿದೆ. ಇಂತಹ ಉತ್ತಮ ಸಂಸ್ಕೃತಿಗಳನ್ನು ಕಲಿಸಬೇಕು. ಪಾಶ್ಚಾತ್ಯ ಸಂಸ್ಕೃತಿಯ ಮೋಹಕ್ಕೆ ಯಾವಾಗಲೂ ಒಳಗಾಗಬಾರದು. ಈ ಸಂಸ್ಕೃತಿ ಈಗ ಭಾರತದಲ್ಲೂ ಬಂದು ಬಿಟ್ಟಿದೆ. ಮಕ್ಕಳಿಗೆ ಮನೆ ಕೆಲಸದವಳು ಆಂಟಿ ಎಂದಾದರೆ, ಡ್ರೈವರ್ ಅಂಕಲ್ ಆಗಿ ಬಿಟ್ಟಿದ್ದಾರೆ. ಇದೇನಾ ನಮ್ಮ ಸಂಸ್ಕೃತಿ ? ನಮ್ಮ ನಮ್ಮ ಸಂಸ್ಕಾರವನ್ನು ಉಳಿಸಿ ಬೆಳಸಿಕೊಳ್ಳಬೇಕು. ಸಂಬಂಧಗಳ ಪರಿಚಯವನ್ನು ಹೆತ್ತವರೇ ಮಾಡಿಸಬೇಕು. ಆಗಲೇ ಉತ್ತಮ ಸಂಸ್ಕಾರಯುತವಾದ ವ್ಯಕ್ತಿತ್ವವನ್ನು ನಾವು ಮಕ್ಕಳಿಗೆ ಧಾರೆಯೆರೆಯಲು ಸಾಧ್ಯ ಎಂದಿದ್ದಾರೆ.

ಮಕ್ಕಳು ಚಾಡಿ ಹೇಳುವ ಗುಣವನ್ನು ಹೆಚ್ಚು ಹೊಂದಿರುತ್ತಾರೆ. ಅದನ್ನು ತಡೆಹಿಡಿದು ಉತ್ತಮ ನೀತಿಯನ್ನು ರೂಪಿಸಿಕೊಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿರುತ್ತದೆ. ಇಂತಹ ಕೆಟ್ಟ ಗುಣಗಳು, ದುರ್ಗುಣಗಳು ಬಾರದಂತೆ ಜಾಗ್ರತೆ ವಹಿಸಬೇಕು. ಹಾಗೇನಾದರೂ ಕಂಡು ಬಂದರೆ ಅದನ್ನು ಮೊಳಕೆಯಲ್ಲಿಯೇ ಚಿವುಟು ಹಾಕಬೇಕು. ಆಗ ಮಾತ್ರ ಮಕ್ಕಳ ಆರೋಗ್ಯಕರ ಬೆಳವಣಿಗೆ ಸಾಧ್ಯ. ಮಕ್ಕಳ ಮುಂದೆ ಕೆಟ್ಟದಾಗಿ ಬೇರೆಯವರ ಬಗ್ಗೆ ನಾವು ಮಾತನಾಡುವುದನ್ನು ನಿಲ್ಲಿಸಬೇಕು ಎನ್ನುತ್ತಾರೆ.

ಏರುದನಿಯಲ್ಲಿ ಮಾತನಾಡುವುದು ಸಭ್ಯತೆ ಇಲ್ಲ. ಮಾತನಾಡುವಾಗ ಧ್ವನಿ ಏರಿಸಿ ಮಾತನಾಡುವುದಕ್ಕಿಂತ, ವಾದದ ಗುಣಮಟ್ಟ ಏರಿಸಿಕೊಳ್ಳಬೇಕಾದುದು ಪ್ರಬಲ ಲಕ್ಷಣ. ಕೋಪ ಬಂದರೂ ಅಷ್ಟೆ ಅದನ್ನು ನಿಯಂತ್ರಿಸಿಕೊಳ್ಳದೇ ಇತರರ ಮೇಲೆ ಕಿರುಚಾಡುವುದು, ಬೈಯ್ಯುವುದು, ಶಿಷ್ಟಾಚಾರವಲ್ಲ. ಜಗಳದ ಸಮಯದಲ್ಲಿ ಮಾತಿಗೆ ಮಾತು ಬೆಳೆಸುವುದಕ್ಕಿಂತ ಮೌನವಾಗಿರುವುದೇ ಉತ್ತಮ. ಈ ರೀತಿಯ ಕೆಲಸ, ನಮ್ಮ ನಮ್ಮ ಮನೆಯಿಂದಲೇ ಆರಂಭವಾಗಬೇಕು. ಆಗ ನಮ್ಮ ಮಕ್ಕಳು ಇದನ್ನು ಬಾಲ್ಯದಲ್ಲಿಯೇ ಕಲಿಯುತ್ತಾರೆ. ಆಗ ನಾವು ಈ ದೇಶಕ್ಕೆ ಒಳ್ಳೆಯ ಪ್ರಜೆಗಳನ್ನು ರೂಪಿಸಿದಂತಾಗುತ್ತದೆ. ಒಟ್ಟಾರೆಯಾಗಿ

ಹೇಳುವುದಾದರೆ ನಾವು ಮಕ್ಕಳನ್ನು ತಿದ್ದುವ ಮೊದಲು ಎಲ್ಲಾ ಶಿಷ್ಟಾಚಾರವನ್ನು ನಾವೇ ಅನುಸರಿಸಿಕೊಂಡು ನಡೆದರೆ, ಮಕ್ಕಳು ಅದನ್ನು ನಮ್ಮಿಂದ ಕಲಿಯುತ್ತಾರೆ. ಎಲ್ಲಾ ಸತ್ಕಾರ್ಯಗಳು ನಮ್ಮ ನಮ್ಮ ಮನೆಯಿಂದಲೇ ಪ್ರಾರಂಭವಾದರೇ ನಮ್ಮ ಮಕ್ಕಳೆ ಮುಂದೆ ಒಳ್ಳೆಯ ಪ್ರಜೆಗಳಾಗಿ ಬೆಳೆಯುತ್ತಾರೆ ಎನ್ನುವಲ್ಲಿ ಎರಡೂ ಮಾತಿಲ್ಲ. 'ಮಾತು ಬೆಳ್ಳಿ ಮೌನ ಬಂಗಾರ' ಎಂಬ ನಾಣ್ಣುಡಿಯನ್ನು ಅವರಿಗೆ ಮೊದಲು ನಾವೇ ಅನುಸರಿಸಿ, ನಂತರ ಅವರಿಗೆ ಕಲಿಸಿಕೊಡಬೇಕು ಎಂದಿದ್ದಾರೆ.

ಸುಸಂಸ್ಕೃತರಾಗಲು ಬೇಕು ಸಭ್ಯತೆ-ಸೌಜನ್ಯ

ಯಾರಿಂದಲಾದರೂ ಆತಿಥ್ಯದ ಆಹ್ವಾನ ಬಂದಾಗ ಅದನ್ನು ನಮಗೆ ಸಾಧ್ಯವಾದಾಗಲೆಲ್ಲ ಒಪ್ಪಿಕೊಳ್ಳುವುದು ಶಿಷ್ಟಾಚಾರ. ಒಪ್ಪಿಕೊಳ್ಳಲು ಸಾಧ್ಯವಾಗದಿದ್ದಾಗ ಸಕಾರಣದಿಂದ ವಿನಯಪೂರ್ವಕವಾಗಿ ತಿಳಿಸಿಬಿಡಬೇಕು. ನಾವು ಅತಿಥಿಗಳಾಗಿ ಹೋದಾಗ ನಮ್ಮ ನಡವಳಿಕೆ ಸೌಹಾರ್ದಯುತವಾಗಿ, ಸಂಸ್ಕಾರದಿಂದ ಕೂಡಿರಬೇಕು. ನಾವು ಅವರಿಗೆ ತಿಳಿಸದೇ ಎಂದೂ ಹೋಗಬಾರದು ಏಕೆಂದರೆ ನಾವು ಹೋಗುವ ಮನೆಯವರಲ್ಲಿ ಏನೋ ತೊಂದರೆಗಳು ಇದ್ದು, ಅದನ್ನು ಅವರು ಬಾಯಿ ಬಿಟ್ಟು ಹೇಳದೆ ಏನೋ ಕಾಟಾಚಾರಕ್ಕೆ ಆತಿಥ್ಯ ನೀಡಿದರೆ ಅದು ನಮಗೆ ಇಷ್ಟವಾಗದೇ ಆ ಮನೆಯವರ ಬಗ್ಗೆ ಬೇಸರಿಕೆ ಉಂಟಾಗುವುದು. ಎಲ್ಲೆ ಅತಿಥಿಯಾಗಿ ಹೋಗಬೇಕಾದರೆ ಅವರಿಗೆ ನಾವು ಹೊರೆ ಎಂದು ಭಾಸವಾಗಬಾರದು, ವರವಾಗಿ ಭಾಸವಾಗಬೇಕು. ಆ ರೀತಿಯಾಗಿ ಹೋದರೆ ಆತಿಥ್ಯಕ್ಕೆ ಬೆಲೆ. ಅತಿಥಿಗಳಾಗಿ ಹೋದಾಗ ನಾವು ಅವರ ಭಾವನೆಗಳಿಗೆ ಸರಿಯಾಗಿ ಸ್ಪಂದಿಸುತ್ತಿರಬೇಕು. ಆಗ ಅವರ ಜೊತೆಯಲ್ಲಿ ಊಟಕ್ಕೆ ಕುಳಿತಾಗ ಸಭ್ಯತೆಯಿಂದ ಇರಬೇಕು. ಅತಿಥಿಗಳಾಗಿ ಅವರ ಮನೆಗೆ ಹೋದಾಗ ಬರೀ ಕೈನಲ್ಲಿ ಹೋಗುವುದು ಸಭ್ಯತೆಯಲ್ಲ. ಏನಾದರೂ ಹಣ್ಣು-ಹಂಪಲು, ತಿಂಡಿ ತಿನಿಸುಗಳನ್ನು ಒಯ್ಯುವುದು ಒಂದು ಶಿಷ್ಟಾಚಾರ. ತುಂಬಾ ಆತ್ಮೀಯರಾದಾಗ ಮನೆಯಲ್ಲಿ ಮಾಡಿದ ತಿಂಡಿ ತಿನಿಸು ಇಲ್ಲವೇ ನಮ್ಮ ತೋಟದಲ್ಲಿ ಬೆಳೆದ ಹಣ್ಣು, ಸೊಪ್ಪು, ತರಕಾರಿಗಳನ್ನು ನಾನು ಅವರ ಮನೆಗಳಿಗೆ ತೆಗೆದುಕೊಂಡು ಹೋದಾಗ ಅವರಿಗೆ ತುಂಬಾ ಸಂತೋಷವಾಗುತ್ತದೆ ಎನ್ನುವುದು ಹಿರಿಯರ ಅನುಭವವೇ ಸರಿ.

ಅತಿಥೇಯರ ಮನೆ ಸೇರಿದ ಬಳಿಕ, ಹೋದ ಮನೆಯವರಂತೆ ಇರುವುದು ಸೌಜನ್ಯ. ಅದನ್ನು ಬಿಟ್ಟು ಕೆಲವು ಬೇಡಿಕೆಗಳನ್ನು ಅವರ ಮುಂದಿಡುವುದು ಸಭ್ಯತೆಯ ಲಕ್ಷಣಗಳಲ್ಲ ಹಾಗೆಯೇ ತಡವಾಗಿ ಏನಾದರೂ ಅವರ ಮನೆಗೆ ಹೋಗುವಂತಿದ್ದರೆ, ನಮ್ಮದು ಊಟವಾಗಿದೆ ಎಂದು ಒಂದು ಸುಂದರ ಸುಳ್ಳನ್ನು ಹೇಳೋದು ಸಭ್ಯತೆಯೇ ಆದೀತು. ನಾವು ನಾಗರೀಕತನದಿಂದ ವರ್ತಿಸಬೇಕು. ಆತಿಥ್ಯವನ್ನು ಸ್ವೀಕರಿಸಿ ಬಂದ ನಂತರ ಅವರಿಗೆ ಒಂದು ಕರೆ ಮಾಡಿ ಇಲ್ಲವೇ ಪತ್ರ ಬರೆದು ತಮ್ಮ ಕೃತಜ್ಞತೆಯನ್ನು ತಿಳಿಸುವುದು ಒಂದು ಸೌಜನ್ಯತೆ. ಆತಿಥ್ಯವನ್ನು ಅನುಭವಿಸಿ ಬಂದ ನಂತರ ಅವರನ್ನು ಎಂದಿಗೂ ಮರೆಯಬಾರದು ಅದೇ ಶಿಷ್ಟಾಚಾರ. ಅವರು ನೀಡಿದ ಆತಿಥ್ಯವನ್ನು ಕೊನೆಯವರೆಗೂ ನೆನೆಯುತ್ತಿರಬೇಕು ಎಂದಿದ್ದಾರೆ.

ಅತಿಥಿಗಳು ನಮ್ಮ ಮನೆಗೆ ಬಂದಾಗ:

ಮನೆಗೆ ಬಂದ ಅತಿಥಿಗಳು ದೇವರಿಗೆ ಸಮಾನ "ಅತಿಥಿ ದೇವೋಭವ" ಎಂದು ಗೌರವಿಸುವ ಸಂಸ್ಕೃತಿಗೆ ಒಳಪಡುವವರು ಭಾರತೀಯರು. ಅತಿಥಿಗಳು ಬಂದಾಗ ಅವರನ್ನು ಆದರದಿಂದ ಸತ್ಕರಿಸಬೇಕು. ಉತ್ತಮ ಮಾತುಗಳಿಂದ ಬರಮಾಡಿಕೊಳ್ಳಬೇಕು. ಅವರಿಗೆ ಉತ್ತಮವಾಗಿ ಸತ್ಕಾರ ಮಾಡಬೇಕು. ಅವರು ಯಾವಾಗಲು ನೆನಪಿಟ್ಟುಕೊಳ್ಳುವಂತೆ ನಾವು ನೋಡಿಕೊಳ್ಳಬೇಕಾದುದು ಸಭ್ಯತೆ. ಬಂದ ಅತಿಥಿಗಳಿಗೆ ಹಂಗಿಸಿ ಮಾತನಾಡುವುದಾಗಲೀ, ಪ್ರತಿಷ್ಠೆಯನ್ನು ತೋರಿಸುವುದಾಗಲೀ, ನಿರ್ಲಕ್ಷ್ಯ ತಾತ್ಸಾರ ಮಾಡುವುದಾಗಲೀ ಸಲ್ಲದು, ಹಾಗೆಯೇ ಶ್ರೀಮಂತಿಕೆಯ, ಅಧಿಕಾರದ ಪ್ರದರ್ಶನ ಆಗಲೇ ಬಾರದು ಎಂದಿದ್ದಾರೆ.

"ಅಭ್ಯಾಗತಃ ಸ್ವಯಂ ವಿಷ್ಣು" ಎಂಬ ನಮ್ಮ ಸಂಸ್ಕೃತಿಯಂತೆ ಆಹ್ವಾನವಿಲ್ಲದೇ ಬಂದ ಅಭ್ಯಾಗತರನ್ನು ಆಹ್ವಾನಿಸಿದ ಅತಿಥಿಗಳಂತೆಯೇ ಉಪಚರಿಸಬೇಕು. ಊಟ ಬಡಿಸುವಾಗ ಪಂಕ್ತಿಭೇದ ಮಾಡೋದು ಅಸಭ್ಯತೆ ಮಾತ್ರವಲ್ಲ. ಅಪಚಾರವೂ ಹೌದು. ಅತಿಥಿಗಳೆದುರು ಯಾರು ಮನೆಯಲ್ಲಿ ಜಗಳವಾಡಬಾರದು ಇದು ಅತಿಥಿಗಳಿಗೆ ಮುಜುಗರಕ್ಕೆ ಕಾರಣವಾಗುತ್ತದೆ. ಅತಿಥಿಗಳು ಹಿರಿಯವರಾಗಿದ್ದರೆ ಅವರನ್ನು ಗೌರವಯುತವಾಗಿ ಕಾಣಬೇಕು. ಅವರ ಬಳಿ ಗೌರವಾಧರಗಳಿಂದ ನಡೆದುಕೊಳ್ಳಬೇಕು. "ಎಲೈ ನಾಲಗೆಯೇ, ಭೋಜನದಲ್ಲಿ & ಭಾಷಣದಲ್ಲಿ ನಿನ್ನ ಇತಿಮಿತಿಗಳನ್ನು ತಿಳಿ" ಎಂಬ ಮಾತನ್ನು ನಮಗೆ ನಾವೇ ಆಗಾಗ ಹೇಳುತ್ತಿರಬೇಕು.

ಒಟ್ಟಿನಲ್ಲಿ ಅತಿಥಿ ಸತ್ಕಾರ, ಒಂದು ಸದ್ಗುಣ ಹಾಗೂ ಸತ್ಸಂಪ್ರದಾಯ. ಎಷ್ಟೇ ಆದರೂ ಎಲ್ಲರನ್ನು ನಮ್ಮವರೆಂದು ಭಾವಿಸುವ ಸಂಸ್ಕೃತಿಯಲ್ಲಿ ಬೆಳೆದವರಲ್ಲವೇ ನಾವು ! ಈ ಸಂಸ್ಕೃತಿಯನ್ನು ಕೈ ಬಿಡಬಾರದು. ಬಂದ ಅತಿಥಿಗಳಿಗೆ ಒಂದು ಸಣ್ಣ ಉಡುಗೊರೆಯನ್ನು ನೀಡಿ "ಮತ್ತೆ ಮತ್ತೆ ಬರುತ್ತಿರಿ" ಎಂದು ಹೇಳುತ್ತಾ ಕಳುಹಿಸಿದರಂತು ಚೆನ್ನ ಅಲ್ಲವೆ......! ಈ ರೀತಿಯಾಗಿ ನಾವು ಪಾಲಿಸಿದ್ದೆ ಆದರೆ ನಮ್ಮ ಮಕ್ಕಳು ಉತ್ತಮ ಸುಸಂಸ್ಕೃತರಾಗುವದರಲ್ಲಿ ಸಂಶಯವೇ ಇಲ್ಲ ಎನ್ನಬಹುದು.

ಸಾರ್ವಜನಿಕ ಸಮಾರಂಭಗಳಲ್ಲಿ ಭಾಗವಹಿಸುವಾಗ ಬೇಕಾದ ಸಭ್ಯತೆ ಸೌಜನ್ಯ:

ಸಭೆ ಸಮಾರಂಭಗಳಿಗೆ ಆಮಂತ್ರಣ ಬಂದಾಗ, ಮುಖ್ಯ ಅತಿಥಿಗಳಾಗಿ ಆಮಂತ್ರಿತರಾಗಿರುವಾಗ, ವೇದಿಕೆಯ ಮೇಲಿರುವಾಗ, ಕಾರ್ಯಕ್ರಮದ ನಿರೂಪಣಕಾರರಾದಾಗ, ಸ್ವಾಗತ ಕೋರುವಾಗ ಹಾಗೂ ವಂದನಾರ್ಪಣೆ ಮಾಡುವಾಗ, ನಾವು ಸಭಿಕರಾಗಿರುವಾಗ, ನಾವು ಯಾರನ್ನಾದರೂ ಭೇಟಿಯಾದಾಗ ಹೇಗೆ? ಸಭ್ಯತೆ ಸೌಜನ್ಯದಿಂದ ಕೂಡಿರಬೇಕು ಎಂಬುದನ್ನು ಪುತ್ತೂರಾಯರು ತುಂಬಾ ಅರ್ಥಪೂರ್ಣವಾಗಿ ಹೇಳಿದ್ದಾರೆ.

ನಮಗೆ ಸಭೆ ಸಮಾರಂಭಗಳಿಗೆ ಬರುವಂತೆ ಆಹ್ವಾನ ಬಂದಿರುತ್ತದೆ ಆದರೆ ನಮಗೆ ಹೋಗಲು ಸಾಧ್ಯವಾಗದಿರಬಹುದು, ಆದರೆ ಹೋಗಲಾರದ ಸಮಾರಂಭಗಳಿಗೆ ನಮ್ಮ ಅಸಹಾಯ ಕೋರುವುದು ಸೌಜನ್ಯ. ಸಂತೋಷದ ಶುಭ ಸಮಾರಂಭಗಳಿಗೆ ಮಾತ್ರ ಶುಭ ಹಾರೈಸದೆ, ಮಿತ್ರರ ಬಳಗದವರ ಪೈಕಿ

ಸಾವು-ನೋವುಗಳಾದಗಲು ಅವರಿಗೆ ಸಾಂತ್ವನ ಹೇಳುವುದು ಕೂಡ ಸೌಜನ್ಯ ಹಾಗೂ ಸಜ್ಜನಿಕೆಯಾಗಿದೆ. ಈಗ ಯಾರಾದರೂ ನಿಮ್ಮ ಕಾರ್ಯಕ್ರಮಕ್ಕೆ ಯಾರೋ ಒಬ್ಬರು ಕರೆದರೂ ಬರಲಿಲ್ಲವೆಂಬ ಕಾರಣಕ್ಕೆ ಅವರ ಕಾರ್ಯಕ್ರಮಕ್ಕೆ ಬೇಕೆಂದೇ ಹೋಗದಿರೋದು ಸಭ್ಯತೆಯಲ್ಲ. ಆಯಾ ಕಾಲಕ್ಕೆ ತಕ್ಕಂತೆ ಸಮಯ ಸಂದರ್ಭಗಳನ್ನು ಅರಿತು ನಡೆಯುವುದು ಸಭ್ಯತೆ-ಸೌಜನ್ಯ -ಸಜ್ಜನಿಕೆಯಾಗಿರುತ್ತದೆ. ನಮ್ಮವರು ಸಮಾರಂಭಗಳಿಗೆ ಕರೆಯಲಿಲ್ಲ, ಹೋಗುವುದು ಬೇಡ ಎಂಬ ಬಿಗುಮಾನ ಮಾಡದೆ, ಅಂತಹ ಕಾರ್ಯಕ್ರಮಗಳಿಗೆ ತಪ್ಪದೇ ಹೋಗುವುದು ಸಮಂಜಸವಾಗಿರುತ್ತದೆ ಎಂದಿದ್ದಾರೆ.

ಸಭೆ, ಸಮಾರಂಭಗಳಿಗೆ ಮುಖ್ಯ ಅತಿಥಿಗಳಾಗಿ ಆಮಂತ್ರಿತರಾದಾಗ ಹೇಗೆ ಸಭ್ಯತೆ ಬೇಕು ಎಂಬುದನ್ನು ಇಲ್ಲಿ ತಿಳಿಯೋಣ. ಸಭೆ ಸಮಾರಂಭಗಳಿಗೆ ಮುಖ್ಯ ಅತಿಥಿಗಳಾಗಿ ತಾವು ಬರುತ್ತೇವೆ ಎಂದು ಒಪ್ಪಿಕೊಂಡು ಆಮಂತ್ರಣ ಪತ್ರಿಕೆಯಲ್ಲಿ ತಮ್ಮ ಹೆಸರು ಮುದ್ರಿತವಾದ ಮೇಲೆ, ಹೋಗಲು ಸಾಧ್ಯವಾಗದಿದ್ದಾಗ, ನಾವು ಅದನ್ನು ಸಂಯೋಜಕರಿಗೆ ಮುಂಚಿತವಾಗಿ ತಿಳಿಸದೇ ಇರೋದು ಸಭ್ಯತೆಯಲ್ಲ. ಅಂತೆಯೇ ಕಾರ್ಯಕ್ರಮಕ್ಕೆ ಬಹಳಷ್ಟು ತಡವಾಗಿ ಬರೋದು, ತಡವಾಗಿ ಬಂದ ಮೇಲೂ, ಕಾರ್ಯಕ್ರಮದ ಸಂಯೋಜಕರ ಹಾಗೂ ತಮ್ಮ ಆಗಮನಕ್ಕಾಗಿ ಗಂಟೆಗಟ್ಟಲೆ ಕಾದು ಕುಳಿತ ಸಭಿಕರ ಕ್ಷಮೆಯಾಚಿಸದೇ, ತಮಗೆ ನೀಡಿದ ನಿಗದಿತ ಸಮಯಕ್ಕಿಂತಲೂ ದೀರ್ಘಕಾಲ ಅಸಂಬದ್ಧ ಭಾಷಣವನ್ನು ಬಿಗಿದು, ವೇದಿಕೆಯ ಮೇಲೆ ಆಸೀನವಾಗಿರುವ ಇತರ ಗಣ್ಯರ ಮಾತುಗಳನ್ನು ಕೇಳದೆ ತರಾತುರಿಯಲ್ಲಿ ಮಧ್ಯದಲ್ಲೇ ನಿರ್ಗಮಿಸುವುದು. ಎಲ್ಲವೂ ಅಸಭ್ಯ ವರ್ತನೆಗಳೇ. ಕೆಲವೊಮ್ಮೆ ಕಾರ್ಯಕ್ರಮಕ್ಕೆ ತಡವಾಗಿ ಬಂದಿದ್ದು ಒಂದು ಪ್ರಮಾದವಾದರೆ, ಕಾರ್ಯಕ್ರಮದ ಮಧ್ಯದಲ್ಲಿ ಎದ್ದು ಹೋಗುವುದು ಇನ್ನೊಂದು ಪ್ರಮಾದ. ಪೂರ್ವ ತಯಾರಿ ಇಲ್ಲದ ಭಾಷಣ ಹಾಗೇ ತಮ್ಮನ್ನು ತಾವೇ ಹೊಗಳಿಕೊಳ್ಳುವ ಭಾಷಣ, ತೂಕವಿಲ್ಲದ ಮಾತುಗಳು ಇವೆಲ್ಲ ಸಭ್ಯತೆಯೇ ಅಲ್ಲ. ಹಾಗೆಯೇ ಇಂತಹ ಕಾರ್ಯಕ್ರಮಗಳಿಗೆ ಸಮಯಕ್ಕೆ ಸರಿಯಾಗಿ ಹೋಗಿ, ಸಮಯೋಚಿತ ಭಾಷಣವನ್ನು ಮಾಡುವುದು ಉತ್ತಮ ಸಜ್ಜನಿಕೆಯಾಗಿದೆ, ಸೌಜನ್ಯವೂ ಆಗಿದೆ ಎಂದು ತುಂಬಾ ಅರ್ಥಪೂರ್ಣವಾಗಿ ಹೇಳಿದ್ದಾರೆ.

ವೇದಿಕೆಯ ಮೇಲಿರುವಾಗ ಸಭೆ ಸಮಾರಂಭಗಳಲ್ಲಿ ಕೆಲವಾರು ಸಭ್ಯತೆಗಳನ್ನು ಅನುಸರಿಸಬೇಕಾಗುತ್ತದೆ. ಇದು ಸಭಾ ಮರ್ಯಾದೆಯು ಹೌದು ನಿಗಧಿತ ಸಮಯಕ್ಕಿಂತ ಹೆಚ್ಚು ಮಾತನಾಡುವುದು ಸಭ್ಯತೆಯಲ್ಲ. ಕಾರ್ಯಕ್ರಮದ ಸಂಯೋಜಕರಿಗೆ ಸಮಸ್ಯೆಯನ್ನು ತಂದೊಡ್ಡುತ್ತದೆ. ಹಾಗಾಗಿ "ಸಮಯ ಪ್ರಜ್ಞೆ" "ಸಭಾ ಪ್ರಜ್ಞೆ" ಹಾಗೂ "ಸಂದರ್ಭ ಪಜ್ಞೆ" ಗಳನ್ನು ಪರಿಪಾಲಿಸುವುದು ಒಂದು ಶಿಷ್ಟಾಚಾರ. ಶಿಷ್ಟಾಚಾರಯುಕ್ತವಾದ ಭಾಷಣವು ನಮ್ಮ ಸಭ್ಯತೆಯನ್ನು ಎತ್ತಿ ಹಿಡಿಯುತ್ತದೆ.

ಕಾರ್ಯಕ್ರಮದ ನಿರೂಪಣಕಾರರಾದಾಗ (Master of Ceremony) ನಿರೂಪಣಕಾರರಾದ ಮಾತುಗಳು ಸ್ಪಷ್ಟ, ನಿಖರ ಹಾಗೂ ಸುಸಂಬದ್ಧವಾಗಿದ್ದು ಅರ್ಥಪೂರ್ಣವಾಗಿ ಇರಬೇಕು. ನಿರೂಪಕರ ಮಾತುಗಳು ಅತೀಯಾದಾಗ ಕೇಳುಗರಿಗೆ ಬೇಸರ ಆಗುತ್ತದೆ ಅದಕ್ಕಾಗಿಯೇ ಇವರು ಚಿಕ್ಕ ಚೊಕ್ಕ ಮಾತುಗಳನ್ನಾಡುವುದು ಉತ್ತಮ. ಪ್ರತಿಯೊಂದು ಕಾರ್ಯಕ್ರಮದ ಮುಂಚೆ ಆ ಕಾರ್ಯಕ್ರಮದ ಬಗ್ಗೆ ಸೂಕ್ಷ್ಮವಾಗಿ, ಸಂಕ್ಷೇಪವಾಗಿ ಪ್ರಸ್ತಾವನೆ ಹಾಗೂ ಆ ಕಾರ್ಯಕ್ರಮದ ನಂತರ ಅವರ ಬಗ್ಗೆ ಒಂದೆರಡು ಸವಿ ನುಡಿಗಳು ಇಲ್ಲವೇ ಮೆಚ್ಚುಗೆಯ ಮಾತುಗಳು ಅಪೇಕ್ಷಣೀಯ ಸಂದರ್ಭಕ್ಕೆ ಸರಿಯಾಗಿ ಮಾತನಾಡುವ

[illegible]

ಹಾಗೂ ಕಾರ್ಯಕ್ರಮದಲ್ಲಿ ಆಗುವ ಸಣ್ಣ ಪುಟ್ಟ ಬದಲಾವಣೆಗಳನ್ನು ಮಾಡಿಕೊಳ್ಳುವ ಚಾತುರ್ಯತೆ ನಿರೂಪಕರಿಗೆ ಇರಲೇಬೇಕು. ಸ್ಪಷ್ಟ ಉಚ್ಚಾರ, ಆಕರ್ಷಕ ಶಬ್ದಗಳ ಸೂಕ್ತ ಪ್ರಯೋಗ, ತಿಳಿ ಹಾಸ್ಯ ಹಾಗೂ ಸಮಯ, ಸಂದರ್ಭ ಹಾಗೂ ಸಭಾ ಪ್ರಜ್ಞೆ ಉತ್ತಮ ನಿರೂಪಕರ ಬಂಡವಾಳ, ಹಾಗೆಯೇ ಸಭ್ಯತೆ-ಸೌಜನ್ಯ ಇವರ ಮಾತುಗಳಲ್ಲಿ ಎದ್ದು ಕಾಣುವಂತಿರಬೇಕು.

ಸ್ವಾಗತ ಕೋರುವಾಗ ಹಾಗೂ ವಂದನಾರ್ಪಣೆಗೆ ಮಾಡುವಾಗ ಅನುಸರಿಸಬೇಕಾದ ಸಭ್ಯತೆ-ಸೌಜನ್ಯಗಳು ಇಂತಿವೆ. ಮಾತುಗಳು ಅತಿಯಾಗಬಾರದು, ಇತಿಮಿತಿಯಿಂದ ಕೂಡಿರಬೇಕು, ಮಿತವಾಗಿರಬೇಕು. ಸಭೆಗೆ ಬಂದವರಲ್ಲಿ ಯಾರನ್ನೂ ಮರೆಯಬಾರದು, ಮುಖಸ್ತುತಿ ಬೇಡ. ನುಡಿಗಳು ವಾಸ್ತವಿಕತೆಯಿಂದ, ನೈಜ ಭಾವನೆಯಿಂದ ಕೂಡಿರಲಿ, ವಸ್ತು ಸ್ಥಿತಿಯಾಗಿರಲಿ, ಆಗ ಅದು ಕೇಳುಗರಿಗೆ ಮೆಚ್ಚುಗೆಯಾಗುತ್ತದೆ. ಸ್ವಾಗತ ನುಡಿಗಳ ಜೊತೆ ಜೊತೆಯಲ್ಲೆ ಹೂಗುಚ್ಛವನ್ನು ನೀಡುವಂತಾದರೆ ಸಮಯದ ಉಳಿತಾಯವು ಆಗುತ್ತದೆ. ಔಚಿತ್ಯಪೂರ್ಣವೂ ಆಗಿರುತ್ತದೆ. ಅಂತೆಯೇ ವಂದನಾರ್ಪಣೆಯ ಜೊತೆ ಸ್ಮರಣಿಕೆಗಳನ್ನು ನೀಡಿದರೆ ಬೇಗ ಕೆಲಸ ಪೂರ್ಣವಾಗುತ್ತದೆ ಇವೆಲ್ಲವೂ ಸಭ್ಯತೆ ಸೌಜನ್ಯಗಳನ್ನು ವ್ಯಕ್ತಪಡಿಸುವ ಒಂದೊಂದು ವಿಧಾನಗಳು ಅರ್ಥಪೂರ್ಣವೆನ್ನುತ್ತಾರೆ.

ನಾವು ಯಾರನ್ನಾದರೂ ಭೇಟಿಯಾದಾಗ ಅವರ ಉಭಯ ಕುಶಲೋಪರಿಯನ್ನು ಕೇಳಬೇಕು. ನಾವು ಯಾರನ್ನಾದೂ ಭೇಟಿಯಾದಾಗ ನಮ್ಮ ಬಗ್ಗೆಯೇ, ನಮ್ಮ ಸಂಸಾರದ ಬಗ್ಗೆಯೇ ಹೇಳಕೊಳ್ಳಬಾರದು ಮಾತನಾಡಲು ಅವರಿಗೂ ಅವಕಾಶ ಕೊಟ್ಟು, ಅವರ ಮಾತುಗಳನ್ನು ಕೇಳಿಸಿಕೊಳ್ಳುವುದು ಒಂದು ಸೌಜನ್ಯವೇ ಆಗಿದೆ. ಕೆಲವರಿಗೆ ಒಂದೊಂದು ಚಾಳಿ ಇರುತ್ತದೆ ಸುಮ್ಮನೆ ಹಾಗೇ ಕೆಲವು Comments ಗಳನ್ನು ಮಾಡುವುದು ಅದರಲ್ಲಿ Negative Comment ಪಾಸ್ ಮಾಡಿಬಿಡೋದು "ಏನ್ರೀ ಇಷ್ಟೊಂದು ಇಳಿದು ಬಿಟ್ಟಿದ್ದೀರಿ ! ಏನಾದರೂ ದೊಡ್ಡ ಖಾಯಿಲೆ ಬಂದು ಬಿಟ್ಟಿದ್ದೆಯಾ ? ಇಂತಹ Comment ಗಳು ಮಾನಸಿಕವಾಗಿ ದುರ್ಬಲರಾದವರ ಮೇಲೆ ಬಾರೀ ದುಷ್ಪರಿಣಾಮವನ್ನು ಬೀರಬಹುದು. ಬರೀ ನ್ಯೂನತೆಗಳ ಬಗ್ಗೆಯೇ ಮಾತನಾಡದೇ, ಕೆಲವು ಉತ್ತಮ ಅಂಶಗಳ ಬಗ್ಗೆಯೂ ಹೇಳಿದಾಗ ಅವರ ಮನಸ್ಸಿಗೂ ಸಂತೋಷವಾಗಿ, ಹರ್ಷದಾಯಕವಾಗಿರುತ್ತಾರೆ. ಅದಕ್ಕಾಗಿಯೇ ಯಾರನ್ನೇ ಆಗಲಿ ಭೇಟಿಯಾದಾಗ ಉತ್ತಮ ಅಂಶಗಳ ಬಗ್ಗೆ ಮಾತನಾಡಿದರೆ ಒಳ್ಳೆಯದು ಎನ್ನುತ್ತಾರೆ. ಇಲ್ಲಸಲ್ಲದ ವಿಚಾರಗಳನ್ನು ಬಿಟ್ಟು ಇರುವ ವಿಚಾರಗಳನ್ನೇ ಆತ್ಮೀಯತೆಯಿಂದ ಮಾತನಾಡಬೇಕು ಎಂದಿದ್ದಾರೆ.

ಬೇರೆಯವರು ನಮ್ಮನ್ನು ಹೊಗಳಿದಾಗ, ತೆಗಳಿದಾಗ ಹೇಗೆ ಮನಸ್ಥಿತಿಯನ್ನು ಕಾಪಾಡಿಕೊಳ್ಳಬೇಕು ಎಂಬುದು ಇಲ್ಲಿ ಮುಖ್ಯವಾದದು. "ಹೊಗಳಿ ಹೊಗಳಿ ಹೊನ್ನಶೂಲ" ಕ್ಕೆ ಏರಿಸಬಾರದು. ಇತಿಮಿತಿಯಾಗಿಯೇ ಇರಬೇಕು, ಯಾರಾದರೂ ಹೊಗಳುವಾಗ ಅದನ್ನು ಕೇಳಿಸಿಕೊಂಡ ನಂತರವೇ ಧನ್ಯವಾದಗಳು ಎಂದು ಹೇಳಬೇಕು. ಅವರು ಮಾತನಾಡುವ ಮೊದಲೇ ನಾವು ಏನನ್ನು ಹೇಳಬಾರದು. ಹಾಗೆಯೇ ತೆಗಳುವಾಗಲು ಅವರು ಹೇಳುವ ಮಾತುಗಳನ್ನು ಗಮನಹರಿಸಿ ಕೇಳಿಸಿಕೊಳ್ಳಬೇಕು "ನಿಂದಕರು ಮಾಡುವ ಒಳ್ಳೆಯ ಕೆಲಸವನ್ನು ಹೊಗಳುವವರು ಮಾಡಲಾರರು." ನಮ್ಮ ಬಗ್ಗೆ ಯಾರಾದರೂ ಸಕಾರಾತ್ಮಕವಾದ ಸತ್ಯಾಂಶಗಳಿಂದ ಕೂಡಿದ ಟೀಕೆ ಟಿಪ್ಪಣಿ ಮಾಡಿದರೆ ಅವೆಲ್ಲವೂ ನಮ್ಮ ಒಳಿತಿಗಲ್ಲವೇ ಎಂಬ ವಿಚಾರವನ್ನು ಜಾಣರು ಮರೆತಿಲ್ಲ. ಎದುರಿನಿಂದ ಹೊಗಳಿ, ಹಿಂದಿನಿಂದ ತೆಗಳುವ, ಹಿತಶತ್ರುಗಳಿಗಿಂತ

ನೇರವಾಗಿ ನಮ್ಮ ಮುಖದ ಮೇಲೆ ಹೇಳುವವರೆ ಹಿತಚಿಂತಕರಲ್ಲವೇ ? ಇಂತಹವರ ಬಗ್ಗೆ ಪ್ರೀತಿ ಇರಲಿ, ಗೌರವವಿರಲಿ, ಕೋಪ ಮುನಿಸು ಬೇಡ. ಒಂದು ವೇಳೆ ಇತರರ ತೆಗಳಿಕೆ ಅನಾವಶ್ಯಕ, ಅನುಚಿತ, ಆಧಾರ ರಹಿತವಾಗಿದ್ದಲ್ಲಿ, ಕೇಳಿ ಸುಮ್ಮನಿದ್ದು ಬಿಡಬೇಕು. ಅದಕ್ಕೆ ಪ್ರತಿಯಾಗಿ ಸ್ಪಂದಿಸಬಾರದು. ಇದು ಸೌಜನ್ಯ. ಎಲ್ಲವನ್ನು ಸರಿಸಮಾನವಾಗಿ ಸ್ವೀಕರಿಸುವ ಸಮಭಾವ ನಮಗಿರಬೇಕು. ಇದುವೇ ಪ್ರಬುದ್ಧತೆ, ನಾವು ಪ್ರಬುದ್ಧರಾದಾಗ ಸಭ್ಯತೆ–ಸೌಜನ್ಯಗಳು ಅವಾಗಿಯೇ ಪ್ರಕಟವಾಗುತ್ತಿರುತ್ತವೆ. ಉದಾಹರಣೆಗೆ ಇತರರು ನಮ್ಮ ಹೆಂಡತಿಯನ್ನು ಹೊಗಳಿದಾಗ, ಸಂತೋಷದಿಂದ ಕೇಳಿಸಿಕೊಳ್ಳೋದು ಒಂದು ಸೌಜನ್ಯ. ಹೊಗಳಿದವರ ಬಗ್ಗೆ ಸಂಶಯ ಪಡೋದು ಸರಿಯಲ್ಲ. ಅಂತೆಯೇ ಯಾರ ಬಗ್ಗೆಯಾದರೂ ನಮ್ಮ ಪ್ರೀತಿ ವಿನಾಕಾರಣವಾಗಿದ್ದರೂ ಪರವಾಗಿಲ್ಲ ಆದರೆ ತಿರಸ್ಕಾರ ಮಾತ್ರ ಸಕಾರಣವಾಗಿರಬೇಕು. ಇದು ಒಂದು ಸೌಜನ್ಯವೇ. ನಿತ್ಯ ಜೀವನದಲ್ಲಿ ದೂರವಾಣಿಯನ್ನು ಬಳಸುವಾಗ ಆಫೀಸು ಕಛೇರಿಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ, ಸಾಮಾಜಿಕ ಜೀವನದಲ್ಲಿ, ವಾಹನಗಳಲ್ಲಿ ಪ್ರಯಾಣ ಮಾಡುವಾಗ, ಪರಿಹಾರದ ವಿಚಾರದಲ್ಲಿ, ಹೇಗೆ ಸಭ್ಯತೆಯಿಂದ ಸೌಜನ್ಯದಿಂದ ಇರಬೇಕು ಎಂಬುದನ್ನು ಪುತ್ತೂರಾಯರು ಸರಳವಾದ ಭಾಷೆಯಲ್ಲಿ ಮನದಟ್ಟಾಗುವಂತೆ ಹೇಳಿದ್ದಾರೆ.

ನಿತ್ಯ ಜೀವನದಲ್ಲಿ ಹಲವಾರು ಸಭ್ಯತೆ–ಸೌಜನ್ಯತೆಗಳನ್ನು ಪರಿಪಾಲಿಸಬೇಕಾಗುತ್ತದೆ. ನಮ್ಮ ನಡೆ ನುಡಿಯಿಂದಲೇ ಅಥವಾ ಬೇರೆ ಯಾವುದಾದರಿಂದಲು ಇನ್ನೊಬ್ಬರಿಗೆ ತೊಂದರೆಯಾಗುತ್ತಿದ್ದರೆ "ಕ್ಷಮಿಸಿ" ಎಂದು ಕೇಳಬೇಕು. ಏನಾದರೂ ಉಪಕಾರ ಮಾಡಿಸುವ ಸಂಧರ್ಭ ಬಂದರೆ 'ದಯವಿಟ್ಟು' ಎಂಬ ಪದವನ್ನು ಬಳಸಿ ಮಾತನ್ನು ಆರಂಭಿಸಬೇಕು. ಅಂತೆಯೇ ಉಪಕಾರ ಪಡೆದ ನಂತರ 'ಧನ್ಯವಾದಗಳು' ಬಹಳ ಉಪಕಾರವಾಯಿತು, 'ನಿಮಗೆ ನಾನು ಆಬಾರಿಯಾಗಿರುತ್ತೇನೆ' ಎಂದು ಕೃತಜ್ಞತಾ ಭಾವವನ್ನು ಹೊಂದಿರಬೇಕು. ನಿತ್ಯ ಜೀವನದಲ್ಲಿ ಕಾಲಕ್ಕೆ ತಕ್ಕಂತೆ ಸಭ್ಯತೆ–ಸೌಜನ್ಯಗಳನ್ನು ಅಳವಡಿಸಿಕೊಳ್ಳುತ್ತಾ ಸಾಗಬೇಕು ಎಂದು ಹೇಳಿರುತ್ತಾರೆ.

ದೂರವಾಣಿಯನ್ನು ಬಳಸುವಾಗ ಸಭ್ಯತೆ ಹೇಗಿರಬೇಕು ಎಂಬುದನ್ನು ತಿಳಿಯೋಣ. ದೂರವಾಣಿ ಕರೆ ಬಂದಾಗ, 'ನೀವ್ಯಾರು ? ಎಂದು ಕೇಳುವ ಬದಲು ಮೊದಲಿಗೆ ತಾವು ಯಾರು ಎಂಬುದನ್ನು ತಿಳಿಸಿ. ಇದು ಸಭ್ಯತೆ ಹಾಗೆಯೇ ಸಭೆ ಸಮಾರಂಭಗಳಿಗೆ ಹೋದಾಗ ನಮ್ಮ Mobile Phone ಗಳನ್ನು Silent Mode ನಲ್ಲಿ ಇಡಬೇಕಾದುದು ಒಂದು ಸಭ್ಯತೆ. ಮೊಬೈಲ್‌ನಲ್ಲಿ ಮಾತನಾಡುವಾಗ ಅಕ್ಕ–ಪಕ್ಕದವರಿಗೆ ತೊಂದರೆಯಾಗದಂತೆ ನಡೆದುಕೊಳ್ಳುವುದು ಸಭ್ಯತೆಯಾಗಿದೆ. ಆದರೆ ಇಂದಿನವರು ಯಾವುದೇ ಪರಿವೆಯೇ ಇಲ್ಲದೆ ಮೊಬೈಲ್‌ನಲ್ಲೆ ತಲ್ಲೀನರಾಗಿಬಿಟ್ಟಿರುವುದನ್ನು ಕಾಣುತ್ತೇವೆ.

ಆಫೀಸು ಕಛೇರಿಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಜನರ ನೂಕು ನುಗ್ಗಲು ತಪ್ಪಿಸಲು 'Q' ಪದ್ಧತಿಯನ್ನು ಅಳವಡಿಸಲಾಗಿದೆ. Q ಪದ್ಧತಿಯನ್ನು ನಾವು ಮುರಿಯಬಾರದು. ಇದು ಸಾರ್ವಜನಿಕರ ಹಿತಾದೃಷ್ಟಿಯಿಂದಲೇ ಮಾಡಿರುವುದು. ಹಾಗೆಯೇ ಆಫೀಸುಗಳಲ್ಲಿ ಮೇಲಾಧಿಕಾರಿಗಳು ತಮ್ಮ ಕೈ ಕೆಳಗೆ ಕೆಲಸ ಮಾಡುವವರ ಜೊತೆ ಅಸಹ್ಯವಾಗಿ ಅನುಚಿತವಾಗಿ ವರ್ತಿಸಬಾರದು ಇದು ಸಭ್ಯತೆಯಲ್ಲ. ಅನುಚಿತ ವರ್ತನೆ ಎಂದರೆ, ಬರೀ ಹೆಣ್ಣು ಮಕ್ಕಳೊಡನೆ, ಅಶ್ಲೀಲವಾಗಿ ವರ್ತಿಸುವುದು ಎನ್ನುವಷ್ಟಕ್ಕೆ ಸೀಮಿತವಲ್ಲ.

ಅನಾದಾರದಿಂದ ವರ್ತಿಸುವುದು ಸಹ ಅಸಭ್ಯ ವರ್ತನೆಗಳೇ, ಹಾಗಾಗಿ ಎಲ್ಲಾ ಕಡೆಗಳಲ್ಲು ಸಭ್ಯತೆ ಇದ್ದರೆ ಮಾತ್ರ ಸಮಾಜದ ಉದ್ಧಾರ ಸಾಧ್ಯವಾಗುವುದು ಎನ್ನುತ್ತಾರೆ.

ಹಾಗೆಯೇ ಕಾರಲ್ಲಿ ಪ್ರಯಾಣ ಮಾಡುವಾಗ ಬಸ್ಸಿಗೋ, ಆಟೋಗಾಗಿಯೇ ಕಾಯುತ್ತಿರುವ ಪರಿಚಿತರು ಗೋಚರಿಸಿದರೆ ಅವರಿಗೆ ಎಲ್ಲಾದರೂ Drop ಕೊಡಲೇ ಎಂದು ಕೇಳುತ್ತಾ ನೆರವಾಗೋದು ಒಂದು ಸೌಜನ್ಯ. ವಾಹನ ಚಾಲನೆ ಮಾಡುವಾಗ ಆಗಾಗ Horn (ಶಬ್ದ) ಮಾಡುವುದು ಸಭ್ಯತೆಯಲ್ಲ. ಇದರಿಂದ ಪಕ್ಕದ ವಾಹನದವರು ಬೈದುಕೊಳ್ಳವುದಲ್ಲದೇ ಕೆಲವೊಮ್ಮೆ ಅವಘಡಗಳಿಗೂ ಕಾರಣವಾಗುತ್ತದೆ. ವಾಹನಗಳನ್ನು ಸರಿಯಾದ ಜಾಗದಲ್ಲಿ ನಿಲುಗಡೆ (Park) ಮಾಡೋದು ಕೂಡ ಸಭ್ಯತೆಯೇ. ಕಾನೂನಿನ ಬಗ್ಗೆ ಗೌರವ ಇರಬೇಕೇ ಹೊರತು ಭಯ ಅಲ್ಲ. 'We should follow rules and regulations out of respect not out of fear' ಹಾಗಾಗಿ ನಾವು ಕಾನೂನುಗಳನ್ನು ಗೌರವಿಸಬೇಕೆ ವಿನಹ ಭಯ ಪಡುವುದಲ್ಲ. ಕಾನೂನು ಬಾಹಿರವಾಗಿ ನಡೆದುಕೊಂಡವರು ಮಾತ್ರ ಭಯ ಪಡಬೇಕೆ ವಿನಹ ಬೇರೆಯವರಲ್ಲ. ಇಂತಹ ಸಭ್ಯತೆ ಸೌಜನ್ಯಗಳು ಯಾವಾಗಲು ನಮ್ಮಿಂದಲೇ ಪ್ರಾರಂಭವಾದರೆ ದೇಶದ ಅಭಿವೃದಿ ಸಾಧ್ಯ. ಉತ್ತಮ ಪ್ರಜೆಗಳಿಂದಲೇ ಉತ್ತಮ ಸಮಾಜ ನಿರ್ಮಾಣ ಸಾಧ್ಯ ಎಂದಿದ್ದಾರೆ.

ಹೊಂದಾಣಿಕೆ ಮಾಡಿಕೊಂಡು ಸಾಗುವುದು ಒಂದು ಸಭ್ಯತೆ:

ಹೊಂದಾಣಿಕೆ ಎಂಬುದು ನಮ್ಮ ಮೂಲ ಮಂತ್ರವಾಗಬೇಕು ಆಗಲೇ ನಮ್ಮ ನಮ್ಮ ಉದ್ಧಾರ ಸಾಧ್ಯವಾಗುವುದು. ಹಾಗೆಯೇ ಹೊಂದಿಕೊಂಡು ಬಾಳೋದು ಸೌಜನ್ಯದ ಒಂದು ರೂಪ. ಬದುಕು ಕಲಿಸುವ ಒಂದು ಅತೀ ದೊಡ್ಡ ಪಾಠವೆಂದರೆ ಹೊಂದಾಣಿಕೆ ಪಾಠ. ಎಷ್ಟೋ ಸಾರಿ ಪರಿಸ್ಥಿತಿಗಳಿಗನುಗುಣವಾಗಿ ನಾವೇ ಬದಲಾಗಬೇಕೆ ಹೊರತು ವ್ಯಕ್ತಿ ಪರಿಸ್ಥಿತಿಗಳನ್ನು ಬದಲಾಯಿಸಲು ಸಾಧ್ಯವಿಲ್ಲ. ಇದುವೇ ಹೊಂದಾಣಿಕೆ.

ಹೊಂದಾಣಿಕೆ ಎಂದರೆ ತಮ್ಮ ತತ್ವ ಸಿದ್ಧಾಂತಗಳಿಗೆ, ಘನತೆ-ಗೌರವಳಿಗೆ ಚ್ಯುತಿ ಬಾರದಂತೆ, ಬದಲಾಗುವ ಪರಿಸ್ಥಿತಿಗಳಿಗೆ ಅನುಗಣವಾಗಿ, ಇಲ್ಲವೇ ನಾವು ವ್ಯವಹರಿಸುತ್ತಿರುವ ವ್ಯಕ್ತಿಗಳ ಗುಣ ಸ್ವಭಾವಕ್ಕೆ ಅನುಗುಣವಾಗಿ ಅಭಿಪ್ರಾಯ ಭೇದಗಳಿದ್ದರೂ ಅದನ್ನು ಬೆಳೆಯಗೊಡದೆ ಎಲ್ಲರ ಹಿತದೃಷ್ಟಿಯಿಂದ ಸೌಹಾರ್ಧಯುತವಾದ ವಾತಾವರಣದದ ನಿರ್ಮಾಣಕ್ಕಾಗಿ ಹೊಂದಿಕೊಳ್ಳುವುದು ಎಂದರ್ಥ.

ನಾವು ಹೇಗಿದ್ದೇವೆಯೋ ಜಗತ್ತು ಹಾಗೇ ನಮಗೆ ಸ್ಪಂದಿಸುತ್ತದೆ. ಸಮಾಜಕ್ಕೆ ನಾವು ಏನನ್ನು ಕೊಡುತ್ತೇವೆಯೋ ಅದೇ ನಮಗೆ (ತಿರುಗಿಸಿ) ವಾಪಸ್ ಬರುತ್ತದೆ. ಅನ್ಯರಿಗೆ ನಾವು ಪ್ರೀತಿ ಕೊಟ್ಟರೆ ಅವರು ಅದನ್ನೇ ನಮಗೆ ವಾಪಸ್ (ತಿರುಗಿಸಿ) ಕೊಡುತ್ತಾರೆ. ಆದ್ದರಿಂದ ನಮ್ಮ ನಡವಳಿಕೆಯಲ್ಲಿಯೇ ಸಭ್ಯತೆ-ಸೌಜನ್ಯವನ್ನು ಪ್ರಕಟಿಸಿದರೆ, ಪ್ರತಿಯಾಗಿ ಅವರು ಅದನ್ನೇ ಪ್ರಕಟಿಸುತ್ತಾರೆ. ಸಭ್ಯತೆ-ಸೌಜನ್ಯ, ಸಹನೆ, ಸಜ್ಜನಿಕೆ ಅವು ನಮ್ಮ ದೌರ್ಬಲ್ಯಗಳಲ್ಲ. ಅವು ನಮ್ಮ ಶಕ್ತಿ, ಅಸ್ತ್ರ. ಬೇರೆಯವರಿಗೆ ಈ ಅಸ್ತ್ರವನ್ನು ಕಸಿದುಕೊಳ್ಳಲು ಸಾಧ್ಯವಿಲ್ಲ. ಇವುಗಳ ಸಹಾಯದಿಂದ ಬದುಕನ್ನು ಹಸನಾಗಿಸೋಣ. ಸಲಹೆಗಳನ್ನು ನೀಡುವವರು ಕೇಳುವವರು ಬಹಳ ಮಂದಿ, ಆದರೆ ಅದರ ಲಾಭ ಪಡೆಯುವವರು ಕೆಲವೇ ಮಂದಿ.

“ವಿನಮ್ರತೆ ಕೂಡಾ ಸೌಜನ್ಯತೆಯ ಒಂದು ಪ್ರತಿರೂಪ. ತೆನೆಬಿಟ್ಟ ಪೈರು ಬಾಗುತ್ತದೆ, ಗೊನೆಬಿಟ್ಟ ಬಾಳೆ ಭಾಗುತ್ತದೆ, ಫಲ ಬಿಟ್ಟ ಗಿಡ ಬಾಗುತ್ತದೆ ಆದರೆ ಏನ್ನನು ಕೊಡದ ಮಾನವ ದೇಹ ಬೀಗುತ್ತದೆ. ಬೀಗುವುದು ಸದ್ಗುಣವಲ್ಲ, ಬಾಗುವುದು ಸದ್ಗುಣ–ಸೌಜನ್ಯ. ಸಭ್ಯತೆ ಸೌಜನ್ಯಗಳು ಹೆಚ್ಚಾದಷ್ಟು ಜನಜೀವನದ ಗುಣಮಟ್ಟವು ಹೆಚ್ಚಾಗುತ್ತದೆ. ಮಾತ್ರವಲ್ಲ ಎಲ್ಲೆಲ್ಲು ಶಾಂತಿ ಸಮಾಧಾನ ಸಂತೋಷಗಳು ಹರಡುತ್ತವೆ ಎನ್ನುತ್ತಾರೆ.

ವೈಚಾರಿಕ ಚಿಂತನೆಗಳಿಗೆ ಇನ್ನೊಂದು ಪೂರಕವಾದ ಪುತ್ತೂರಾಯರ ಕೃತಿ “ನೂರೆಂಟು ಕಿವಿ ಮಾತುಗಳು” (ಯಶಸ್ವಿ ಜೀವನದತ್ತ ಒಂದೊಂದು ಹೆಜ್ಜೆಗಳು) ಈ ಲೇಖನದ ಹೆಸರೇ ಸೂಚಿಸುವಂತೆ ಇದು ನಮ್ಮ ಜೀವನಕ್ಕೆ ಬೇಕಾದಂತಹ ಅಮೂಲ್ಯವಾದ ನುಡಿ ಮುತ್ತುಗಳನ್ನು ಒದಗಿಸುತ್ತದೆ. ಇದು ಒಂದು ವೈಚಾರಿಕ ಗ್ರಂಥವಿದ್ದಂತೆ ಎಂದರೆ ತಪ್ಪಾಗಲಾರದು. ಏಕೆಂದರೆ ಇವು ಮಾನವ ಜೀವನಕ್ಕೆ ಬೇಕಾದಂತಹ ಅತ್ಯಮೂಲ್ಯವಾದಂತಹ ಕಿವಿ ಮಾತುಗಳನ್ನು ಈ ಕೃತಿ ಒಳಗೊಂಡಿದೆ. ಇದರಲ್ಲಿ ಮುಖ್ಯವಾಗಿ ಸಾಮಾಜಿಕ, ಆರ್ಥಿಕ, ಧಾರ್ಮಿಕ, ನೈತಿಕ, ರಾಜಕೀಯ ಎಲ್ಲಾ ರಂಗಗಳಿಗೂ ಬೇಕಾದಂತಹ ಮೌಲ್ಯಗಳನ್ನು ಕಾಣಬಹುದು. ಈ ಮೌಲ್ಯಗಳನ್ನು ನಮ್ಮ ನಮ್ಮ ಜೀವನಕ್ಕೆ ಅಳವಡಿಸಿಕೊಂಡಿದ್ದೆ ಆದರೆ ನಮ್ಮ ಜೀವನ ಯಶಸ್ವಿಯಾಗುವುದರಲ್ಲಿ ಸಂದೇಹವೇ ಇಲ್ಲ. ಹಾಗೆಯೇ ಇದರಲ್ಲಿ ಸಂತೋಷ, ಆರೋಗ್ಯ, ಜೀವನ, ಜೀವನ ಶೈಲಿ, ಸಂಪತ್ತು, ವೃತ್ತಿ–ಪ್ರವೃತ್ತಿ, ಕಾರ್ಯದ ಸಮರ್ಪಕ ನಿರ್ವಹಣೆ, ಸಮಯ ಪ್ರಜ್ಞೆ, ಇನ್ನೂ ಮುಂತಾದ ಹಲವಾರು ವಿಷಯಗಳ ಬಗ್ಗೆ ವೈಚಾರಿಕ ಚಿಂತನೆಗಳನ್ನು ಡಾ॥ ಕೆ.ಪಿ. ಪುತ್ತೂರಾಯರವರು ಬಹಳ ಅರ್ಥಪೂರ್ಣವಾಗಿ ತಿಳಿ ಹಾಸ್ಯ ಪ್ರಜ್ಞೆಯನ್ನು ತೋರುತ್ತಾ ಹೇಳಿದ್ದಾರೆ. ಇದೊಂದು ಎಲ್ಲರೂ ಓದಿ ಜೀವನಕ್ಕೆ ಅಳವಡಿಸಿಕೊಳ್ಳಲೇ ಬೇಕಾದಂತಹ ಮಾರ್ಗಸೂಚಿ ಕೃತಿ.

<u>ಯಾರೂ ಬೇಕಾದರೂ ಸಂತೋಷವಾಗಿರಬಹುದು</u>

‘ಸಂತೋಷ ಎನ್ನುವುದು ಎಲ್ಲರೂ ಬಯಸುವ ಸಹಜ ಗುಣವಾಗಿದ್ದು ಸ್ವಾಭಾವಿಕವಾದಂತಹ ಒಂದು ಬಯಕೆ. ಇದು ನಮ್ಮೊಳಗೆ ನಾವೇ ಸೃಷ್ಟಿ ಮಾಡಿಕೊಳ್ಳಬೇಕಾದ ಒಂದು ಆಂತರಿಕ ಮನೋಸ್ಥಿತಿ. ಜೀವನದಲ್ಲಿ ಯಾವಾಗಲು ಸಂತಸದಿಂದಿರಲು ಕಾಯಬಾರದು. ಅದನ್ನು ಅಂದೇ ಅನುಭವಿಸಬೇಕ, ಸಂತೋಷಕ್ಕಾಗಿ ಕಾಯುತ್ತಲೇ ಕುಳಿತಿದ್ದರೆ ಕಾಯಲೇ ಬೇಕಾಗಿರುತ್ತದೆ. ನಮ್ಮಲ್ಲಿರುವದರಿಂದಲೇ ನಾವು ತೃಪ್ತಿ ಪಟ್ಟುಕೊಂಡು ಸಂತೋಷವಾಗಿರಬೇಕು. ಅದು ಇಲ್ಲ. ಇದು ಇಲ್ಲ (ಅದಿಲ್ಲ, ಇದಿಲ್ಲ) ಎಂದು ಯೋಚಿಸುತ್ತಲೇ ಕುಳಿತುಕೊಂಡರೆ ಸಂತೋಷ ಎನ್ನುವುದು ಗಗನ ಕುಸುಮವಾಗುವುದರಲ್ಲಿ ಸಂದೇಹವೇ ಇಲ್ಲ. “ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ” ಎಂದು ಖ್ಯಾತ ಕವಿ ಗೋಪಾಲಕೃಷ್ಣ ಅಡಿಗರು ಹೇಳಿರುವುದು ಇಂದಿನ ಪ್ರಸ್ತುತ ಜೀವನಕ್ಕೆ ಸರಿ ಹೊಂದುತ್ತದೆ. ಆದರೆ ಇರುವುದರಲ್ಲೆ ತೃಪ್ತಿಪಟ್ಟು ಜೀವನ ಸಾಗಿಸುವುದು ಸಂತೃಪ್ತ ಬದುಕು ಎನ್ನುವುದು ಪುತ್ತೂರಾಯರವರ ನಿಲುವು.

“ಆದುದರಿಂದ ನಾವು ಸಂತೋಷವಾಗಿರಬೇಕಾದರೆ, ದುರಾಸೆಗಳಿಲ್ಲದ, ಸರಳ ಸ್ವಭಾವದ ನಿರ್ಮಲ ಮನಸ್ಸಿನ ಸಾಮಾನ್ಯ ವ್ಯಕ್ತಿಗಳಾಗಿದ್ದರೆ ಸಾಕು. ಬಾರೀ ಬುದ್ಧಿವಂತರೇ, ಶ್ರೀಮಂತರೇ ಆಗಬೇಕೆಂದಿಲ್ಲ. ಶ್ರೀ ಸಾಮಾನ್ಯನಾಗಿದ್ದರೂ ಸಾಕು. ಸಂತೋಷದಿಂದರಲು ಯಾರಿಗೂ ಯಾವ ನಿರ್ಬಂಧಗಳು ಇಲ್ಲ. ಇದು

ಭಗವಂತ, ಎಲ್ಲರಿಗೂ ಸರಿಸಮಾನವಾಗಿ ನೀಡಿರುವ ಒಂದು ಸದಾವಕಾಶ. ಸಂತೋಷದಿಂದ ಇರುವುದರ ಗುಟ್ಟು ಇತರರನ್ನು ಸಂತೋಷಪಡಿಸುವುದರಲ್ಲು ಕೂಡಾ ಇದೆ. ಇಷ್ಟನ್ನೆಲ್ಲ ತಿಳಿದಿದ್ದಲ್ಲಿ ಯಾರು ಬೇಕಾದರೂ ಸಂತೋಷವಾಗಿರಬಹುದು.

<u>ನಾನೆಂದರೆ ಬೇರೆಯವರ ಕಣ್ಣಿಗೆ ಕಾಣುವ ನಮ್ಮ ಶರೀರ ಮಾತ್ರವಲ್ಲ:</u>

'Human being is made up of his Body Mind and Soul' ಎಂಬ ಮಾತಿನಂತೆ ನಾವೆಂದರೆ, ಇತರರ ಕಣ್ಣಿಗೆ ಕಾಣದ ನಮ್ಮ ಮನಸ್ಸು ಮತ್ತು ಪರಮಾತ್ಮನ ಅಂಶವಾದ ನಮ್ಮ ಅಂತರಾತ್ಮ"[೮] ಎಂದಿದ್ದಾರೆ.

ಈ ಜಗತ್ತಿಗೆ ನಾವು ಶಾರೀರಿಕ ರೂಪದಲ್ಲಿ ಮಾತ್ರ ಕಾಣಿಸಿಕೊಳ್ಳುತ್ತೇವೆ. ಆದರೆ ನಮ್ಮ ಶರೀರ, ನಮ್ಮ ಮನಸ್ಸಿನ ಭಾವನೆ, ಆಜ್ಞೆ, ಸೂಚನೆಗಳಿಗೆ ತಕ್ಕಂತೆ ಸ್ಪಂದಿಸುವ ಒಂದು ಸೇವಕ ಮಾತ್ರ. ನಮ್ಮ ಶರೀರದ ಎಲ್ಲ ಚಲನವಲನಗಳು ಯಾರ ಕಣ್ಣಿಗೂ ಕಾಣದ ಮನಸ್ಸಿನ ಅಧೀನದಲ್ಲಿರುತ್ತದೆ ಎಲ್ಲದಕ್ಕೂ ಬಹು ಮುಖ್ಯ ಕಾರಣ ನಮ್ಮ ಮನಸ್ಸೇ ಹೊರತು ಬೇರೇನೂ ಅಲ್ಲ. ಮಾನವರು ದಾನವರಾಗುವುದಕ್ಕೆ ಮನಸ್ಸೇ ಕಾರಣವಾಗಿದೆ ಎಂದಿದ್ದಾರೆ.

ಶರೀರ ಮತ್ತು ಮನಸ್ಸು ಇವೆರಡಕ್ಕೂ ಮೀರಿದ ಅಂಶ ಪ್ರತಿಯೊಬ್ಬ ಮಾನವನಲ್ಲು ಅಡಕವಾಗಿದೆ ಅದುವೇ ನಮ್ಮ ಆತ್ಮ-ಅಂತರಾತ್ಮ. ಇದು ಭಗವತ್ ಸ್ವರೂಪಿ ಹಾಗೂ ಪರಮಾತ್ಮನ ಅಂಶ. ಆತ್ಮದ ರೂಪದಲ್ಲಿ ಭಗವಂತ ಎಲ್ಲರಲ್ಲೂ ವಾಸವಾಗಿದ್ದಾನೆ. ಈ ಕಾರಣ ಎಲ್ಲರ ಆತ್ಮಗಳು ಒಂದೇ ಎಂದೆಂದು ಇದು ಅವಿನಾಶಕಾರಿ. ಆತ್ಮಕ್ಕೆ ಸಾವಿಲ್ಲ. ಅದು ಈ ಶರೀರವನ್ನು ಬಿಟ್ಟು ಹೋದ ಮೇಲೂ ಪರಮಾತ್ಮನ ಜೊತೆಗೆ ಅದು ಐಕ್ಯವಾಗುತ್ತದೆ. ಇದೇ ನಮ್ಮ ಆತ್ಮ ಸಾಕ್ಷಿ. ನಾವು ಯಾರಿಗಾದೂ ನಂಬಿಕೆ ದ್ರೋಹ ಮಾಡಬಹುದು. ಆದರೆ ಆತ್ಮ ದ್ರೋಹ, ಆತ್ಮ ವಂಚನೆ ಮಾಡುವಂತಿಲ್ಲ. ಏಕೆಂದರೆ ಆತ್ಮ ಸಚ್ಚಿದಾನಂದ ಸ್ವರೂಪಿ. ಅದು ನಿಷ್ಕಳಂಕ-ನಿರ್ಮಲ. ಶರೀರದ ಆಹಾರ- ಶುದ್ಧವಾದ ಗಾಳಿ, ನೀರು, ಪೋಷಿಕಾಂಶ ಭರಿತವಾದ ಆಹಾರಗಳಾದರೆ, ಮನಸ್ಸಿನ ಆಹಾರ- ಪ್ರೀತಿ ಕರುಣೆ, ಜ್ಞಾನ, ವಿವೇಕವಾದರೆ, ಆತ್ಮದ ಆಹಾರಗಳೆಂದರೆ ಶಾಂತಿ & ಮುಕ್ತಿ ಎಂದಿದ್ದಾರೆ.

"ಆತ್ಮನಾಂ ರಥಿನಂ ವಿದ್ಧಿ ಶರೀರಂ ರಥವೇವತು ಬುದ್ಧಿಂತು ಸಾರಥಿಂ, ವಿದ್ಧಿ ಮನಃ ಪ್ರಗ್ರಹ ಮೇವಚ" ಎಂಬ ಕಠೋಪನಿಷತ್‌ನ ಉಕ್ತಿಯಂತೆ, ದೇಹವನ್ನು ರಥವೆಂದೂ, ಆತ್ಮವನ್ನು ರಥದಲ್ಲಿ ಕುಳಿತ ಒಡೆಯನೆಂದು, ಬುದ್ಧಿಯನ್ನು ಸಾರಥಿಯೆಂದೂ, ಮನಸ್ಸನ್ನು ಕಡಿವಾಣವೆಂದು ತಿಳಿಯಬೇಕು. ಇವೆಲ್ಲದರ ಸಹಾಯದಿಂದ ಮಾನವ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಬೇಕಾಗಿದೆ. 'ಮನಸ್ಸಿಗೆ ಸರಿಯಾದ ಸಂಸ್ಕಾರವನ್ನು ಕೊಡಬೇಕು' 'ಶರೀರವನ್ನು ಮನಸ್ಥಿತಿ ಹತೋಟಿಯಲ್ಲಿಡಬೇಕು', 'ಮನಸ್ಸು ಆತ್ಮದ ಅಧೀನದಲ್ಲಿರಬೇಕು', ಈ ಮೂರು ಅಂಶಗಳು ಬೆಳೆದಾಗ ಮಾತ್ರ ಸಂಪೂರ್ಣ ವ್ಯಕ್ತಿಗಳಾಗಲು ಸಾಧ್ಯ ಎಂದು ಹೇಳುತ್ತಾರೆ.

ಆತ್ಮಶಕ್ತಿ ಆರದಿರಲಿ–ಆತ್ಮವಿಶ್ವಾಸ ತುಂಬಿರಲಿ

"ಆತ್ಮವೆಂಬುದು 'ಜೀವಂತ' ವಾಗಿರುವ ಜೀವದೊಳಗಿರುವ ಮೂಲ ಚೈತನ್ಯ. ದೇಹವನ್ನು ತೊರೆದ ಜೀವಾತ್ಮ ಪರಮಾತ್ಮನೊಂದಿಗೆ ವಿಲೀನಗೊಳ್ಳುತ್ತದೆ. ನಮ್ಮ ಆತ್ಮವೇ ನಮ್ಮ ಬಾಳ ಸಂಗಾತಿ" [೯]

ನಾವು ಸೋತುಬಿದ್ದಾಗ ಮತ್ತೆ ನಮ್ಮಲ್ಲಿ ಶಕ್ತಿ ತುಂಬಿ ಹುರಿದುಂಬಿಸುವುದೇ ಆತ್ಮಶಕ್ತಿ. ತನ್ನೊಳಗೆ ಅಡಗಿರುವ ಶಕ್ತಿಯ ಅರಿವೇ ಆತ್ಮವಿಶ್ವಾಸ. ಉದಾ:– ಮಹಾಭಾರದಲ್ಲಿ ಶ್ರೀ ಕೃಷ್ಣನು ಅರ್ಜುನನಗೆ ಭಗವತ್‌ಗೀತೆಯ ಮೂಲಕ ತುಂಬಿದ್ದು ಆತ್ಮವಿಶ್ವಾಸ ಅದಕ್ಕಾಗಿ ಪುತ್ತೂರಾಯರು ತುಂಬಾ ಅರ್ಥಗರ್ಭಿತವಾಗಿ "ಆತ್ಮಶಕ್ತಿ ಆಕಿದಿರಲಿ–ಆತ್ಮವಿಶ್ವಾಸ ತುಂಬಿರಲಿ" ಎಂದು ಹೇಳಿರುವುದು. ಆತ್ಮವಿಶ್ವಾಸವೆನ್ನುವುದು ಸದಾ ಕಾಲವು ಚಲನಶೀಲವಾಗಿರಬೇಕು ಎಂದಿದ್ದಾರೆ.

"Little faith says "you can do it"
More faith says "you will do it"
But great faith says "yes, it is done"
Nothing is impossible when you believe in yourself" [೧೦]

ಆತ್ಮಶಕ್ತಿ ಹೆಚ್ಚಿಸಿಕೊಳ್ಳಲು ನಾವು ಯಾರನ್ನು ಕಾಯಬೇಕಾಗಿಲ್ಲ ಅವಲಂಬಿಸುವುದು ಬೇಕಾಗಿಲ್ಲ. ಅದು ನಮ್ಮ ಸ್ವಾರ್ಜಿತ ಶಕ್ತಿ. ಅದು ನಮ್ಮೊಳಗಿನ ಶಕ್ತಿ, ಆತ್ಮಶಕ್ತಿ ಆರದೇ ಆತ್ಮವಿಶ್ವಾಸ ತುಂಬಿರಲಿ. ಸೋತಾಗಲು ಗೆದ್ದೆ ಗೆಲ್ಲುವೇ ಎಂಬ ಆತ್ಮವಿಶ್ವಾಸ ಯಾವಾಗಲು ಮನೆ ಮಾಡಿರಬೇಕು ಎನ್ನುತ್ತಾರೆ.

ಕಾರ್ಯದ ಒತ್ತಡವನ್ನು ಹತ್ತಿಕ್ಕುವುದು ಹೇಗೆ ?

ಕಾರ್ಯದ ಒತ್ತಡವನ್ನು (Stress Management) ನಿಭಾಯಿಸುವುದು ಹೇಗೆ ? ಒತ್ತಡವನ್ನು ನಿಭಾಯಿಸುವುದು ಸಹ ಒಂದು ಕಲೆಯೇ;

ಇತ್ತೀಚಿನ ದಿನಗಳಲ್ಲಿ ಎಲ್ಲರಿಗೂ ಕಾರ್ಯದ ಒತ್ತಡ ಇದ್ದೆ ಇದೆ, ಇದು ಸರ್ವೇ ಸಾಮಾನ್ಯವಾದುದಾಗಿದೆ. ಪ್ರತಿಯೊಬ್ಬರ ಬಾಯಲ್ಲು ಬರೀ 'Stress' ಎಂಬ ಪದ ಸಾಮಾನ್ಯವಾಗಿಬಿಟ್ಟಿದೆ. ಕಾರ್ಯದ ಒತ್ತಡವನ್ನು ಹತ್ತಿಕ್ಕುವುದು ಹೇಗೆ ? ಎಂಬುದರ ಬಗ್ಗೆ ಈಗ ತಿಳಿಯೋಣ.

- ಇಂದು ಮಾಡಬೇಕಾದ ಕೆಲಸವನ್ನು ಹಿಂದಿನ ದಿನದಲ್ಲೆ ಪಟ್ಟಿಯನ್ನು ಸಿದ್ಧಪಡಿಸಿಕೊಂಡು ಸಮಯವನ್ನು ನಿಗಧಿಪಡಿಸಿಕೊಳ್ಳುವುದರಿಂದ ಕಾರ್ಯದ ಒತ್ತಡವನ್ನು ಹತ್ತಿಕ್ಕಬಹುದಾಗಿದೆ.
- 'ಪಾಲಿಗೆ ಬಂದದ್ದು ಪಂಚಾಮೃತ' ಎಂಬಂತೆ ಯಾವುದೇ ಕೆಲಸವನ್ನು ನನ್ನ ಪಾಲಿಗೆ ಬಂದ ಸದಾವಕಾಶ ಎಂದು ಭಾವಿಸಿ ಕಾರ್ಯ ನಿರ್ವಹಿಸಿದರೆ ಅದರಿಂದ ಒತ್ತಡವೇ ಉಂಟಾಗುವುದಿಲ್ಲ.
- ನಿವಾರಿಸಿಕೊಳ್ಳಲಾಗದ ಅನಿವಾರ್ಯ ಸಂದರ್ಭಗಳಿಗೆ ನಾವು ಎಂದಿಗೂ ತಲೆ ಕೆಡಿಸಿಕೊಳ್ಳಬಾರದು. ಹೇಗೆಂದರೆ ನಮ್ಮ ಬೆಂಗಳೂರಿನಲ್ಲಿ ಟ್ರಾಫಿಕ್ ಜಾಮ್ ಎನ್ನುವುದು ನಿತ್ಯದ ಬಹುದೊಡ್ಡ ಸಮಸ್ಯೆಯಾಗಿದೆ. ಅದು ಎಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ಇದು ಒಂದು ದೊಡ್ಡ ಸಮಸ್ಯೆ

ಎಂದರೆ ಏನೂ ಪ್ರಯೋಜನವಿಲ್ಲ, ಇದರ ಒತ್ತಡದಿಂದ ತಪ್ಪಿಸಿಕೊಳ್ಳಲು ಮಾರ್ಗೋಪಾಯಗಳನ್ನು ಹುಡುಕಿಕೊಳ್ಳಬೇಕು. ಅಂದರೆ ಟ್ರಾಫಿಕ್ ಜಾಮ್ (ವಾಹನ ದಟ್ಟಣೆ) ನ ಸಂಶಯವಿದ್ದಾಗ ನಾವು ಆದಷ್ಟು ಬೇಗ ಮನೆಯಿಂದ ಹೊರಟರೆ, ಯಾವ ಒತ್ತಡವು ಆಗುವುದಿಲ್ಲ. ಮನಸ್ಸು ಸಹ ಸಮಾಧಾನದಿಂದರಲು ಸಾಧ್ಯವಾಗುತ್ತದೆ.

- ಮನೆಯ ಸಮಸ್ಯೆಯನ್ನು ಆಫೀಸಿಗೆ, ಆಫೀಸಿನ ಸಮಸ್ಯೆಯನ್ನು ಮನೆಗೆ ಎಂದೂ ವರ್ಗಾಯಿಸಬಾರದು.
- ಸಮಸ್ಯೆಯನ್ನು ಯಾವಾಗಲೂ ಸವಾಲಾಗಿ ಸ್ವೀಕರಿಸಬೇಕೇ ಹೊರತು ಸಮಸ್ಯೆಯಾಗಿಯೇ ಸ್ವೀಕರಿಸಬಾರದು.

ನಾವಾಡುವ ಮಾತುಗಳು ಬಗ್ಗೆ ಎಚ್ಚರವಿರಲಿ:

ನುಡಿದರೆ ಮುತ್ತಿನ ಹಾರದಂತಿರಬೇಕು !
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು !
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು !
ನುಡಿದರೆ ಲಿಂಗ ಮೆಚ್ಚಿ ಅಹುದೆನಬೇಕು ?
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲ ಸಂಗಮ ದೇವನೆಂತೊಲಿವನಯ್ಯ ?
ಬಸವಣ್ಣನವರ ನುಡಿ (ಮಾತು) ಯ ಕುರಿತು ಈ ವಚನ ಇಲ್ಲಿಗೆ ಸಮಂಜಸವಾದುದಾಗಿದೆ.

"ಮಾತು ಆಡಿದರೆ ಹೋಯಿತು, ಮುತ್ತು ಹೊಡೆದರೆ ಹೋಯಿತು", ಮಾತೇ ಮುತ್ತು, ಮಾತೇ ಮೃತ್ಯು ಎಂಬ ನಾಣ್ನುಡಿಯಂತೆ ನಾವಾಡುವ ಮಾತುಗಳ ಬಗ್ಗೆ ಎಚ್ಚರವಿರಬೇಕು. ಮಾತು ಆಡುವ ಮುನ್ನ ಯೋಚಿಸಬೇಕು, ಸಂಧರ್ಭೋಚಿತವಾಗಿ ಮಾತುಗಳನ್ನು ಆಡುವುದು ಉತ್ತಮ. ನಾವು ನಮ್ಮ ಮನಸ್ಸಿಗೆ ಬಂದಂತೆ ಮಾತನಾಡುವುದರಿಂದ ಅಪಾಯಗಳು ಹೆಚ್ಚು. ಹಾಗಾಗಿ ಮಾತಿಗೆ ಹೆಚ್ಚು ಮೌಲ್ಯವನ್ನು ಕೊಡಬೇಕು. ಮಾತನ್ನು ಬಲ್ಲವನಿಗೆ ಎಂದೂ ಜಗಳ ಎಂಬುದೇ ಇರುವುದಿಲ್ಲ. ಮಾತು ಯಾವಾಗಲೂ ಸುಸಂಬದ್ಧವಾಗಿರಬೇಕೇ ಹೊರತು ಅಸಂಬದ್ಧವಾಗಿರಬಾರದು. ಆದುದರಿಂದ ನಾವಾಡುವ ಪದಗಳ ಬಗ್ಗೆ ನುಡಿಗಳ ಬಗ್ಗೆ ಎಚ್ಚರವಿರಬೇಕು. ಮತುಗಳ ಬಗ್ಗೆ ಹಿಡಿತವಿರಬೇಕು. ಮಾತು ಯಾವಾಗಲು ನಯ-ವಿನಯವಾಗಿ ಇರಬೇಕು ಎಂದಿದ್ದಾರೆ.

'ನಂಬಿಕೆ'ಯ ಮೇಲೆ ನಂಬುಗೆಯಿರಲಿ.

ಈ ಜಗದೊಳಗೆ ಹೆಚ್ಚಿನ ಸಂಬಂಧಗಳು ನಂಬಿಕೆಯ ಮೇಲೆ ನಿಂತಿವೆ. ಎಲ್ಲಾ ವ್ಯವಹಾರಗಳು ನಂಬಿಕೆಯ ಮೇಲೆಯೇ ನಡೆಯುತ್ತಿರುತ್ತವೆ. ಭಕ್ತರಿಗೆ ಭಗವಂತನ ಮೇಲೆ ಅಪಾರವಾದ ನಂಬಿಕೆ. ಹಾಗೆಯೇ "ನಂಬಿದವರಿಗೆ ಕಲ್ಲು ದೇವರೇ, ನಂಬಧವನಿಗೆ ದೇವರು ಕೂಡ ಕಲ್ಲೆ" ಪುರಂದರ ದಾಸರು ಇದನ್ನೇ ಹೇಳದರು, "ನಂಬಿ ಕೆಟ್ಟವರಿಲ್ಲವೋ, ನಿನ್ನ ನಂಬದೆ ಕೆಟ್ಟರೆ ಕೆಡಲಿ ಎಂಬುದಾಗಿ. "Mutual trust is the foundation of life" ಎಂದು ಮನಃಶಾಸ್ತ್ರಜ್ಞರು ಹೇಳುತ್ತಾರೆ. ನಮ್ಮನ್ನು ಹುಟ್ಟಿಸಿದ ತಂದೆ

ಯಾರೆಂಬ ಸತ್ಯ, ನಮ್ಮ ತಾಯಿಯು ನಮಗೆ ಹೇಳಿದ ಮಾತುಗಳು ನಂಬುಗೆಯಲ್ಲಿ ನಿಂತಿದೆ. ಹಾಗೆಯೇ ಮಕ್ಕಳಿಗೆ ಹೆತ್ತವರು ಕೈ ಬಿಡಲ್ಲ ಎನ್ನುವ ನಂಬಿಕೆ. ಹೀಗೆ ಒಬ್ಬರ ಮೇಲೆ ಒಬ್ಬರಿಗೆ ನಂಬುಗೆ ಇದ್ದೇ ಇರುತ್ತದೆ. ಹೀಗೆ ನಂಬಿಕೆಗಳ ಸರಮಾಲೆಯೇ ಮುಂದುವರಿಯುತ್ತದೆ. "ನಂಬುಗೆಗಿಂತ ಮಿಗಿಲಾದ ದಾಖಲಾತಿಯೇ ಬೇರೊಂದಿಲ್ಲ" ಎಂದು ಹಿರಿಯರು ಹೇಳುತ್ತಾರೆ.

ವಾಹನದಲ್ಲಿ ಪ್ರಯಾಣ ಮಾಡುತ್ತಿರುವಾಗ ನಮ್ಮ ಪ್ರಾಣ ಅವನ ಕೈಯಲ್ಲಿರುತ್ತದೆ. ಆದರೂ ಚಾಲಕನ ಮೇಲೆ ನಂಬುಗೆಯಿಂದ ಹಾಯಾಗಿ ಮಲಗಿ ನಿದ್ರಿಸುತ್ತೇವೆ. ಹಾಗೇ ಜಗತ್ತಿನ ಎಲ್ಲಾ ವ್ಯವಹಾರಗಳು ನಂಬುಗೆಯಿಂದಲೇ ನಡೆಯುವುದು. ಗಂಡ-ಹೆಂಡತಿಯರ ನಡುವಿನ ನಂಬುಗೆಯೇ ಸುಖ ಸಂಸಾರಕ್ಕೆ ಮೂಲಧಾರ. ಇವರಿಬ್ಬರ ನಡುವೆ ಏನಾದರೂ ಅಪನಂಬಿಕೆ ಬಂದರೆ ಸಾಮರಸ್ಯವೇ ಕದಡಿ ಹೋಗುತ್ತದೆ . ಹಾಗಾಗಿ ಹಿಂದಿನವರು ಹೇಳಿದ್ದು 'ಸಂಶಯ ಪಿಶಾಚಿ ಹಿಡಿದವನಿಗೆ ವಿನಾಶವೇ ಗತಿ' ಎಂದು. ಜೀವನದಲ್ಲಿ ಯಶಸ್ವಿಯಾಗಲು, ಬಾಂಧವ್ಯದ ಸುಖ ಪಡೆಯಲು, ಬೇಕಾಗುವ ಮೂಲ ಬಂಡವಾಳವೇ ನಂಬಿಕೆ' ಎಂದಿದ್ದಾರೆ.

ಹಾಗಂತ ಎಲ್ಲವನ್ನು, ಎಲ್ಲರನ್ನು ತಕ್ಷಣ ನಂಬುವ ಸ್ವಭಾವವೂ ಒಳ್ಳೆಯದಲ್ಲ. ಅನುಮಾನ ಅಪನಂಬಿಕೆಗಳು, ಸಾಕ್ಷ್ಯಾಧಾರಿತವಾಗಿರಬೇಕು, ಪ್ರಮಾಣೀಕರಿಸುವಂತಿರಬೇಕು. ಕಣ್ಣಾರೆ ಕಂಡರೂ ಅದನ್ನು ಪರಾಮರ್ಶಿಸಬೇಕು. ಅವು ನಿಜವಾಗಿದ್ದರೆ ಮಾತ್ರ ಹೆಚ್ಚೆತ್ತುಕೊಳ್ಳಬೇಕು. ಇಲ್ಲದಿದ್ದರೆ ನಾವು ಮೋಸ ಹೋಗುವುದು ಖಚಿತವಾಗುತ್ತದೆ. ಆದರೆ ವಿನಾಕಾರಣ ಸಂಶಯದ ಪಿಶಾಚಿಗೆ ಮನದಲ್ಲಿ ಅವಕಾಶ ನೀಡಬಾರದು. ಸದಾ "ನಂಬಿಕೆ" ಯ ಮೇಲೆ ನಂಬುಗೆಯಿರಬೇಕು ಎಂದಿದ್ದಾರೆ.

ಸತ್ತಮೇಲೂ, ನಾವು ಬದುಕಿರಬಹುದು !

ಸತ್ತಮೇಲೂ ನಾವು ಬದುಕಿರಲು ಸಾಧ್ಯವೇ ? ಎಂಬುದು ಕೆಲವರ ಅಭಿಮತ, ಆದರೆ ಸತ್ತಮೇಲೂ ನಾವು ಬದುಕಿರಬಹುದು, ಹೇಗೆಂದರೆ ಶಾಶ್ವತವಾದ, ನಿಜವಾದ ಸಾವು ಎಂದರೆ ಪ್ರಾಣಪಕ್ಷಿ ನಮ್ಮ ಶರೀರವನ್ನು ತೊರೆಯುವುದು ಮಾತ್ರವಲ್ಲ, ಜನರ ಮನಸ್ಸಿನಿಂದಲೂ ಶಾಶ್ವತವಾಗಿ ಮರೆಯಾಗುವುದು ಎಂದರ್ಥ. ಈ ಅರ್ಥದಲ್ಲಿ ಬಹಳ ಕಾಲ ಶಾರೀರಿಕವಾಗಿ ಬದುಕುವುದು ಅಸಾಧ್ಯ. ಆದರೆ ನಾವು ಮಾನಸಿಕವಾಗಿ ಜನರ ಮನದಲ್ಲಿ ಬದುಕಿರಲು ಸಾಧ್ಯವಿರುತ್ತದೆ. ಸದಾ ಈ ಜಗತ್ತು ನಮ್ಮನ್ನು ನೆನೆಯ ಬೇಕಾದರೆ ನಾವು ಸ್ಮರಣೀಯವಾದ ಮಹತ್ಕಾರ್ಯ, ಸಾಧನೆಗಳನ್ನು ಮಾಡಬೇಕು. ಆಗರ್ಭ ಸಿರಿವಂತನಾಗಿ, ತಮಗಾಗಿ ಬದುಕಿ ಬಾಳಿದ್ದವನನ್ನು ಜನರು ನೆನೆಯುವುದು ಇಲ್ಲ, ಬದಲಾಗಿ ಸ್ವಾತಂತ್ರ್ಯಕ್ಕಾಗಿ, ದೇಶಕ್ಕಾಗಿ ಹೋರಾಡಿದ ಮಹಾತ್ಮರನ್ನು, ಹುತಾತ್ಮರನ್ನು, ಅಪ್ರತಿಮ ಕಲಾವಿದರನ್ನು, ಅದ್ವಿತೀಯ ಸಾಹಿತಿಗಳನ್ನು, ಖ್ಯಾತ ವಿಜ್ಞಾನಿಗಳನ್ನು, ಸಾಧಕರನ್ನು ಎಂದೆಂದಿಗೂ ಮರೆಯುವುದಿಲ್ಲ. ಉದಾ:- ಶೇಕ್ಸ್‌ಪಿಯರ್, ಮಹಾತ್ಮ ಗಾಂಧಿ, ನ್ಯೂಟನ್, ಆರ್ಯಭಟ, ಇಂತಹವರನ್ನು ಸದಾ ನೆನೆಯುತ್ತಲೇ ಇರುತ್ತೇವೆ. ಹಾಗೆಯೇ ನಮ್ಮ ನಮ್ಮ ಅಜ್ಜಿ, ತಾತ, ಮುತ್ತಾತ, ಅಪ್ಪ ಇವರುಗಳನ್ನು ಸಹ ನೆನೆಯುತ್ತೇವೆ. ಇವರು ಸತ್ತು ಹೋಗಿದ್ದರೂ ಇವರು ಮಾಡಿರುವ ಸತ್ಕಾರ್ಯಗಳಿಂದ ಇವರು ಸದಾ ಬದುಕಿರುತ್ತಾರೆ, ಎಂದರ್ಥ. "ಚಲಂ ಚಿತ್ತಂ, ಚಲಂ ವಿತ್ತಂ, ಚಲಂ ಜೀವನ ಯೌವ್ವನಂ, ಚಲಾಚಲ ಮಿದರಿಸರ್ವಂ,

ಕೀರ್ತಿಯಸ್ಯ ಸ ಜೀವತಿ"[೧೧] ಎಂಬ ಮಾತಿನಂತೆ ಜೀವಿತದಲ್ಲಿ ನಾವು ಗೈದ ಸತ್ಕಾರ್ಯಗಳಿಂದಲೂ, ಪಡೆದ ಸತ್ಕೀರ್ತಿಯಿಂದಲೂ ಸದಾ ಬದುಕಿರಲು ಸಾಧ್ಯವಿದೆ.

ಈ ಹಿನ್ನಲೆಯಲ್ಲಿ ಈ ಜಗತ್ತಿಗೆ ನಮ್ಮ ಆಗಮನ ಮತ್ತು ನಿರ್ಗಮನದ ನಡುವಣ ಜೀವನಾವಧಿಯಲ್ಲಿ ನಮ್ಮ ಬದುಕು ಸುದೀರ್ಘ, ಸಂತೋಷವಾಗಿರುವುದರ ಜೊತೆ ಸಾರ್ಥಕವೂ ಆಗಿರುವಂತೆ ಶ್ರಮಿಸಬೇಕು. ಆಗಲೇ ಈ ಜೀವನ ಸಾರ್ಥಕವಾಗಿ, ಧನ್ಯತಾ ಭಾವವನ್ನು ಮೂಡಿಸುತ್ತದೆ. ಕೋಟಿ ದುಡಿದರೂ ಸಿಗದ ಶಾಂತಿ, ಆತ್ಮಾನಂದ, ಜೀವನವನ್ನು ಸಾರ್ಥಕ ಮಾಡಿಕೊಳ್ಳುವುದರಿಂದ ಸಿಗುವಂತಿದ್ದರೆ ಸಾರ್ಥಕತೆಯತ್ತ ಹೆಜ್ಜೆ ಹಾಕಲೇಬೇಕು.

ಈ ದೃಷ್ಟಿಯಲ್ಲಿ ನಾವು ಎಷ್ಟು ಕಾಲ ಬದುಕಿದೆವು ಎನ್ನುವುದಕ್ಕಿಂತ ಹೇಗೆ ಬದುಕಿದೆವು ಅನ್ನೋದು ಮುಖ್ಯವಾಗಿರುತ್ತದೆ. ಎಷ್ಟು ಗಳಿಸಿದೆವು ಅನ್ನೋದಕ್ಕಿಂತಲೂ ಗಳಿಸಿದ್ದನ್ನು ಹೇಗೆ ಬಳಸಿಕೊಂಡೆವು ಅನ್ನೋದು ಮುಖ್ಯವಾಗುತ್ತದೆ. "ಜೀವನ ಸಾರ್ಥಕವಾಗಲು, ಇಚ್ಚಾಶಕ್ತಿ ಜ್ಞಾನಶಕ್ತಿ, ಕ್ರಿಯಾಶಕ್ತಿಗಳನ್ನು ಒಳಗೊಂಡ ಆತ್ಮಶಕ್ತಿ ಸಮೃದ್ಧವಾಗಿರಬೇಕು. ಸತ್ಕೀರ್ತಿ, ಸತ್ಕಾರ್ಯಗಳನ್ನೊಳಗೊಂಡ ಸಾರ್ಥಕ ಜೀವನ ನಡೆಸಿದಾಗ ನಾವು ಅಜರಾಮರರಾಗುತ್ತೇವೆ"[೧೨] ಎಂದಿದ್ದಾರೆ.

ಆದುದರಿಂದ ಜೀವನದಲ್ಲಿ ಸಾರ್ಥಕತೆಯ ಸಂತಸದ ಸಂಭ್ರಮದ ಕ್ಷಣಗಳನ್ನು ಹೆಚ್ಚಿಸಿಕೊಳ್ಳುತ್ತ, ತನ್ಮೂಲಕ ಸತ್ತಮೇಲೂ ಬದುಕಿರೋಣ ಎನ್ನುತ್ತಾರೆ.

ಒಟ್ಟಾರೆಯಾಗಿ ವೈಚಾರಿಕ ಚಿಂತನೆಗಳು ಪ್ರಸ್ತುತ ಜೀವನಕ್ಕೆ ಬೇಕಾದಂತಹ ಉತ್ತಮ ಮಾರ್ಗದರ್ಶನವನ್ನು ಮೌಲ್ಯಯುತ ಚಿಂತನೆಗಳನ್ನು ಒದಗಿಸುವುದರ ಜೊತೆಗೆ ಮಾರ್ಗಸೂಚಿಯಾಗಿ, ಮಾರ್ಗದರ್ಶಕನಾಗಿ ಇದು ತನ್ನದೇ ಆದಂತಹ ಉತ್ತಮ ವಿಚಾರಧಾರೆಗಳನ್ನು ಒದಗಿಸುತ್ತದೆ. ಎಲ್ಲಿ ? ಹೇಗೆ ಯಾವಾಗ ? ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ತುಂಬಾ ಅರ್ಥಗರ್ಭಿತವಾಗಿ ಈ ಚಿಂತನೆಗಳು ಒಳಗೊಂಡಿದೆ.

<u>ಪುತ್ತೂರಾಯರ ಭಾಷಣಗಳಲ್ಲಿ ವೈಚಾರಿಕ ಚಿಂತನೆ ಒಂದು ವಿಶ್ಲೇಷಣೆ :</u>

- ಮಕ್ಕಳನ್ನು ಸಲಹುವುವಂತೆ ಕನ್ನಡ ಭಾಷೆ ಕಾಪಾಡಿ

  ಯಲಹಂಕ : ನಮ್ಮ ಮಕ್ಕಳನ್ನು ಸಲುಹಿದಂತೆ ಕನ್ನಡ ಭಾಷೆಯನ್ನು ಸಲಹುದು ಜವಾಬ್ದಾರಿ, ನಮ್ಮ ಮೇಲಿದೆ ಎಂಬುದನ್ನು ಸಾಹಿತಿ ಡಾ॥ ಕೆ.ಪಿ. ಪುತ್ತೂರಾಯರವರು ಹೇಳದರು.

  ಸುವರ್ಣ ಕರ್ನಾಟಕ ಜನಶಕ್ತಿ ವೇದಿಕೆಯ 6ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಸುವರ್ಣ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು 'ಕನ್ನಡ ಬೆಳಸಿ ಕನ್ನಡ ಉಳಸಿ' ಎಂಬ ಘೋಷಣೆ ನಾಡಿನಾದ್ಯಂತ ವ್ಯಾಪಕವಾಗಿ ಆಗಬೇಕು ಎಂದರು. [೧೩]

➢ ಭವಿಷ್ಯ ರೂಪಿಸುವ ವಿದ್ಯಾರ್ಥಿಗಳು : ಡಾ|| ಕೆ.ಪಿ. ಪೂತ್ತೂರಾಯರವರು

ಕೆಂಗೇರಿ ಉಪನಗರ: ನಮ್ಮ ದೇಶದ ಭವಿಷ್ಯವನ್ನು ರೂಪಿಸುವವರು ವಿದ್ಯಾರ್ಥಿಗಳು ಎಂದು ವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕ ಹಾಗೂ ಶಿಕ್ಷಣ ತಜ್ಞ ಡಾ|| ಕೆ.ಪಿ. ಪುತ್ತೂರಾಯರವರು ಹೇಳಿದರು. ನಿಮ್ಸ್ ಕಾಲೇಜು ಆಯೋಜಿಸಿದ್ದ ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮದಡಿ 'ಪರಿಣಾಮಕಾರಿ ಭೋದಿಸುವ ವಿಧಾನ' ಕುರಿತು ನಡೆದ ಕಾರ್ಯಗಾರದಲ್ಲಿ ಮಾತನಾಡಿ ನ್ಯಾಯಾಂಗ, ವೈದ್ಯಕೀಯ & ಶಿಕ್ಷಣ ಕ್ಷೇತ್ರದಲ್ಲಿ ಅಪಚಾರ, ವಂಚನೆ-ಮೋಸ, ದ್ರೋಹ, ಆಗಬಾರದು ಈ ೩ ಕ್ಷೇತ್ರಗಳು ಪವಿತ್ರವಾಗಿರಬೇಕೆಂದು ಹೇಳಿದರು. "ಆಕಾಶದಲ್ಲಿರುವ ಗ್ರಹಗಳು ನಮ್ಮ ಭವಿಷ್ಯವನ್ನು ನಿರ್ಧರಿಸಿದರೆ, ಅಂತಹ ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವವರು ಶಿಕ್ಷಕರು. ಸಹಕಾರ ಪಡೆಯುವುದು, ಸಹಕಾರ ಕೊಡುವುದು, ಅದು ನಿರಂತರ ಪ್ರಕ್ರಿಯೆಯಾಗಬೇಕು" ಎಂದರು. ಆಸಕ್ತಿ ಇಲ್ಲದ ವಿಷಯಗಳಲ್ಲಿ ಆಸಕ್ತಿ ಬರುವ ಹಾಗೇ ಮಾಡುವುದು ಒಂದು ಕಲೆ. [೧೪] ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು.

➢ ಸೇವಾ ಮನೋಭಾವನೆ ಮೈಗೂಡಿಸಿಕೊಳ್ಳಿ

ನಾಗಮಂಗಲ:- ಹುಟ್ಟು ಸಾವಿನ ನಡುವಿನ ಬದುಕಿನಲ್ಲಿ ತನ್ನ ಬದುಕು ಹಸನಾಗಿರಬೇಕೆಂದು ಬಯಸುವ ವ್ಯಕ್ತಿ ಉದಾತ್ತ ಸೇವೆ ಅಳವಡಿಸಿಕೊಂಡು ಸಮಾಜಕ್ಕೆ ಮಾದರಿಯಾಗಬೇಕು ಎಂದು ಶರೀರಕ್ರಿಯಾಶಾಸ್ತ್ರ ವಿಭಾಗದ ಅಧ್ಯಾಪಕ ಡಾ|| ಕೆ.ಪಿ. ಪುತ್ತೂರಾಯರವರು ಅಭಿಪ್ರಾಯ ವ್ಯಕ್ತಪಡಿಸಿದರು. "ವೈದ್ಯೋ ನಾರಾಯಣೋ ಹರಿಃ" ಎಂಬಂತೆ ತಮ್ಮ ಬಳಿ ಬರುವ ರೋಗಿಗಳೊಂದಿಗೆ ಸೇವಾ ಮನೋಭಾವ ಮೈಗೂಡಿಸಿಕೊಂಡು ಉತ್ತಮ ಸೇವೆ ನೀಡಬೇಕೆಂದರು.[೧೫]

<u>ವೈಚಾರಿಕ ಚಿಂತನೆಗಳ ಬಗೆಗೆ ಮಾಸ ಪತ್ರಿಕೆಗಳಲ್ಲಿ ಪ್ರಕಟಗೊಂಡ ಪುತ್ತೂರಾಯರ ಲೇಖನಗಳ ವಿಶ್ಲೇಷಣೆ:</u>

ಹರಕೆಗಳಿಂದ ನಮ್ಮ ಇಷ್ಟಾರ್ಥಗಳನ್ನು ಈಡೇರಿಸಬಹುದೇ ?

ಹರಕೆ ಎಂದರೆ ನಾವು ದೇವರನ್ನ ಬೇಡಿದಾಗ, ಅದನ್ನು ದೇವರು ನೆರವೇರಿಸಿಕೊಟ್ಟಾಗ, ಪ್ರತಿಯಾಗಿ ನಾವು ದೇವರಿಗೆ ಒಪ್ಪಿಸುವ ಒಂದು ಸೇವೆಯಾಗಿದೆ. ಇದು ಏಕಮುಖಿಯಾಗಿ ನಮಗೆ ನಾವೇ ಮಾಡಿಕೊಂಡ One Way ಒಪ್ಪಂದ. ನಮ್ಮ ಬೇಡಿಕೆಗೆ ಶಕ್ತಿ ಬರಲಿ ಎಂದು ನಮಗೆ ನಾವೇ ಮಾಡಿಕೊಂಡ ಅನುಸಂಧಾನ. ಹರಕೆಗಳು ವಿವಿಧ ಬಗೆಗಳಿಂದ ಕೂಡಿರುತ್ತವೆ. ಈ ಸಲ ಪರೀಕ್ಷೆಯಲ್ಲಿ ಉತ್ತೀರ್ಣನಾದರೆ, ಗಣಪ ನಿನಗೆ ಕಾಯಿ ಒಡಿಸುತ್ತೇನೆ, ಹಾಗೆಯೇ ತಿಮ್ಮಪ್ಪ ನಿನಗೆ ಕೂದಲು ಕೊಡುತ್ತೇನೆ. ದೇವರೇ ನಿನಗೆ ಉರುಳು ಸೇವೆ ಮಾಡುತ್ತೇನೆಂದು ವಿದ್ಯಾರ್ಥಿಗಳ ಹರಕೆಗಳಾಗಿದ್ದರೆ, ಬೆಳ್ಳಿ ಕಿರೀಟ, ಚಿನ್ನದ ಕಿರೀಟ ಕೊಡುತಿನೆಂಬ ರಾಜಕಾರಣಿಗಳ Conditional ವರ ಬೇಡಿಕೆಗಳು ಇವೆಲ್ಲವನ್ನು ಇಲ್ಲಿ ನೋಡಬಹುದು. ಇವೆಲ್ಲ ಕೆಲವು

ಷರತ್ತುಬದ್ಧವಾದ ಬೇಡಿಕೆಗಳಿಗೆ ಉದಾಹರಣೆಗಳು. ಈ ರೀತಿಯ ಹರಕೆಗಳು ನಮ್ಮ ನಮ್ಮ ಸ್ವಾರ್ಥಕಷ್ಟೇ ಹೊರತು ದೇವರ ಮೇಲಿನ ಪ್ರೀತಿಯಿಂದ ಅಲ್ಲ ಎನ್ನಬಹುದಾಗಿದೆ.

ದೇವರಿಗೆ ಹರಕೆ ಹೊರುವುದರಿಂದ, ನಮ್ಮ ಯಾವ ಈಡೇರಿಕೆಗಳು ನೆರವೇರುವುದಿಲ್ಲ ಬದಲಾಗಿ ನಮ್ಮ ಪ್ರಯತ್ನ ಪರಿಶ್ರಮ, ಆತ್ಮವಿಶ್ವಾಸದಿಂದ ನಮ್ಮ ಈಡೇರಿಕೆಗಳು, ಬಯಕೆಗಳನ್ನು ಪೂರೈಸಿಕೊಳ್ಳಬೇಕೆ ಹೊರತು ಹರಕೆಯಿಂದಲ್ಲ. ಹರಕೆ ಎನ್ನುವುದು ಒಂದು ಅವೈಜ್ಞಾನಿಕತೆ, ಮೂಡನಂಬಿಕೆ, ಹೇಗೆಂದರೆ ಯಾವುದೇ ಒಂದು ಮಗುವಿಗೆ ಕಾಯಿಲೆ ಬಂದಾಗ, ಹರಕೆ ಹೊತ್ತು ಸುಮ್ಮನೆ ಕೂರುವುದು ವೈಜ್ಞಾನಿಕತೆಯಲ್ಲ, ಅದು ಅವೈಜ್ಞಾನಿಕತೆ, ಮೂಡನಂಬಿಕೆ. ಉತ್ತಮ ವೈದ್ಯರ ಬಳಿ ತೋರಿಸಿ ಆ ಮಗುವಿಗೆ ಚಿಕಿತ್ಸೆ ಕೊಡಿಸುವುದು ವೈಜ್ಞಾನಿಕತೆ. ನಾವು ಸತತ ಪ್ರಯತ್ನ ಪಡದೆ, ಶ್ರಮವಿಲ್ಲದೇ ಮಾಡುವ ಯಾವ ಕೆಲಸದಿಂದಲೂ ಉತ್ತಮ ಪ್ರತಿಫಲ ಸಾಧ್ಯವಿಲ್ಲ. ಶ್ರಮವಿಲ್ಲದೇ ಉತ್ತಮ ಪ್ರತಿಫಲ ಬೇಕೆನ್ನುವವನು ಈ ರೀತಿಯ ಹರಕೆಯಗಳಿಗೆ ಮೊರೆ ಹೋಗುತ್ತಾನೆಯೇ ಹೊರತು ಶ್ರಮವಹಿಸುವವನು ಹೋಗುವುದಿಲ್ಲ.

ಹಾಗಂತ ನಾವು ದೇವರನ್ನು ಪ್ರಾರ್ಥಿಸಬಾರದೆಂದಲ್ಲ, ಹರಕೆ ಬೇರೆ, ಪ್ರಾರ್ಥನೆ ಬೇರೆ, ಹರಕೆಗೆ ಬೆಲೆ ಇಲ್ಲ, ಆದರೆ ಪ್ರಾರ್ಥನೆಗೆ ಶಕ್ತಿ ಇದೆ, ಹರಕೆ ವ್ಯವಹಾರಿಕ, ಪ್ರಾರ್ಥನೆ ಆಧ್ಯಾತ್ಮಿಕ ಎಂಬುದು ಇವರ ನಿಲುವು. ಯಾವುದೇ ಷರತ್ತುಗಳನ್ನು ಹೊರಿಸದೇ, ನಮ್ಮ ಮನವಿಯನ್ನು ಸಲ್ಲಿಸುವ ವಿಧಾನವೇ ಪ್ರಾರ್ಥನೆ. ಭಗವಂತನಿಗೆ, ನಮ್ಮ ಪ್ರಾಮಾಣಿಕ ಪ್ರಯತ್ನ ಮಾಡಿದ ನಂತರ, ನಾನು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ, ಫಲಿತಾಂಶ ನಿನ್ನದು, ಇದರ ಮೇಲೆ ನಿನ್ನ ಅನುಗ್ರಹವಿರಲಿ ಎಂದು ಮನಃ ಪೂರ್ವಕವಾಗಿ ಪ್ರಾರ್ಥಿಸಿದರೆ ಭಗವಂತ ಒಲಿದು ಹರಸಬಹುದು. ಇದನ್ನೇ ಭಗವನ್ ಶ್ರೀ ಕೃಷ್ಣ ಗೀತೆಯಲ್ಲಿ ಕರ್ಮಸಿದ್ಧಾಂತದ ಮೂಲಕ ಸಾರಿದ್ದಾನೆ "ಕೆಲಸ ಮಾಡುವಷ್ಟೇ, ಕರ್ಮ ಗ್ಯಯ್ಯುವಷ್ಟೆ ಮಾತ್ರ ಹಕ್ಕು ನಿನ್ನದು, ಅದರ ಫಲಾಫಲಗಳನ್ನು ನಿನಗೆ ಬಿಟ್ಟುಬಿಡು" ಎಂಬುದೇ ಅವನ ಸಂದೇಶ. ಆದುದರಿಂದ ಯಾವಾಗಲು ನಾವು ದೃಢಚಿತ್ತದಿಂದ, ನಿಷ್ಠೆಯಿಂದ ಮಾಡಬೇಕು. ಒಳ್ಳೆಯ ಕೆಲಸಗಳಿಗೆ ಪ್ರಾಮಾಣಿಕ ಪರಿಶ್ರಮಗಳಿಗೆ ಪರಮಾತ್ಮನ ಅನುಗ್ರಹವೂ ಇರುತ್ತದೆ. ತಕ್ಕ ಪ್ರತಿಫಲವೂ ಪ್ರಾಪ್ತಿಯಾಗುತ್ತದೆ.

ಸಾಮಾನ್ಯವಾಗಿ ತಮ್ಮ ಸಾಮರ್ಥ್ಯದ ಮೇಲೆ ತಮಗೇ ನಂಬಿಕೆಯಿಲ್ಲದವರು, ಆತ್ಮವಿಶ್ವಾಸವಿಲ್ಲದ ದುರ್ಬಲ ಮನಸ್ಸಿನವರು, ಅಸಹಾಯಕ ಸ್ಥಿತಿಯನ್ನು ಎದುರಿಸಲಾರದವರು ಹರಕೆ ಹೊರುತ್ತಾರೆ. ಆದರೆ ಆತ್ಮ ವಿಶ್ವಾಸವುಳ್ಳವರು, ಕಾರ್ಯತತ್ಪರರು, ಶ್ರದ್ಧೆಯಿಂದ ತಮ್ಮ ಕೆಲಸಗಳನ್ನು ಮಾಡಿ ಮುಂದುವರಿಯುತ್ತಾರೆ. ದುರ್ಬಲ ಮನಸ್ಸು ಕತ್ತಲಿದ್ದಂತೆ. ಪ್ರಬಲ ಮನಸ್ಸು ಬೆಳಕು ಇದ್ದಂತೆ, ಜ್ಞಾನವೆಂಬ ಬೆಳಕಿನಿಂದ, ಆತ್ಮವಿಶ್ವಾಸದ ಬೆಳಕಿನಿಂದ, ದುರ್ಬಲ ಮನಸ್ಸನ್ನು ಪ್ರಬಲಗೊಳಿಸುವವುದು ಸಾಧ್ಯವಾಗುತ್ತದೆ. ನಾವು ಕೈ ಜೋಡಿಸದಿದ್ದರೆ ದೇವರು ತಾನೇ ಏನು ಮಾಡಿಯಾನು ? ಅಂತೆಯೇ ಹರಕೆ ಹೊತ್ತು ಅದನ್ನು ಪೂರೈಸದಿದ್ದರೆ ಮತ್ತೇ ದೇವರು ನಮಗೆಲ್ಲಿ ತೊಂದರೆ ಕೊಟ್ಟಾನೋ ಎಂಬ ಭಯ ಕೂಡ ಅಜ್ಞಾನವೇ ಸರಿ. ನಾವು ಸ್ವ-ಪ್ರಯತ್ನ ಮಾಡಿದ ನಂತರ, ನಾವು ದೇವರಿಗೆ "ನನ್ನ ಪ್ರಯತ್ನದ ಮೇಲೆ ಪೂರ್ಣಾನುಗ್ರಹವಿರಲಿ" ಎಂದು ಪ್ರಾರ್ಥಿಸಬೇಕು. ಈ ರೀತಿಯ ಪ್ರಾರ್ಥನೆಯೊಂದೇ ಸಾಕು ಎಂದಿದ್ದಾರೆ.

ದೇವರು ಎಂದರೆ ಸೃಷ್ಟಿಗೆ ಕಾರಣವಾದ ಯಾರಿಗೂ ತಾರತಮ್ಯ ಮಾಡದ, ಯಾವ ವ್ಯಾಮೋಹವು ಇಲ್ಲದ, ಎಲ್ಲವನ್ನು, ಎಲ್ಲರನ್ನು ನಡೆಸಿಕೊಂಡು ಹೋಗುವ ಅವರವರು ಗ್ಯಯ್ಯುವ ಪಾಪ-ಪುಣ್ಯ ಪ್ರಯತ್ನಕ್ಕನುಸಾರವಾಗಿ ಫಲವನ್ನು ನೀಡುವ, ಕಣ್ಣಿಗೆ ಕಾಣದ ಆದರೆ ಕ್ಷಣಕ್ಷಣಕ್ಕೂ ಅನುಭವಕ್ಕೆ ಬರುವ ಒಂದು ಅದ್ಭುತ ಶಕ್ತಿಯಲ್ಲವೇ ?, ಆದುದರಿಂದ ಹರಕೆಗಳಂದ ನಮ್ಮ ಇಷ್ಟಾರ್ಥಗಳ ಈಡೇರುತ್ತವೆ ಎಂಬುದು ಒಂದು ಭ್ರಮೆ ಅಷ್ಟೆ ! ಇಷ್ಟಾರ್ಥಗಳು ಈಡೇರುವುದು, ನಮ್ಮೊಳಗಿನ ಫಲದಿಂದ ಹಾಗೂ ಪರಮಾತ್ಮನ ಅನುಗ್ರಹದ ಬಲದಿಂದ ! ಈ ಅನುಗ್ರಹ ಪಡೆಯಲು ಹರಕೆಗಳಲ್ಲ. ಪೂರ್ಣ ಪ್ರಮಾಣದ ಪರಿಶ್ರಮಗಳೇ ಸಹಕಾರಿ ಎಂಬುದು ಇವರ ನಿಲುವಾಗಿದೆ.

ಪೂಜಾಲಯಗಳಗೆ ಸ್ತ್ರೀ ಪ್ರವೇಶ ನಿಷಿದ್ಧ ತರವೇ ..?

ಕೆಲವೊಂದು ದೇವಸ್ಥಾನಗಳಗೆ, ಪ್ರಾರ್ಥನಾ ಸ್ಥಳಗಳಗೆ ಹೆಚ್ಚೇಕೇ, ಕೆಲವೊಂದು ಸಭೆ ಸಮಾರಂಭಗಳಗೂ ಸ್ತ್ರೀ ಪ್ರವೇಶ ನಿಷಿದ್ಧ. ಇದು ಅಸಮಂಜಸ ಹಾಗೂ ಅವೈಜ್ಞಾನಿಕವಾದ ಧೋರಣೆ. ಇದು ಪುರುಷ ಪ್ರಧಾನವಾದ ಸಮಾಜದಿಂದ ಹುಟ್ಟಿದ ಕೆಟ್ಟ ಕಲ್ಪನೆ. ಸ್ತ್ರೀ ಕೂಡಾ ಭಗವಂತನ ಸೃಷ್ಟಿಯೇ. ಹಾಗೇ ನೋಡಿದರೆ ಜೀವಿ ಜೀವಗಳ ಎಲ್ಲಾ ಪ್ರಕ್ರಿಯೆಗಳಲ್ಲಿ ಸ್ತ್ರೀಯದ್ದೆ ದೊಡ್ಡ ಪಾತ್ರ ಎನ್ನುತ್ತಾರೆ. ಜನಜೀವನದ ಎಲ್ಲಾ ಪ್ರಕ್ರಿಯೆಗಳಲ್ಲಿ ಸಹಭಾಗಿತ್ವ ಇದ್ದೇ ಇದೆ. ಅಂದ ಮೇಲೆ ದೇವರ ಪೂಜೆ ವಿಷಯದಲ್ಲಿ ಕೆಲವು ಸಂದರ್ಭಗಳಲ್ಲಿ ಸ್ತ್ರೀ ಪ್ರವೇಶ ನಿಷೇಧಿಸುವುದು ತರವಲ್ಲ. ಆಕೆಗೂ ಸಮ ಪಾಲು, ಸಮಾನ ಹಕ್ಕು ಇರಲೇ ಬೇಕು.

ಹೆಸರಾಂತ ದೇವಸ್ಥಾನಕ್ಕೆ ಹೆಸರಾಂತ ಮಹಿಳೆಯೊಬ್ಬರು ಪ್ರವೇಶಿಸಿದ್ದರೂ ಎನ್ನುವುದು ದೊಡ್ಡ ಸುದ್ದಿಯಾಗಿ ಚರ್ಚೆಯೇ ಆಯಿತು. ಕೆಲವರು ಸ್ತ್ರೀ ಪ್ರವೇಶ ಮಾಡಿದ್ದರಿಂದ ದೇವಸ್ಥಾನವೇ ಅಶುದ್ಧವಾಯಿತು ಎಂದು ಕೆಲವರು ಉದ್ಗಾರಗಳನ್ನು ತೆಗೆದರೇ, ಆಕೆಗೆ ಶಿಕ್ಷೆ ಆಗಲೇ ಬೇಕು ಎಂದು ಆಡಳತ ಮಂಡಳಯವರು ಕೋರ್ಟಿಗೂ ಹೋದರು. ಇದರಿಂದಾಗಿ ದೇವಸ್ಥಾನದ ಭಕ್ತರುಗಳ ಭಾವನೆಗಳಗೆ ಧಕ್ಕೆಯಾಯಿತು. ಅಲ್ಲದೇ ದೇವಸ್ಥಾನವನ್ನೇ ಪುನರ್ ಶುದ್ಧೀಕರಿಸಬೇಕು ಎನ್ನುವಲ್ಲಿಯವರೆಗೆ ಮಾತನಾಡಿದ್ದು ಉಂಟು. ಆದರೆ, ದೇವಸ್ಥಾನಕ್ಕೆ ಹೋದ ಭಕ್ತ ಮಹಿಳಗೆ ಏನೂ ಆಗಲಲ್ಲ. ವಾಸ್ತವದಲ್ಲಿ ದೇವರಿಗೆ ಏನೂ ಅಶುದ್ಧವಾಗಲಲ್ಲ, ಎಲ್ಲವೂ ಯಥಾಪ್ರಕಾರವಾಗಿ ನಡೆದುಕೊಂಡೆ ಹೋಗುತ್ತಿದೆ.

ಈ ವಾದದ ಹಿಂದಿರುವ ವಿಷಯಗಳನ್ನು ಅವಲೋಕಿಸಿದರೆ, ಏನೇನೋ ವಿಚಿತ್ರ, ವಿಚಾರಧಾರೆಗಳು ಕಾಣಲ್ಪಡುತ್ತವೆ. ದೇವಾಲಯ ಒಂದು ಪವಿತ್ರ ಸ್ಥಳ. ಇಲ್ಲಿಗೆ ಬರುವ ಭಕ್ತಾದಿಗಳ ಮೇಲೆ ಕೆಲವು ಶಿಸ್ತಿನ ನಿಯಮಗಳನ್ನು ಹೇರಬೇಕೆ ವಿನಹ ಸ್ತ್ರೀ ಪ್ರವೇಶವನ್ನು ರದ್ದು ಪಡಿಸುವುದು ತರವಲ್ಲ. ಸ್ತ್ರೀಯರೆಂದರೆ ತಿಂಗಳಗೆ ಮುಟ್ಟಾಗುವವರು, ಮುಟ್ಟಾದಾಗ ಅಶುದ್ಧಗೊಳ್ಳುವರು, ಹಾಗಾಗಿ ದೇವರಿಗೆ ಅಶುದ್ಧವಾಗುತ್ತದೆ ಎಂಬುದು ಇವರ ಭ್ರಮೆ. ಇಷ್ಟು ವರುಷಗಳಂದ ನಡೆಸಿಕೊಂಡು ಬಂದ ನಿಯಮಾವಳಗಳನ್ನು ಉಲ್ಲಂಘಿಸಲು ಹೇಗೆ ಸಾಧ್ಯ ? ಎಂಬ ಪೊಳ್ಳು ತರ್ಕ ಒಂದೆಡೆಯಾದರೆ, ನಿಯಮ ಮುರಿದರೆ ದೇವರು ಶಾಪ ಕೊಡುತ್ತಾನೆ ಎಂಬ ಭಯ ಇನ್ನೊಂದೆಡೆ. ಆದರೆ ಇವುಗಳಗೆ ಯಾವುದೇ ವೈಜ್ಞಾನಿಕ ವಿವರಣೆಗಳಲ್ಲ, ಸಮರ್ಪಕ ಉತ್ತರಗಳಲ್ಲ.

"ಸ್ತ್ರೀ ಪ್ರವೇಶದಿಂದ ಪೂಜಾಲಯ ಅಶುದ್ಧವಾದರೇ, ನಾವು ನಿತ್ಯ ಆರಾಧಿಸುವ ಲಕ್ಷ್ಮೀ, ಸರಸ್ವತಿ, ದೇವಿ, ದುರ್ಗೆಯರೆಲ್ಲ ಸ್ತ್ರೀ ಸ್ವರೂಪಿ ದೇವರುಗಳಲ್ಲವೇ ? ದೇವರುಗಳಲ್ಲೆ ಇಲ್ಲದ ಭೇದ ಭಾವ, ಭಕ್ತರಲ್ಲಿ ಮತ್ತೇಕೆ ಬೇಕು ? ಹಾಗಾದರೆ ಇದೆಲ್ಲ ನಮ್ಮ ಮೂಡತನ ಅಲ್ಲವೇ, ನಮ್ಮಲ್ಲಿ ವೈಚಾರಿಕ-ವೈಜ್ಞಾನಿಕ ಚಿಂತನೆಗಳು ಸರಿಯಾಗಿ ಇಲ್ಲದ ಕಾರಣ ಮೂಡತನವನ್ನೇ ನಂಬಿ ಸಾಗುತ್ತಿದ್ದೇವೆ, ಎನ್ನಬಹುದು.

ಪೂಜೆಗೆ ನಿಜವಾಗಿ ಬೇಕಾದುದು ಶುದ್ಧವಾದ ದೇಹ ಮತ್ತು ಮನಸ್ಸು, ಇವೆರಡರ ಶುದ್ಧತೆಯ ಜೊತೆಗೆ ಏಕಾಗ್ರತೆ ಇದ್ದರೆ ಪೂಜೆ ಪ್ರಾರ್ಥನೆಗಳು ಫಲಕಾರಿಯಾಗಲ್ಲವು. ಮೋಸ, ವಂಚನೆ, ದ್ರೋಹ ವೆಸಗಿ ಬಂದು ಸ್ನಾನ ಮಾಡಿ ಮಡಿ ವಸ್ತ್ರಗಳನ್ನು ಧರಿಸಿ, ಪೂಜೆ ಮಾಡಿದರೂ ಅದು ದೇವರಿಗೆ ಸಲ್ಲದು. ಈ ಸತ್ಯವನ್ನರಿತೇ ದಾಸರು "ತನು ಶುದ್ಧಿ ಇಲ್ಲದವಗೆ ತೀರ್ಥದ ಫಲವೇನು ? ಮನಃ ಶುದ್ಧಿ ಇಲ್ಲದವಗೆ ಮಂತ್ರದ ಫಲವೇನು ? ಎಂದು ಹೇಳದರು. ಹಾಗೆಯೇ ಪ್ರಸಿದ್ಧ ಗಾಯಕರು ಅನ್ಯ ಮತಕ್ಕೆ ಸೇರಿದವರೆಂಬ ಒಂದೇ ಒಂದು ಕಾರಣಕ್ಕೆ ಅವರಿಗೆ ಆ ದೇವರ ದರ್ಶನ ನಿಷಿದ್ಧ ಮಾಡಿದರು. ಆದರೆ ಅನ್ಯ ಮತಕ್ಕೆ ಸೇರಿದವರೇ ಹಾಡಿದ ದೇವರ ನಾಮಗಳನ್ನು ಪೂಜಾಲಯಗಳಲ್ಲಿ ಸುಪ್ರಭಾತವಾಗಿ ಹಾಕುತ್ತಾರೆ, ಇದು ಯಾವ ಧರ್ಮ ? ಇದು ಸಂಕುಚಿತ ದೃಷ್ಟಿಯ ಸಂಕೇತವಲ್ಲವೇ !

ಈ ಎಲ್ಲಾ ಹಿನ್ನಲೆಯಲ್ಲಿ ದೇವರ ದರ್ಶನ ಎಲ್ಲಾ ಭಕ್ತರಿಗೂ ಯಾವುದೇ ಬೇಧಭಾವವಿಲ್ಲದೇ ಮುಕ್ತವಾಗಿರಲಿ, ನಮ್ಮ ಮನಸ್ಸು ಕೂಡ ಮುಕ್ತವಾಗಿರಲಿ. ಒಟ್ಟಿನಲ್ಲಿ ದೇವರು ನಮ್ಮೆಲ್ಲ ಸಮಸ್ಯೆಗಳಿಗೆ ಉತ್ತರವಾಗಬೇಕು. ದೇವರನ್ನೇ ಒಂದು ಸಮಸ್ಯೆಯನ್ನಾಗಿ ಮಾರ್ಪಡಿಸಿಕೊಳ್ಳಬಾರದು. ಈ ಸದ್ಬುದ್ಧಿಯನ್ನು ದೇವರೇ ಎಲ್ಲರಿಗೂ ನೀಡುವಂತಾಗಲಿ ! ಎಂದಿದ್ದಾರೆ. [೧೭]

ಅಡಿ, ಟಿಪ್ಪಣಿಗಳು

೧ ಮನಮಂಥನ ಶುಭಚಿಂತನ – ಡಾ॥ ಕೆ.ಪಿ. ಪುತ್ತೂರಾಯರು, ಜ್ಯೋತಿ ಪ್ರಕಾಶನ, ಬೆಂಗಳೂರು ೨೦೦೪, ಪುಟ – ೧

೨ ಅದೇ, ಪುಟ – ೧

೩ ಅದೇ, ಪುಟ – ೩೯

೪ ಸಭ್ಯತೆ ಸೌಜನ್ಯ, ಕೆ.ಪಿ. ಪುತ್ತೂರಾಯರು, ಜ್ಯೋತಿ ಪ್ರಕಾಶನ ೨೦೧೨, ಪುಟ – ೧

೫ ಅದೇ, ಪುಟ – ೪

೬ ಅದೇ, ಪುಟ – ೭

೭ ಅದೇ, ಪುಟ – ೧೨

೮ ನೂರೆಂಟು ಕಿವಿ ಮಾತುಗಳು ಕೆ.ಪಿ, ಪುತ್ತೂರಾಯರು ಜ್ಯೋತಿ ಪ್ರಕಾಶನ ೨೦೧೦ ಪುಟ–೩

೯ ಅದೇ, ಪುಟ – ೭

೧೦ ಅದೇ, ಪುಟ – ೮

೧೧ ಅದೇ, ಪುಟ – ೧೫೭

೧೨ ಅದೇ, ಪುಟ – ೧೫೮

೧೩ ದಿನ ಪತ್ರಿಕೆ

೧೪ ದಿನ ಪತ್ರಿಕೆ

೧೫ ದಿನ ಪತ್ರಿಕೆ

೧೬ ಪ್ರಿಯಾಂಕ ಮಾಸ ಪತ್ರಿಕೆ ಏಪ್ರಿಲ್ ೨೦೧೭

೧೭ ಪ್ರಿಯಾಂಕ ಮಾಸ ಪತ್ರಿಕೆ ಜೂನ್ ೨೦೧೭

ಅಧ್ಯಾಯ : 4

ಡಾ॥ ಕೆ.ಪಿ. ಪುತ್ತೂರಾಯರ ಸಾಹಿತ್ಯದಲ್ಲಿ ವೈಜ್ಞಾನಿಕ ಚಿಂತನೆಗಳು

ಈ ಅದ್ಭುತ ಭೂಮಿಯ ಮೇಲೆ ಎರಡು ಜಗತ್ತುಗಳಿವೆ. ಒಂದು ಸಸ್ಯ ಜಗತ್ತು, ಇನ್ನೊಂದು ಪ್ರಾಣಿ ಜಗತ್ತು. ಪ್ರಾಣಿ ಜಗತ್ತಿಗೆ ಸೇರಿದ ಜೀವರಾಶಿಗಳು ಆರಂಭವಾಗಿದ್ದೇ ಏಕಕಣ ಜೀವಿಯಿಂದ, ಕಾಲ ಕಳೆದಂತೆ, ವಿಕಸನದ ಪ್ರಕ್ರಿಯೆ ಮುಂದುವರಿದಂತೆ, ಏಕಕಣ ಜೀವಿಗಳು ಬದುಕಿನ ಹಲವಾರು ಜೈವಿಕ ಕ್ರಿಯೆಗಳನ್ನು ನಿಭಾಯಿಸಲು ಅಸಮರ್ಥವಾದಾಗ, ಜೀವಕೋಶಗಳು ಪರಿವರ್ತನೆಗೊಂಡು, ಬಹುಕೋಶ ಜೀವಿಗಳಾಗಿ ಮಾರ್ಪಾಡಾದವು. ಈ ಪ್ರಕ್ರಿಯೆ ಸತತವಾಗಿ ಮುಂದುವರೆದು, ಮುಂದೆ ಕೋಟ್ಯಾಂತರ ಜೀವಕೋಶಗಳನ್ನೊಳಗೊಂಡ ತರತರದ ಜೀವಿಗಳು ಜನ್ಮ ತಾಳದವು. ಈ ಜೀವಿಗಳ ಪೈಕಿ ಸೃಷ್ಟಿಯಲ್ಲಿ ಕಟ್ಟಕಡೆಯದಾಗಿ ರೂಪುಗೊಂಡ ವಿಕಸಿತ ಮಾನವ ದೇಹ, ಇದಕ್ಕೆ ಕಾರಣ ಅವನ ದೇಹದೊಳಗಿರುವ ಒಂದು ರೋಚಕ ಲೋಕವಾದ ಮಾನವ ಮಿದುಳು.

ತಲೆ ಬುರುಡೆಯೊಳಗೆ ಕುಳಿತಿರುವ ಮಿದುಳಿನ ಬಗ್ಗೆ ನಮಗೆ ಗೊತ್ತಿರುವುದಕ್ಕಿಂತ, ಗೊತ್ತಿಲ್ಲದಿರುವುದೇ ಹೆಚ್ಚು. ಮಿದುಳೂ ಎಂದ ಕೂಡಲೇ 'ಬುದ್ದಿವಂತಿಕೆ' 'ಜ್ಞಾನ' ಇವುಗಳು ಮಾತ್ರ ನೆನಪಿಗೆ ಬರುತ್ತದೆ. ಮಿದುಳು ಚೆನ್ನಾಗಿ ಬೆಳೆದು, ಚೆನ್ನಾಗಿ ಕೆಲಸ ಮಾಡಿದರೆ, ಮಾತ್ರ ಜ್ಞಾನ, ಬುದ್ದಿ ಮಟ್ಟ ಎಲ್ಲವೂ ಉತ್ತಮ ಮಟ್ಟದಲ್ಲಿರುತ್ತವೆ. ಮಿದುಳು ಬೆಳೆಯದಿದ್ದ ಪಕ್ಷದಲ್ಲಿ ನಾವು ದಡ್ಡರಾಗುತ್ತೇವೆ. ಮಿದುಳಿಗೆ ಹಾನಿಯಾದ ಸಂದರ್ಭದಲ್ಲಿ ಲಕ್ವಾ, ಫಿಟ್ಸ್ ಮತ್ತು ಅನೇಕ ನರಸಂಬಂಧಿ ಕಾಯಿಲೆಗಳು ಹೀಗೆ ಉಂಟಾಗುತ್ತವೆ.

ಮಿದುಳು ಕೇವಲ ಜ್ಞಾನ, ಬುದ್ದಿ ಇವುಗಳಿಗೆ ಸೀಮಿತವಾಗಿರದೇ, ಭಾವನೆಗಳು, ಧರ್ಮ, ಆಧ್ಯಾತ್ಮಿಕತೆ, ನಮ್ಮತನದ ಅರಿವು, ಸರಿ ತಪ್ಪುಗಳ ವಿವೇಚನೆ ಇವೆಲ್ಲವೂ ಮಿದುಳಿನ ಕೆಲಸಗಳೇ ಆಗಿವೆ. ಮಿದುಳು ಎಲ್ಲವನ್ನು ನಿರ್ದೇಶಿಸಿ, ನಿಯಂತ್ರಿಸುವ ಬಹು ಮುಖ್ಯ ಕೆಲಸವನ್ನು ಮಾಡುತ್ತದೆ. ಒಂದು ನೂರು ಬಿಲಿಯನ್ ನರಕೋಶಗಳು, ಅವುಗಳ ನರಜಾಲ, ನರವಾಹಕಗಳ ಸಂಕೀರ್ಣವೇ ಮಿದುಳು. ಇದರ ಕಾರ್ಯ ವೈಖರಿ ಇಂದಿಗೂ ನಮ್ಮ ಪಾಲಿಗೆ ನಿಗೂಢವಾಗಿಯೇ ಉಳಿದಿದೆ ಎಂದು ವೈದ್ಯಲೋಕ ಹೇಳುತ್ತದೆ.

ವೈದ್ಯಲೋಕಕ್ಕೆ ಇಂದೂ ಸವಾಲಾಗಿಯೇ ಉಳಿದಿರುವ ಈ ಅಪೂರ್ವ ಅಂಗ, ಇದು ಎಷ್ಟೇ ವೈದ್ಯಲೋಕ ಮುಂದುವರೆದರೂ, ಅದಕ್ಕೆ ಸಂಪೂರ್ಣವಾದ ಚಿಕಿತ್ಸೆ ಅಸಾಧ್ಯವಾದುದ್ದು. ಏಕೆಂದರೆ ಅದು ತನ್ನಂತೆ ಚೇತರಿಸಿಕೊಂಡು, ಪುನಶ್ಚೇತನ ಪಡೆದುಕೊಳ್ಳಬೇಕೆ ಹೊರತು ಬೇರೆ ರೀತಿಯಿಂದ ಅಸಾಧ್ಯ. ಆದರೆ ಬೇರೆ ಅಂಗಗಳಿಗೆ ಔಷಧಿ, ಕಾಲದ ಮಿತಿ ಎಂದು ಹೇಳುವ ವೈದ್ಯರು, ಈ ನರಕ್ಕೆ ಸಂಬಂಧಪಟ್ಟಂತಹ ಕಾಯಿಲೆಗಳಿಗೆ, ಪರಿಪೂರ್ಣವಾಗಿ ಹೇಳಲಾರರು. ಪುನಶ್ಚೇತನಾ ಕಾರ್ಯ ತನಗೇ ತಾನೇ ಮಾಡಿಕೊಳ್ಳಬೇಕಾಗಿರುವುದು ಇದರ ಕೆಲಸವಾಗಿದೆ ಎನ್ನುತ್ತಾರೆ.

ಮಾನವ ಜನ್ಮಕ್ಕೆ ಕಿರೀಟವಿಟ್ಟಿತು ಈ ಮಿದುಳು:

ಪ್ರಾಣಿ ಜಗತ್ತಿನಲ್ಲಿ ಮಾನವನಿಗೆ ಅಗ್ರಪಟ್ಟ, ಏಕೆಂದರೆ ಇತರ ಪ್ರಾಣಿಗಳಗಿಂತ ಉತ್ಕೃಷ್ಟವಾಗಿ, ಸಂಕೀರ್ಣವಾಗಿ ಹೊಂದಿರುವ ಮಾನವ ಮಿದುಳು. ಇತರ ಯಾವುದೇ ಕಾರಣಗಳಿಂದಾಗದ ಕೆಲಸಗಳನ್ನು ಮನುಷ್ಯ ಮಾತ್ರ ಮಾಡಬಲ್ಲ. ಉದಾ:- ಮನುಷ್ಯ ಮಾತ್ರ 2 ಕಾಲುಗಳಿಂದ ಸಲೀಸಾಗಿ ಓಡಬಲ್ಲ, ನಡೆಯಬಲ್ಲ, ಸರಾಗವಾಗಿ ಮಾತಾಡಬಲ್ಲ, ಕೈಗಳಿಂದ ಬರೆಯಬಲ್ಲ, ಹಾಡಬಲ್ಲ, ಯೋಚಿಸಬಲ್ಲ, ನಗಬಲ್ಲ, ಅಳಬಲ್ಲ, ಆದರೆ ಪ್ರಾಣಿಗಳು ಅಳುವುದಿಲ್ಲ, ನಗುವುದಿಲ್ಲ, ಪ್ರೀತಿಯಿಂದ ಸಾಕಿದ ನಾಯಿಯ ಎದುರು, ನಾವು ಎಷ್ಟೇ ಚೇಷ್ಟೆ ಮಾಡಿದರೂ, ತಮಾಷೆಯಾಗಿ ಕುಣಿದು ಕುಪ್ಪಳಿಸಿದರೂ ಅದು ನಗುವುದಿಲ್ಲ. ಕಾರಣ ಅದಕ್ಕೆ ನಗುವ ಸಾಮರ್ಥ್ಯ ಇಲ್ಲ. ಮನುಷ್ಯನೊಬ್ಬನಿಗೆ ಮಾತ್ರ ಅಳುವ ಮತ್ತು ನಗುವ ಶಕ್ತಿಯಿರುವುದು.

ಹೀಗೆ ನಗು ಮನುಷ್ಯರಿಗೆ ಮಾತ್ರ ದೇವರು ಕೊಟ್ಟ ವರ. ಮನುಷ್ಯ ತನ್ನ ಮಿದುಳಿನ ಸಹಾಯದಿಂದ ಏನನ್ನಾದರೂ ಸಾಧಿಸಬಲ್ಲ. ಹೇಗೆಂದರೆ ಈ ಶ್ರೇಷ್ಠತೆಗೆ ಕಣ್ಣಿಗೆ ಕಾಣದ ತಲೆ ಬುರುಡೆಯಲ್ಲಿ ಅಂತರ್ಗತವಾಗಿರುವ ಹಾಗೂ ಬೆನ್ನು ಗಂಭದೊಳಗೂ ವಿಸ್ತರಿಸಿರುವ ಮಿದುಳಿಗೂ ಹಾಗೂ ನರ ಮಂಡಲಕ್ಕೆ ಸಲ್ಲುತ್ತದೆ. ಒಳಗಿದ್ದುಕೊಂಡೇ, ದೇಹದ ಎಲ್ಲಾ ಅಂಗಾಂಗಗಳ ಚಲನವಲನಗಳನ್ನು, ಗ್ರಂಥಿಗಳ ಕ್ರಿಯೆಗಳನ್ನು ನಿರಂತರವಾಗಿ ನಿಯಂತ್ರಿಸುತ್ತಿರುವ ಮಾನವ ಮಿದುಳಿನ ರಚನೆ & ಕಾರ್ಯ ವಿಧಾನ ಅತ್ಯಂತ ಸಂಕೀರ್ಣ ಹಾಗೂ ಅಚ್ಚರಿಗಳ ಆಗರ.

ಶರೀರದ ಇತರ ಎಲ್ಲಾ ಅಂಗಾಂಗಗಳು ಇದರ ಸೇವಕರಂತೆ, ಮಿದುಳಿನ ಆಜ್ಞೆಯಿಲ್ಲದೇ, ಶರೀರದ ಯಾವ ಭಾಗವೂ ಚಲಿಸುವಂತಿಲ್ಲ. ಪ್ರತ್ಯಕ್ಷವಾಗಿಯೇ ಪರೋಕ್ಷವಾಗಿಯೇ ಮಿದುಳು ದೇಹದ ಎಲ್ಲಾ ಚಟುವಟಿಕೆಗಳನ್ನು ನಿಯಂತ್ರಿಸುತ್ತಿರುತ್ತದೆ. ಮಿದುಳು ದೇಹದ ಇತರ ಎಲ್ಲಾ ಅಂಗಾಂಗಗಳ ಕಾರ್ಯ ಚಟುವಟಿಕೆಗಳನ್ನು ನಿಯಂತ್ರಿಸಿ, ನಿರ್ದೇಶಿಸಿ ಅವುಗಳಿಗೆ ಕಾಯಿಲೆ ಬರದಂತೆ ಕಾಪಾಡುತ್ತದೆ. ಒಂದು ವೇಳೆ ಅಂಗಾಂಗಗಳಿಗೆ ಗಾಯಗಳಾದರೂ ದುರಸ್ತಿ ಕೆಲಸ ನಿರ್ವಹಿಸುತ್ತದೆ. ಆದರೆ ಮಿದುಳಿನ ನರಕೋಶಗಳಿಗೆ ತಮ್ಮನ್ನು ತಾವೇ ದುರಸ್ಥಿ ಮಾಡಿಕೊಳ್ಳುವ ಸಾಮರ್ಥ್ಯ ಕಡಿಮೆ ಎನ್ನಲಾಗಿದೆ. ಸಾವಿರಾರು ಗಣಕಯಂತ್ರಗಳು ಮಾಡಬಲ್ಲ ಕೆಲಸಗಳನ್ನು ಮಾನವ ಮಿದುಳು ಏಕಕಾಲಕ್ಕೆ ನಿರ್ವಹಿಸಬ್ಲಲದು, ಇದು ಸೃಷ್ಟಿಯ ಸೋಜಿಗ. ನಮ್ಮ ಮಿದುಳಿನ ವೇಗ ಎಷ್ಟಿದೆ ಎಂದರೆ ನಾವು ಕೂತಲ್ಲೆ ಸಾವಿರಾರು ಮೈಲಿ ದೂರದ ದೇಶ ವಿದೇಶಗಳಲ್ಲಿರುವ ನಮ್ಮ ಮಕ್ಕಳ ಇಲ್ಲವೇ ಬಂಧು ಬಳಗದವರ ಪರಿಚಿತರ ಮುಖವನ್ನು ಕ್ಷಣಾರ್ಧದಲ್ಲಿ ನೋಡುವ ಇಲ್ಲವೇ ಅವರ ಮಾತುಗಳನ್ನು ಕೇಳಿದಂತಾಗುವ ಅನುಭವವನ್ನು ಪಡೆದುಕೊಳ್ಳಬಹುದು. ಆದ್ದರಿಂದಲೇ ಮಿದುಳನ್ನು "ಮೆಗಾ ಕಂಪ್ಯೂಟರ್" ಎಂದು ಹೇಳುವುದು.

"ಮಾನವ ಮೆದುಳು ಒಂದು ಸಾಮಾನ್ಯ ಆದರೆ ಗಣಕ ಯಂತ್ರದಂತೆ, ಅದ ತತ್ವ ಸಿದ್ಧಾಂತಕ್ಕೆ ಅನುಸಾರವಾಗಿ ತನ್ನ ಕಾರ್ಯಕಲಾಪಗಳನ್ನು ನಿರ್ವಹಿಸುತ್ತಿರುತ್ತದೆ. ಈ ವ್ಯವಸ್ಥೆ 3 ಕಾರ್ಯಾಂಶಗಳನ್ನು ಒಳಗೊಂಡಿದೆ.

1. ಮಿದುಳಿನೊಳಗೆ ಎಲ್ಲಾ ಮಾಹಿತಿಗಳ ನೋಂದಣಿ (Registration of Information)
2. ಅವುಗಳ ವಿಶ್ಲೇಷಣೆ (Analysisi or Processing of Information)
3. ಚಾಲನೆ ಅಥವಾ ಪ್ರತಿಕ್ರಿಯೆ (Execution of Movement or Reaction)" ೧

ಕ್ಷಣ ಕ್ಷಣಕ್ಕೂ ಈ ೩ ಪ್ರಕ್ರಿಯೆಗಳು ಗೊಂದಲವಿಲ್ಲದೆ ಸುಸೂತ್ರವಾಗಿ ನಡೆಯುತ್ತಿದ್ದರೆ ಅದು ಆರೋಗ್ಯವಂತರ ಲಕ್ಷಣ. ಇವುಗಳಲ್ಲಿ ಯಾವುದಾದರೂ ಒಂದೇ ಒಂದು ಏರುಪೇರಾದರೂ ಮಾನಸಿಕ ಹಾಗೂ ಶಾರೀರಿಕ ಆರೋಗ್ಯದ ಮೇಲೆ ಪರಿಣಾಮ ಬೀರೆ ಬೀರುತ್ತದೆ ಎನ್ನುತ್ತಾರೆ.

ನೆನಪುಗಳು (Memories)

"ನೋಂದಣಿಗೊಂಡ ಮಾಹಿತಿಗಳ ಪೈಕಿ, ಅತ್ಯಂತ ಅವಶ್ಯಕ ಉಪಯುಕ್ತ ಹಾಗೂ ಪ್ರಮುಖವಾದ ಹಲವಾರು ಮಾಹಿತಿಗಳನ್ನು ಮಿದುಳು ನೆನಪನ್ನಾಗಿ ಅದಕ್ಕೆಂದೇ ಮೀಸಲಾದ ತನ್ನ ನರಕೋಶಗಳಲ್ಲಿ ಶೇಖರಿಸಿಟ್ಟುಕೊಳ್ಳುತ್ತದೆ. ಶೇಖರಿಸಿಟ್ಟುಕೊಂಡ ಮಾಹಿತಿಗಳನ್ನು ಭವಿಷ್ಯದಲ್ಲಿ ಅವಶ್ಯಕತೆ ಬಿದ್ದಾಗ, ತನ್ನ ಮುಂದಿನ ನಿರ್ಧಾರಗಳಿಗೆ, ಕಾರ್ಯಾಚರಣೆಗೆ ಬಳಸಿಕೊಳ್ಳುತ್ತದೆ. ಮಿದುಳು ಎಲ್ಲಾ ನೆನಪುಗಳನ್ನು ಅಂದರೆ ಅದು ಕಹಿ ನೆನಪೇ ಆಗಿರಲಿ, ಸಿಹಿ ನೆನಪೇ ಆಗಿರಲಿ, ವಿಚಿತ್ರವೇ ಆಗಿರಲಿ, ವಿಶೇಷವೇ ಆಗಿರಲಿ ಎಲ್ಲವನ್ನು ನೆನಪಿನಲ್ಲಿಟ್ಟುಕೊಳ್ಳುತ್ತದೆ. ಒಟ್ಟಾರೆಯಾಗಿ ಮಾನವ ಮಿದುಳು ನೆನಪುಗಳ ಭಂಡಾರವೇ ಸರಿ.

ನೆನಪಿನಲ್ಲಿಯ ಸಹ ೩ ತರಹ ಇದೆ, ಅವುಗಳಲ್ಲಿ:-

1. ಅತ್ಯಲ್ಪ ಕಾಲದ ನೆನಪು (Immediate Memory)
2. ಅಲ್ಪಕಾಲೀನ ನೆನಪು (Short Term Memory)
3. ದೀರ್ಘಕಾಲದ ನೆನಪು (Long Term Memory)" ೨

ಜ್ಞಾಪಕಶಕ್ತಿ (Memory Power)

"ಜ್ಞಾಪಕಶಕ್ತಿ ಮಿದುಳಿನ ಅತ್ಯದ್ಭುತವಾದ ಸಾಮರ್ಥ್ಯಗಳಲ್ಲಿ ಒಂದು. ಅದು ಹೆಚ್ಚಿನ ಬುದ್ಧಿಶಕ್ತಿಯ ಸಂಕೇತವೂ (IQ) ಹೌದು. ಇದು ಪ್ರಾಣಿಗಳ ಹಾಗೂ ಮನುಷ್ಯನ ಅಪಾರ ಸಂಪತ್ತು ಕೂಡ ಹೌದು. ಜ್ಞಾಪಕಶಕ್ತಿ ಬಲದಿಂದ, ಅದೆಷ್ಟೋ ಕಾರ್ಯಗಳನ್ನು ಸಾಧಿಸಬಹುದು, ಹಾಗೆಯೇ ಕೊರತೆಯಿಂದ ಸಂಕಷ್ಟಗಳಿಗೂ ಸಿಲುಕಿಕೊಳ್ಳಬಹುದು. ಉಪಯುಕ್ತ ಮಾಹಿತಿಗಳ ಶೇಖರಣೆಯೇ ನೆನಪು ಮತ್ತು ಸಕಾಲದಲ್ಲಿ ಅವುಗಳ ಬಳಕೆಯೇ ಅದರಿಂದಾಗುವ ಲಾಭ" ಎನ್ನುತ್ತಾರೆ.

"ಮಿದುಳಿನ ಹಿಪ್ಪೋಕಾಂಪಸ್ (Hippocampus) ಭಾಗವು, ಅಲ್ಪಕಾಲದ ನೆನಪಿಗೆ ಕಾರಣವೆನ್ನಲಾಗಿದೆ. ನಮ್ಮ ಮಿದುಳಿನಲ್ಲಿ ಬಹುಪಾಲು ನೆನಪುಗಳು ಪ್ರಧಾನ ಮಸ್ತಿಷ್ಕದಲ್ಲಿರುವ ನರ

ಕೋಶಗಳಲ್ಲಿ ಶೇಖರವಾಗುತ್ತವೆ. ನೆನಪಿನಲ್ಲಿಟ್ಟಿಕೊಳ್ಳುವುದು ನರಸಂಧಿಗಳ ಕೆಲಸ" ಯಾವುದೇ ಒಂದು ಮಾಹಿತಿ, ಪದೇ ಪದೇ ಹಲವಾರು ನರಸಂಬಂಧಿಗಳ ಮೂಲಕ ಹಾದು ಹೋದಾಗ ಕ್ರಮೇಣ ಆ ಮಾಹಿತಿ ತಾತ್ಕಾಲಿಕ ಇಲ್ಲವೇ ಶಾಶ್ವತ ನೆನಪಾಗಿ ಮಾರ್ಪಾಡುಗೊಂಡು ನೆನಪುಗಳ ಸಂಗ್ರಹ ವ್ಯವಸ್ಥೆಯಲ್ಲಿ ಶೇಖರಗೊಂಡು, ಮುಂದೆ ಭವಿಷ್ಯದಲ್ಲಿ ಅವಶ್ಯಕತೆಯಿದ್ದಾಗ ಅದೇ ಮಾಹಿತಿಗಳನ್ನು ಸಂವೇದನಾ ವ್ಯವಸ್ಥೆಯ ಸಹಾಯವಿಲ್ಲದೇನೇ, ಅದೇ ಸಂವೇದನೆಯ ಅನುಭವವನ್ನು ಪಡೆಯಬಹುದು. ಇದುವೇ ಜ್ಞಾಪಕಶಕ್ತಿ. ಇದೇ ಅನುಭವ ತಿಳುವಳಿಕೆ ಸಕಾಲಕ್ಕೆ ಬಾರದಿದ್ದರೆ ಅದೇ ಮರೆವು ಎಂದೆನಿಸಿಕಳ್ಳುತ್ತದೆ"[8]

ಉದಾಹರಣೆಗೆ: ಯಾವುದಾದರೂ ಒಂದು ಹಾಡನ್ನೋ, ಪಾಠವನ್ನೋ ಜ್ಞಾಪಪಕದಲ್ಲಿಟ್ಟುಕೊಂಡು 10 ಬಾರಿಯಾದರೂ ಓದಬೇಕಾದ ವಿದ್ಯಾರ್ಥಿ, ಅಪ್ಪ ಅಮ್ಮನಿಗೆ ಕೊಟ್ಟ ಏಟಿನ ದೃಶ್ಯವನ್ನು ಒಂದೇ ಬಾರಿ ನೋಡಿದ್ದರೂ, ಆ ದೃಶ್ಯ ಅತನ ಜೀವನ ಪರ್ಯಂತ ಜ್ಞಾಪಕದಲ್ಲಿ ಉಳಿಯುತ್ತದೆ. ಹೀಗೆ ನೆನಪುಗಳು, ನಾವು ಪಡೆವ ಸಂವೇದನೆಗಳ ತೀವ್ರತೆ, ಅವಶ್ಯಕತೆ ಹಾಗೂ ಅವುಗಳ ಮೇಲೆ ನಮಗಿರುವ ಪ್ರೀತಿ, ಒಲವು, ಅಭಿರುಚಿಯ ಮೇಲೆ ಅವಲಂಭಿತವಾಗಿದೆ. ಗುರುಗಳು ತರಗತಿಗಳಲ್ಲಿ ಹೇಳುತ್ತಲೆ ಇರುತ್ತಾರೆ. ಜ್ಞಾಪಕಶಕ್ತಿ ಹೆಚ್ಚಿಸಿಕೊಳ್ಳಲು ವಿದ್ಯಾರ್ಥಿಗಳಿಗೆ "ಮಕ್ಕಳೇ ನಿಮ್ಮ ಪಾಠಗಳನ್ನು ಕಷ್ಟಪಟ್ಟು ಓದಬೇಡಿ, ಇಷ್ಟಪಟ್ಟು ಓದಿ, ಆಗ ಮಾತ್ರ ಸುಲಭವಾಗಿ, ಶೀಘ್ರವಾಗಿ ಜ್ಞಾಪಕದಲ್ಲಿಟ್ಟುಕೊಳ್ಳಲು ಸಾಧ್ಯ" ಎಂಬುದಾಗಿ ಹೇಳುತ್ತಾರೆ.

<u>**ಜ್ಞಾಪಕಶಕ್ತಿ ಎನ್ನುವುದು ಹೇಗಿದೆಯೋ, ಹಾಗೇ ಮರೆವು ಕೂಡ ಇದೆ.**</u>

ಮಿದುಳಿನಲ್ಲಿ ಶೇಖರಿಸಿಟ್ಟುಕೊಂಡ ಮಾಹಿತಿಗಳು ಸಕಾಲದಲ್ಲಿ ನೆನಪಿಗೆ ಬಾರದಿದ್ದರೆ, ಅದು ಮರೆಸಿಕೊಳ್ಳತ್ತದೆ. ನಾವು ಓದಿದ, ನೋಡಿದ, ಕೇಳಿದ, ಕಲಿತ ಇಲ್ಲವೇ ಅನುಭವಿಸಿದ ವಿಚಾರ ಅಥವಾ ನಾವು ನೋಡಿದ ಸಾವು-ನೋವುಗಳು ಹೀಗೆ ಮರೆತು ಹೋಗುತ್ತವೆ. ಹೀಗೆ ಮರೆತು ಹೋಗಲು ಅನೇಕ ಕಾರಣಗಳಿವೆ.

- ಅಪೌಷ್ಟಿಕತೆ :- ಪೌಷ್ಟಿಕಾಂಶಗಳ ಕೊರತೆಯು ಅಂದರೆ ಮಕ್ಕಳ ಬೆಳವಣಿಗೆ ಬೇಕಾದಂತಹ ವಿಟಮಿನ್, ಮಿನರಲ್, ಮುಂತಾದ ಪೌಷ್ಟಿಕಾಂಶಗಳ ಕೊರತೆಯು ಮಕ್ಕಳ ಜ್ಞಾಪಕಶಕ್ತಿಯನ್ನು ಕುಂಠಿತಗೊಳಿಸಬಲ್ಲದೆಂಬುದು ವೈಜ್ಞಾನಿಕವಾಗಿ ಸಾಭೀತಾಗಿದೆ. ಇಂದಿನ ಮಕ್ಕಳು ಹಣ್ಣು-ಹಂಪಲು, ಆಹಾರಗಳನ್ನು ಸರಿಯಾಗಿಯೇ ತಿನ್ನುವುದಿಲ್ಲ. ಕಷ್ಟಪಟ್ಟು ತಿನ್ನಿಸಬೇಕು. ಇಷ್ಟಪಟ್ಟು ತಿನ್ನುವುದಿಲ್ಲ.

- ಮಾನಸಿಕ ನ್ಯೂನತೆಗಳು ಮತ್ತು ಕಾಯಿಲೆಗಳು:- ಅತಿಯಾದ ಮಾನಸಿಕ ಒತ್ತಡ, ಭಯ, ಉದಾಸೀನ, ಆತ್ಮ ವಿಶ್ವಾಸದ ಕೊರತೆ, ಮಾದಕ ವಸ್ತುಗಳ ಸೇವನೆ, ನಕಾರಾತ್ಮಕ ಧೋರಣೆಗಳು ಇಂತಹ ಕೆಲವು ಮಾನಸಿಕ ನ್ಯೂನತೆಗಳು, ಹಾಗೂ ರೋಗಗಳಿಂದ ಮರೆವು ಉಂಟಾಗಲು ಕಾರಣವಾಗಿ ನೆನಪಿಟ್ಟುಕೊಳ್ಳಲು ಅಡ್ಡಿಯಾಗುವುದು ಎನ್ನುತ್ತಾರೆ.

➢ ಏಕಾಗ್ರತೆಯ ಕೊರತೆ:- ಇಂದು ಎಲ್ಲಾ ವಿದ್ಯಾರ್ಥಿಗಳಿಗೆ ಏಕಾಗ್ರತೆಯ ಕೊರತೆಯು ಸರ್ವೇ ಸಾಮಾನ್ಯವಾದ ವಿಷಯವಾಗಿದೆ. ಉದಾ:- ಮೊಬೈಲ್‌ಗಳ ಬಳಕೆ, ಬಾಹ್ಯ ಆಕರ್ಷಣೆ ಇತ್ಯಾದಿ. ಮನುಷ್ಯ ಎಂದ ಮೇಲೆ ಚಂಚಲ ಮನಸ್ಸು ಸಾಮಾನ್ಯವಾದುದು, ಮನಸ್ಸನ್ನು ಕೇಂದ್ರಿಕರಿಸದಿದ್ದರೆ, ಏನನ್ನು ನೆನಪಿನಲ್ಲಿಟ್ಟುಕೊಳ್ಳಲು ಸಾಧ್ಯವಾಗದು. ವಿದ್ಯಾರ್ಥಿಗಳು ತರಗತಿಯಲ್ಲಿ ಕುಳಿತು ಪಾಠ ಕೇಳುತ್ತಿದ್ದಾಗ ಇನ್ನಾವುದೇ ವಿಷಯದತ್ತ ಆಕರ್ಷಿತನಾಗಿದ್ದರೆ, ಆತ ಏನನ್ನು ಕಲಿತುಕೊಳ್ಳಲಾರ. ಆದುದರಿಂದಲೇ "Mental Attendance is more important than physical attendance" ಎನ್ನಲಾಗಿದೆ. ವಾತಾವರಣದಲ್ಲಿ ಎಷ್ಟೊಂದು ಶಬ್ದ ತರಂಗಗಳು ಇದ್ದರೂ, ರೇಡಿಯೋ ನಾವು ಟ್ಯೂನ್ ಮಾಡಿದ ಶಬ್ದತರಂಗಗಳನ್ನಷ್ಟೆ ಹಿಡಿದು ಬಿಟ್ಟು ನಮಗೆ ಕೇಳಿಸುತ್ತದೇ, ಅದೇ ರೀತಿ ಇಚ್ಛೆಪಟ್ಟಲ್ಲಿ ಏಕಾಗ್ರತೆ ಇದ್ದಲ್ಲಿ, ಮಾನವ ಮಿದುಳು ಕೂಡ ತನಗೆ ಬೇಕಾದ ವಿಷಯಕ್ಕೆ ಸೀಮಿತವಾಗಿ ಕೇಂದ್ರಿಕೃತವಾಗಬಲ್ಲದು, ಅದಕ್ಕಾಗಿಯೇ ಹೇಳುವುದು ಏನೇ ಕೆಲಸ ಮಾಡಿದರೂ ಏಕಾಗ್ರತೆ ಬಹಳ ಮುಖ್ಯವಾದುದು ಎನ್ನುತ್ತಾರೆ.

➢ ಆಸಕ್ತಿ ಮತ್ತು ಅಭಿರುಚಿಯ ಕೊರತೆ:- "There is difference between love to know and forced to know" ಎಂಬ ಮಾತಿನಂತೆ ಕಲಿತುಕೊಳ್ಳಲು ಸಿದ್ಧಗೊಂಡ ಮನಸ್ಸು ವಿಷಯಗಳನ್ನು ಬೇಗನೆ ಕಲಿತುಕೊಂಡು ಬಿಡುತ್ತದೆ. ನಿರಾಸಕ್ತಿ ಇದ್ದರೆ ಕಲಿಕೆ ಕುಂಠಿತವಾಗುತ್ತದೆ. ಮಾತ್ರವಲ್ಲ ಅಷ್ಟೋ ಇಷ್ಟೋ ಕಲಿತುದುದೂ ಜ್ಞಾಪಕದಲ್ಲಿರುವುದಿಲ್ಲ. ಬೇಗನೆ ಮರೆತು ಹೋಗುತ್ತದೆ. ಈ ಹಿನ್ನಲೆಯಲ್ಲಿ ಆಸಕ್ತಿ ಅಭಿರುಚಿಗಳೇ ಕಲಿಯುವ ಕುದುರೆ ಗಾಡಿಗೆ ಚಕ್ರಗಳಿದ್ದಂತೆ ಎನ್ನಲಾಗುತ್ತದೆ.

➢ ಅಧ್ಯಯನದ ತಪ್ಪು ವಿಧಾನಗಳು :- ಅಧ್ಯಯನ ಮಾಡಲು ಅನುಸರಿಸುವ ತಪ್ಪು ವಿಧಾನಗಳು ಕೂಡ ಮರೆವಿಗೆ ಕಾರಣವಾಗಬಹುದು. ಆದುದರಿಂದ ನೆನಪಿನಲ್ಲಿಟ್ಟುಕೊಳ್ಳಲು ಪೂರಕವಾಗಬಲ್ಲ, ನೆರವಾಗಬಲ್ಲ ವಿಧಾನಗಳನ್ನೇ ಅನುಸರಿಸಬೇಕು.

ಜ್ಞಾಪಕಶಕ್ತಿ ಹೆಚ್ಚಿಸಿಕೊಳ್ಳಲು ಅನುಸರಿಸಬೇಕಾದ ಅಂಶಗಳು:

ಜ್ಞಾಪಕಶಕ್ತಿ ಹೆಚ್ಚಳಕ್ಕೆ ಯಾವುದೇ ಔಷಧಿ, ಮಾತ್ರೆಗಳಿಗೆ ಮಾರುಹೋಗಬಾರದು, ಇವುಗಳಿಂದ ಅದು ಸಾಧ್ಯವಿಲ್ಲ. ಈ ರೀತಿಯ ಔಷಧಿಗಳಿಂದ ಜ್ಞಾಪಕಶಕ್ತಿ ವೃದ್ಧಿಯಾಗುವುದಾಗಿದ್ದರೇ ಶ್ರೀಮಂತರೆಲ್ಲ ತುಂಬಾ ಬುದ್ಧಿವಂತರಾಗಿ ಬಿಡುತ್ತಿದ್ದರು. ಬಡವರಿಗೆ ಜ್ಞಾಪಕಶಕ್ತಿಯೇ ಇರುತ್ತಿರಲಿಲ್ಲ. ಏಕೆಂದರೆ ಬಡವರ ಬಳಿ ಹಣ ವಿಲ್ಲದೆ ಔಷಧಿಕೊಳ್ಳಲಾಗುತ್ತಿರಲಿಲ್ಲವಲ್ಲ. ಬಡವರು ಕೂಡ ಜ್ಞಾಪಕಶಕ್ತಿಯಿಂದಲೇ ಎಷ್ಟು ಮುಂದುವರಿದಿಲ್ಲ, ಬೇಕಾದಷ್ಟು ಮುಂದುವರಿದಿದ್ದಾರೆ. ಇದಕ್ಕೆಲ್ಲ ಕಾರಣ ಅವರ ಏಕಾಗ್ರತೆ ಎನ್ನಬಹುದು. ಒಟ್ಟಿನಲ್ಲಿ ಜ್ಞಾಪಕಶಕ್ತಿ ಹೆಚ್ಚಿಸಿಕೊಳ್ಳಲು ಅನುಸರಿಸಬೇಕಾದ ಅಂಶಗಳು :-

➢ ಯೋಗ, ಧ್ಯಾನ, ಪ್ರಾಣಾಯಾಮ ಇವುಗಳು ಮನಸ್ಸಿನ ದುಗುಡಗಳನ್ನು ಕಡಿಮೆ ಮಾಡಿ, ಏಕಾಗ್ರತಾ ಸಾಮರ್ಥ್ಯವನ್ನು ಹೆಚ್ಚಿಸಿ, ನಮ್ಮ ಜ್ಞಾಪಕಶಕ್ತಿಯನ್ನು ಬಲಪಡಿಸಬಹುದು.

- ಒಂದೇ ವಿಷಯವನ್ನು ಸತತವಾಗಿ ಮನನ ಮಾಡುವುದರಿಂದಲೂ (Repeated Input) ಜ್ಞಾಪಕದಲ್ಲಿಟ್ಟುಕೊಳ್ಳಲು ಸಾಧ್ಯವಾಗುತ್ತದೆ.
- ಬಲು ಮುಖ್ಯವಾಗಿ ಏಕಾಗ್ರತೆ ಹಾಗೂ ತತ್ಪರತೆ ಇರಬೇಕು.
- ವಿಷಯವನ್ನು ಭಾಗಗಳನ್ನಾಗಿ ವಿಂಗಡಿಸಿ, ಹಂತ ಹಂತವಾಗಿ ಓದುವುದರಿಂದಲೂ ಜ್ಞಾಪಕಶಕ್ತಿ ಹೆಚ್ಚಿಸಿಕೊಳ್ಳಬಹುದು.

"ವಿದ್ಯುತುರಾಣಾಂ ನ ನಿದ್ರಾಂ ನ ಸುಖಾಂ" ಎಂಬ ಮಾತಿನಂತೆ ಕಲಿಯಲು ಆಸಕ್ತಿ ಉಳ್ಳವನಿಗೆ, ನಿದ್ದೆ ಸುಖಗಳು ನಗಣ್ಯವೆನಿಸುತ್ತವೆ. "Sit like a rock and work with a clock" ಎಂಬ ಮಾತಿನಂತೆ "ಬಂಡೆಯಂತೆ ಕುಳಿತು ಗಡಿಯಾರದಂತೆ ಕೆಲಸ ಮಾಡು" ಎಂಬ ನುಡಿ ಜ್ಞಾಪಕಶಕ್ತಿ ಹೆಚ್ಚಿಸಿಕೊಳ್ಳ ಬಯಸುವವರಿಗೆ ಮೂಲ ಮಂತ್ರವಾಗಿರಬೇಕು"[೬] ಎಂದಿದ್ದಾರೆ.

ಯೋಚನೆ-ವಿವೇಚನೆ, ಮರೆಯುವ ಶಕ್ತಿ ಕೂಡಾ ಅವಶ್ಯಕ, ಪ್ರತಿಕ್ರಿಯೆ, ಇವು ಕೂಡ ಮಿದುಳಿನ ಮುಖ್ಯ ಕಾರ್ಯಗಳು. ಮಿದುಳು ದೇಹದ ಎಲ್ಲಾ ಕಾರ್ಯಗಳನ್ನು ನಿಯಂತ್ರಿಸಿ ನಿರ್ದೇಶಿಸುವ ಬಹು ಮುಖ್ಯವಾದ ಕಾರ್ಯವನ್ನು ನಿರ್ವಹಿಸುತ್ತದೆ. ಪ್ರೀತಿ ಹುಟ್ಟುವುದು ಹೃದಯದಿಂದಲ್ಲ, ಮಿದುಳಿನಿಂದ ! ಮೂತ್ರ ವಿಸರ್ಜನೆಗೂ ಮಿದುಳಿನ ಹತೋಟಿ, ದೇಹದ ಉಷ್ಣತೆಯನ್ನು ಕಾಪಾಡುವುದು, ಹಲವಾರು ಕಾಯಿಲೆಗಳಿಗೂ, ಲೈಂಗಿಕ ಕ್ರಿಯೆಯಲ್ಲೂ, ಎಲ್ಲಾ ಕಲಾ ಸಾಮರ್ಥ್ಯಗಳ ಉಗಮ ಸ್ಥಾನವೂ ಮಿದುಳೇ, ಎಲ್ಲಾ ಭಾವನೆಗಳ ತವರೂರು, ಮಾನವೀಯ ಗುಣ ಸ್ವಭಾವಗಳ ತವರೂ, ಸದ್ಗುಣಗಳ ತವರು, ದುರ್ಗುಣಗಳ ತವರೂ, ಸುಖ-ದುಃಖ, ಆನಂದ-ಕೊರಗು, ಚಿಂತೆಗಳ ತಾಣವೂ ಎಲ್ಲವೂ ಕೂಡ ಮಿದುಳೇ. ಅಂದ ಹಾಗೇ ಮಿದುಳು ಮನುಷ್ಯನಿಗೆ ಬಹು ಮುಖ್ಯವಾದ ಅಂಗ ಎನ್ನಲಾಗಿದೆ.

ಮನಸ್ಸೆಂಬ ಹತೋಟಿ

ನಮ್ಮೊಳಗೆಯೇ ದೊಡ್ಡ ಸಂತೆಯೇ ಇದೆ. ರಾಕ್ಷಸರಿಂದ ಹಿಡಿದು ದುಷ್ಟ ಪ್ರಾಣಿಗಳು ನಮ್ಮ ಮನಸ್ಸಿನಲ್ಲಿ ಮನೆ ಮಾಡಿವೆ ಆದರೆ ಇವುಗಳನ್ನು ನಾವು ಬೆಳೆಯಲು ಅವಕಾಶ ನೀಡಬಾರದು. ಆತ್ಮಾವಲೋಕನದಿಂದ ಮಾತ್ರ ವ್ಯಕ್ತಿಯ ಬೆಳವಣಿಗೆ ಹಾಗೂ ವ್ಯಕ್ತಿತ್ವದ ವಿಕಸನ ಸಾಧ್ಯ. ನಮಗೆ ನಾವೇ ಶತ್ರು, ನಮಗೆ ನಾವೇ ಮಿತ್ರ. ನಮಗೆ ಖಾಯಿಲೆ ಬಂದಾಗ ನಾವೇ ಔಷಧಿ ಕುಡಿಯಬೇಕೆ ಹೊರತು ಇತರರು ಕುಡಿದ ಔಷಧಿಯಿಂದ ನಮ್ಮ ರೋಗ ನಿವಾರಣೆಯಾಗದು. ಅಂತೆಯೇ ನಮ್ಮ ಆತ್ಮವನ್ನು ನಾವೇ ಉದ್ಧರಿಸಿಕೊಳ್ಳಬೇಕಲ್ಲದೆ, ಇತರರು ಉದ್ಧಾರ ಮಾಡಲಾರರು. ನಮ್ಮ ಮನಸ್ಸಿನ ಹತೋಟಿಯನ್ನು ನಾವೇ ಮಾಡಿಕೊಳ್ಳಬೇಕು. ಮನಸ್ಸನ್ನು ಯಾವಾಗಲೂ ನಿಯಂತ್ರಣದಲ್ಲಿಟ್ಟುಕೊಳ್ಳಬೇಕು. ಆಗಲೇ ಜೀವನ ಉದ್ಧಾರ ಸಾಧ್ಯ ಎನ್ನುತ್ತಾರೆ.

ದೇಹದ ಶಕ್ತಿ ಸಾಮರ್ಥ್ಯಗಳಿಗೆ ಇತಿಮಿತಿಗಳಿವೆ ಆದರೆ ಮನಸ್ಸಿನ ಸಾಮರ್ಥ್ಯಗಳಿಗೆ ಇತಿಮಿತಿಗಳಿಲ್ಲ. ಅದು ಜಗತ್ತನ್ನೇ ವ್ಯಾಪಿಸಬಲ್ಲದು. ವಿಶ್ವವನ್ನೇ ಗೆಲ್ಲಬಲ್ಲದು. ಆತ್ಮಾವಲೋಕನ ಹಾಗೂ ಸತ್‌ಚಿಂತನೆಗಳಿಂದ

ಮನಸ್ಸನ್ನು ನಿಯಂತ್ರಿಸಿಕೊಳ್ಳಬಹುದು. ನಮ್ಮ ವ್ಯಕ್ತಿತ್ವದ ಚಿತ್ರಣ ನಮಗೇ ತೃಪ್ತಿಕರವಾಗಬೇಕಿದ್ದಲ್ಲಿ, ನಾವು ಚೆನ್ನಾಗಿರಬೇಕು. ನಮ್ಮ ಸಹವಾಸ ನಮಗೇ ಆಹ್ಲಾದಕರವಾಗಿರುವಂತೆ ನೋಡಿಕೊಳ್ಳಬೇಕು. ಇತರರು ನಮ್ಮೊಂದಿಗೆ ಕೆಲವು ಗಂಟೆಗಳಷ್ಟು ಮಾತ್ರ ಕಳೆಯಬಹುದು. ಆದರೆ ನಮ್ಮೊಂದಿಗೆ ದಿನದ 24 ಗಂಟೆಗಳು ಕಳೆಯಬೇಕಲ್ಲ ! ಕೆಲವರು ಒಳ್ಳೆಯ ಮನಸ್ಸಿನಿಂದ ಜೀವಿಸಿದರೆ, ಕೆಲವರು ಶರೀರ ಮುಖೇನ ಜೀವಿಸುತ್ತಾರೆ, ನಮ್ಮ ಶರೀರವನ್ನು ಉತ್ತಮ ಆಹಾರ ಅಭ್ಯಾಸಗಳಿಂದ ಕಾಪಾಡಿಕೊಳ್ಳುವಂತೆ, ವಿವೇಕದಿಂದ ಬಾಳುವುಲ್ಲಿ ನಮ್ಮ ಮಿದುಳನ್ನು ಬಳಸಿಕೊಳ್ಳಬೇಕು ಎನ್ನುತ್ತಾರೆ.

ವೈಜ್ಞಾನಿಕ ಸಂಶೋಧನೆಗಳಿಂದ ಮಿದುಳು, ಮನಸ್ಸು ಮತ್ತು ನರ ಮಂಡಲದ ಕಾಯಿಲೆಗಳ ಮೂಲ ಕಾರಣಗಳ ಬಗ್ಗೆ ನಮ್ಮ ಅರಿವು ಹೆಚ್ಚುತ್ತಿದೆ. ಮಿದುಳಿನ ನರಕೋಶಗಳ ಕಾರ್ಯ ವಿಧಾನ ಅಮೋಘ ಮತ್ತು ಅದ್ಭುತ. ಅದನ್ನು ಈಗ MRI, SPECT ಮೂಲಕ ಮಾನಿಟರ್ ತೆರೆಯ ಮೇಲೆ ನೋಡುಹುದು.

"ಧರ್ಮಾರ್ಥ ಕಾಮ ಮೋಕ್ಷಾಣಾಂ ಆರೋಗ್ಯಮಂ ಮೂಲಮುತ್ತಮಂ' ಎಂಬ ಮಾತಿನಂತೆ ಧರ್ಮವನ್ನು ಗೈಯ್ಯಲು, ಅರ್ಥವನ್ನುಗಳಸಲು, ಮನೆಗಳನ್ನು ಪೂರೈಸಲು ಹಾಗೂ ಮೋಕ್ಷವನ್ನು ಪಡೆಯಲು ಆರೋಗ್ಯವೇ ಮೂಲ ಹಾಗೂ ಉತ್ತಮ ಸಾಧನ ಎನ್ನಲಾಗಿದೆ. ಆದುದರಿಂದ ಸಕಲ ಭಾಗ್ಯಗಳಲ್ಲಿ ಸರ್ವ ಶ್ರೇಷ್ಟವಾದುದು ಆರೋಗ್ಯಭಾಗ್ಯ. ಆರೋಗ್ಯಭಾಗ್ಯವೇ ಇಲ್ಲದೆ ಯಾವ ಭಾಗ್ಯಗಳಿದ್ದು ಏನೂ ಫಲ ? ಆದುದರಿಂದಲೇ ಹಿರಿಯರು ಹರಸುವಾಗ ಮೊದಲಿಗೆ "ಆಯುರಾರೋಗ್ಯ ಪ್ರಾಪ್ತಿರಸ್ತು" ಎಂಬುದಾಗಿ ಹರಸುತ್ತಾರೆ.

ಸೃಷ್ಟಿಯಲ್ಲಿ ಅತ್ಯದ್ಭುತವಾದುದು ಮತ್ತು ಅತ್ಯಂತ ಸಂಕೀರ್ಣವಾದುದೆಂದರೆ ಮಾನವ ದೇಹದ ರಚನೆ ಮತ್ತು ಅದರ ಕಾರ್ಯ ವಿಧಾನ ಒಂದಿಷ್ಟು ತಿಳಿದುಕೊಂಡಂತೆ, ಇನ್ನಷ್ಟು ತಿಳಿದುಕೊಳ್ಳುವುದಿದೆ ಎಂಬ ಸವಾಲನ್ನು ಒಡುತ್ತಲೇ ಬಂದಿರುವ ಸೃಷ್ಟಿಯ ಸೋಜಿಗವಿದು.

ನಮ್ಮ ದೇಹ ಎಂತಹ ಅದ್ಭುತ ಸೃಷ್ಟಿ:

- ಒಂದು ಜೀವಕಣವಾಗಿ ಪ್ರಾರಂಭವಾಗುವ ನಮ್ಮ ದೇಹದಲ್ಲಿ 500,000,000,000,000 ಜೀವ ಕಣಗಳಿವೆ. ಮಿದುಳೆಂದರಲ್ಲೆ 10 ಸಾವಿರ ಕೋಟಿ ನರ ಕೋಶಗಳಿವೆ.
- ನಮ್ಮ ದೇಹದಲ್ಲಿ 40 ಲೀಟರ್ ನೀರು, 6 ಲೀಟರ್ ರಕ್ತ ಇದೆ.
- ಒಟ್ಟು ಎಲ್ಲ ರಕ್ತನಾಳಗಳ ಉದ್ದ 2,000 ಮೈಲು
- ಪ್ರತಿ ಒಂದು ಘನ ಮಿಲಿ ಮೀಟರ್ ರಕ್ತದಲ್ಲಿ 50 ಲಕ್ಷ ಕೆಂಪು ರಕ್ತ ಕಣಗಳು 10 ಸಾವಿರ ಬಿಳಿ ರಕ್ತ ಕಣಗಳಿರುತ್ತವೆ.
- ನಮ್ಮ ಹೃದಯ ದಿನಕ್ಕೆ ಒಂದು ಲಕ್ಷಕ್ಕಿಂತ ಹೆಚ್ಚಿನ ಸಲ ಮಿಡಿಯುತ್ತದೆ. ಒಂದು ಗಂಟೆಗೆ 300 ಲೀಟರ್‌ಗಳಷ್ಟು ರಕ್ತವನ್ನು ದೇಹಕ್ಕೆ ಸರಬರಾಜು ಮಾಡುತ್ತದೆ.

➢ ನೋಡಲು ಮಿದುಳು ಒಂದಾದರೂ, ಸ್ವತಂತ್ರ್ಯವಾಗಿ ಕಾರ್ಯ ನಿರ್ವಹಿಸಬಲ್ಲ ಎರಡು ಅರೆಗೋಳಗಳಿವೆ. ಎಡ ಮಿದುಳು ಆಲೋಚನಾ ಪ್ರಧಾನವಾದರೆ, ಬಲ ಮಿದುಳು ಭಾವ ಪ್ರಧಾನ.

➢ ಬಾಯಿಂದ ಗುದದ್ವಾರವರೆಗೆ, ಜೀಣಾಂಗದ ಉದ್ದ 9 ಮೀಟರ್‌ಗಳಿಗೂ ಹೆಚ್ಚು" [5]

"ಸಾವಿರಾರು ವರ್ಷಗಳಿಂದ, ನೂರಾರು ವಿಜ್ಞಾನಿಗಳು ನಡೆಸಿದ ಸತತ ಸಂಶೋಧನೆಯ ನಂತರವೂ ವಿವರಣೆ ತಿಳಿಯದ ಈ ದೇಹದೊಳಗಿನ ರಹಸ್ಯಗಳು, ಕಾರಣವರಿಯದ ಕಾಯಿಲೆಗಳು ಹಲವಾರು" [6] ಹೀಗೆ ವೈದ್ಯಕೀಯ ಕ್ಷೇತ್ರದಲ್ಲಿ ನಿರಂತರವಾಗಿ ಸಂಶೋಧನೆಗಳು ನಡೆಯುತ್ತಲೇ ಇರುತ್ತವೆ ಎಂದಿದ್ದಾರೆ.

ಇಂದು ವೈದ್ಯಕೀಯ ಲೋಕ ವಿಸ್ತಾರಗೊಳ್ಳುತ್ತಲೆ ಇದೆ. ವಿಧವಿಧವಾದ ಪರೀಕ್ಷೆಗಳನ್ನು ಮಾಡಿ ಕಾಯಿಲೆಗಳನ್ನು ಪತ್ತೆ ಹಚ್ಚುವುದು. ಹಾಗೇ ಇವಕ್ಕೆ ತಕ್ಕದಾದಂತಹ ವೈದ್ಯಕೀಯ ಸೌಲಭ್ಯಗಳು ಇವೆ. ಬಡವರಿಗಾಗಿಯೇ ವಿಧವಿಧವಾದ ಆರೋಗ್ಯದ ಯೋಜನೆಗಳನ್ನು ತರಲಾಗಿದೆ. ಸರ್ಕಾರವು ಯಶಸ್ವಿನಿ ಯೋಜನೆ, ವಾಜಪೇಯಿ ಆರೋಗ್ಯ ಶ್ರೀ, ಹೀಗೆ ಹತ್ತು ಹಲವು ಆರೋಗ್ಯ ಯೋಜನೆಗಳನ್ನು ರೂಪಿಸಿದೆ. ಇದರಿಂದಾಗಿ ಅನೇಕ ಬಡರೋಗಿಗಳು ಸಹ ಉತ್ತಮ ವೈದ್ಯಕೀಯ ಸೌಲಭ್ಯವನ್ನು ಪಡೆಯಬಹುದಾಗಿದೆ.

ಹೃದಯಕ್ಕೆ ಸಂಬಂಧಿಸಿದಂತೆ ಹೊಸ ವೈದ್ಯಕೀಯ ಸೌಲಭ್ಯಗಳು ಲಭ್ಯವಿದೆ. ತೆರೆದ ಶಸ್ತ್ರ ಚಿಕಿತ್ಸೆ ಒಂದಾದರೆ, ಇಂದು ಹೃದಯದ ಕಸಿ (Heart Transplantation) ಕಾರ್ಯವನ್ನು ಮಾಡುತ್ತದೆ. ಇದರಿಂದ ರೋಗಿಯು ಇನ್ನು ಸ್ವಲ್ಪ ದಿನಗಳ ಕಾಲ ತನ್ನ ಆಯುಷ್ಯವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ. ಚಿಕ್ಕ ಮಕ್ಕಳಲ್ಲಿ ಕಾಣಿಸಿಕೊಳ್ಳುವ ಹೃದಯದ ಕಾಯಿಲೆಗಳನ್ನು ಉತ್ತಮವಾದ ಚಿಕಿತ್ಸೆಯನ್ನು ನೀಡಿ, ಚಿಕ್ಕ ವಯಸ್ಸಿನಲ್ಲೆ ಗುಣಪಡಿಸಲಾಗುತ್ತಿದೆ. ಹಾಗೆಯೇ ಇನ್ನು ಮುಂದುವರಿದು ಮೂತ್ರ ಪಿಂಡಗಳ ಕಸಿ ಕಾರ್ಯವನ್ನು ಮಾಡುತ್ತಾರೆ. ನಾನಾ ಕಾರಣಗಳಿಂದಾಗಿ ಮೂತ್ರಪಿಂಡವೇನಾದರೂ ಹಾನಿಗೊಳಗಾಗಿದ್ದರೆ ಈ ರೀತಿಯ ಕಸಿ ಕಾರ್ಯವನ್ನು ಮಾಡುತ್ತಾರೆ.

ಮಕ್ಕಳ ಭಾಗ್ಯವೇ ಇನ್ನಿಲ್ಲ ಎಂದು ನೊಂದುಕೊಳ್ಳುವ ದಂಪತಿಗಳಿಗೆ IVF, IUI ನಂತಹ ವಿಧಾನದಿಂದಲೂ ಮಕ್ಕಳಾಗಲು ಪ್ರಯತ್ನಿಸುತ್ತಾರೆ. ಇದಾವುದು ಯಶಸ್ವಿಗೊಳ್ಳದಿದ್ದರೆ ಬಾಡಿಗೆ ತಾಯಿಗಾಗಿ ಪ್ರಯತ್ನಿಸುತ್ತಾರೆ. ದಂಪತಿಗಳಿಗೆ ಮಕ್ಕಳಾಗುವ ಸಾಧ್ಯತೆ 1% ಇಲ್ಲದೆ ಇದ್ದಾಗ ಇವರಿಬ್ಬರ ಅಂಡಾಣು-ವಿರ್ಯಾಣವನ್ನು ಇನ್ನೊಂದು ಹೆಣ್ಣಿನ ಗರ್ಭದಲ್ಲಿ ಬಳಸಿ ಇವರಿಬ್ಬರಿಗೆ ಮಕ್ಕಳ ಭಾಗ್ಯ ಕರುಣಿಸುತ್ತಾರೆ ಇದೆಲ್ಲ ಇಂದಿನ ವೈದ್ಯಲೋಕಕ್ಕೆ ಹಿಡಿದ ಕನ್ನಡಿಯಂತಿದೆ.

<u>ನಗು ಎಂಬ ದಿವ್ಯೌಷಧ</u>

"ಯಾವುದೇ ಔಷಧಿಗಳಿಲ್ಲದೆ, ಖರ್ಚುಗಳಿಲ್ಲದೆ, ನಮ್ಮಿಂದಲೇ ಹೊರಹೊಮ್ಮುವಂತಹ ಭಾವನಾತ್ಮಕ ಕ್ರಿಯೆಯೇ ನಗು. 'ನಗು' ಮನುಷ್ಯರಿಗೆ ಮಾತ್ರ ದೇವರು ಕೊಟ್ಟ ವರ. ನಗರ ಪಟ್ಟಣಗಳಲ್ಲಿ ಬಿಡುವಿಲ್ಲದ ಯಾಂತ್ರಿಕ ಬದುಕಿನಲ್ಲಿ ಜನ ನಗೋದನ್ನೇ ಮರೆತಿದ್ದಾರೆ. ಇದನ್ನರಿತ ಬಲ್ಲವರು ಹೇಳಿದ್ದು "ನಕ್ಕಷ್ಟು ದಿನ

ನಿನ್ನದು-ನಗದ ದಿನ ನಿನ್ನದಲ್ಲ" ಎಂಬುದಾಗಿ, ಆಂಗ್ಲ ಭಾಷೆಯಲ್ಲಿ "Laughter is the best medicine, because it is the only Medicine which has no expiry date" ಎನ್ನಲಾಗಿದೆ. ಅಂದರೆ ಔಷಧಿಗಳಲ್ಲಿ ಅತ್ಯುತ್ತಮ ಔಷದಿ ನಗು, ಇದು ಹಳ ತಾದೀತು ಎಂಬ ಭಯವಿಲ್ಲ. ಹೀಗೆ ಮುಂದುವರಿಸುತ್ತಾ "It is also the only medicine which has no side effects" ಎಂದು ಕೂಡ ಹೇಳಲಾಗಿದೆ"[೭]

ನಗು ಪ್ರಕ್ರಿಯೆ ನಮ್ಮ ಗುಣ ಸ್ವಭಾವವನ್ನು, ಮಾನಸಿಕ ಆರೋಗ್ಯದ ಸ್ಥಿತಿಗತಿಯನ್ನು ಕೂಡ ಸೂಚಿಸುತ್ತದೆ. ನಗಲು ಯಾವುದಾದರೂ ಕಾರಣಗಳು ಬೇಕೆ ಬೇಕು. ಅದು ಹಾಸ್ಯಾತ್ಮಕವಾದ ಮಾತು, ವೇಷಭೂಷಣ, ಘಟನೆ, ಇತ್ಯಾದಿ ಕಾರಣವಿಲ್ಲದೆ ಒಬ್ಬಬ್ಬನೇ ನಗಬಹುದು, ಎಲ್ಲರೂ ನಗುತ್ತಿದ್ದಾಗ, ನಗದವನು, ಹುಚ್ಚನೆನಿಸಿಕೊಳ್ಳುತ್ತಾನೆ. ಇದು ಮಾನಸಿಕ ಅಸ್ವಸ್ಥಿತೆಯ ಸಂಶಯಕ್ಕೆ ಒಳಪಡುತ್ತದೆ. ನಗುವಾಗ ಹೃದಯ ತುಂಬಿ ನಗಬೇಕು, ಅದೇ ನಿಜವಾದ ನಗು.

ನಗುವಿನ ಬಗ್ಗೆ ಹಿಂದಿನವರು ತಮ್ಮದೇ ಆದ ರೀತಿಯಲ್ಲಿ ಹೇಳಿದ್ದಾರೆ. ರಸಿಕ, ಹುಚ್ಚ, ದುಷ್ಟ, ವಿದೂಷಕ, ಮಹಾಜ್ಞಾನಿ ಎಂದೆಲ್ಲ ಅವರ ನಗುವಿನ ಕುರಿತು ಹೇಳಿದ್ದಾರೆ. ಆದರೆ ಡಿ.ವಿ.ಜಿ. ಯವರು "ನಗುನಗುತ್ತಲೇ ವಿಜಯ ಸಾಧಿಸಿಕೊಳ್ಳುವವನು ಜಾಣ" ಎಂದಿದ್ದಾರೆ.

"ನಗುವು ಸಹಜದ ಧರ್ಮ; ನಗಿಸುವುದು ಪರಧರ್ಮ ।
ನಗುವ ಕೇಳುವ ನಗುವುದತಿಶಯದ ಧರ್ಮ ॥
ನಗುವ ನಗಿಸುವ ನಗಿಸಿ ನಗುತ ಬಾಳುವ ವರವ ।
ಮಿಗೆ ನೀನು ಬೇಡಿಕೊಳೋ – ಮಂಕುತಿಮ್ಮ ॥ (917)" [೮]

'ಹಸಿತಪಸಿ ಶೂನ್ಯೇನ ಮನಸಾ; ಮನಸ್ಸು ಶೂನ್ಯವಾಗಿದ್ದರೂ ನಗುವುದು ಎಂಬ ಭರ್ತೃಹರಿಯ ಮಾತೊಂದಿದೆ. ಆ ನಗು, ಬೂಟಾಟಿಕೆಯ ನಗು, ತನಗಿಷ್ಟವಿಲ್ಲದಿದ್ದರೂ ಇನ್ನೊಬ್ಬರನ್ನು ಪ್ರಸನ್ನಗೊಳಿಸಲು ಬಲವಂತವಾಗಿ ತಂದುಕೊಂಡ ನಗು. ಆದರೆ ಸಹಜವಾದ ನಗು ಎಂಬುದು ಒಂದಿದೆ. ಸಹಜವಾಗಿ ನಗುವುದು ಒಂದು ಧರ್ಮ, ನಾನತ್ವವನ್ನು ಬಿಟ್ಟು ನಗುವುದಿದೆಯಲ್ಲ ಅದು ಸಹಜವಾದ ಧರ್ಮ, ನಗುವ, ನಗಿಸುವ, ನಗಿಸಿ, ನಗುತ ಬಾಳುವುದೇ ಬ್ರಹ್ಮವಸ್ತುವಿಗೆ ನಾವು ಸಲ್ಲಿಸಬಹುದಾದ ಶ್ರೇಷ್ಠವಾದ ಕಾಣಿಕೆ" [೮]

"ವೈದ್ಯಕೀಯ ವಿಜ್ಞಾನದ ದೃಷ್ಟಿಯಿಂದ ನೋಡಿದರೂ, ಗಂಟು ಮುಖ ಹಾಕಿಕೊಳ್ಳಲು ಬಳಸಿಕೊಳ್ಳಬೇಕಾದ ಸ್ನಾಯುಗಳು ಸಂಖ್ಯೆ ಮತ್ತು ವ್ಯಯವಾಗುವ ಶಕ್ತಿ, ಮಂದಸ್ಮಿತರಾಗಲು ಬೇಕಾದ ಸ್ನಾಯುಗಳ ಸಂಖ್ಯೆ ಮತ್ತು ವ್ಯಯವಾಗುವ ಶಕ್ತಿಗಿಂತ ಎಷ್ಟೋ ಪಟ್ಟು ಮೇಲು. ಅಂದ ಮೇಲೆ ಮುಖ ಏಕೆ ಗಂಟು ಹಾಕಿಕೊಳ್ಳಬೇಕು? ಹಸನ್ಮುಖಿಗಳಾದರೆ ಸರಿ ಅಲ್ಲವೆ, ಹಸನ್ಮುಖಿಗಳು ಎಲ್ಲರನ್ನು ತಮ್ಮೆಡಗೆ ಆಕರ್ಷಿಸುತ್ತಾರೆ. ಗಂಟು ಮುಖದವರಿಂದ ಜನ ದೂರ ಸರಿಯುತ್ತಾರೆ. ಆಂಗ್ಲ ಭಾಷೆಯಲ್ಲಿ ಒಂದು ಮಾತಿದೆ "God has given us the face but no the facial expressions" ಎನ್ನಲಾಗಿದೆ" [೯]

"ಊಟ ಮಾಡುವಾಗ, ಸಂತೋಷದಿಂದ ಊಟ ಮಾಡಬೇಕಂತೆ, ಆಗಲೇ ತಿಂದಿದ್ದು ಮೈಗೆಹಿಡಿಕೊಳ್ಳೋದು, ಹಾಗೆಯೇ ನಿದ್ದೆ ಮಾಡಲು ಹೊರಟಾಗಲೂ ಶಾಂತ ಚಿತ್ತದಿಂದ ಮಲಗಬೇಕಂತೆ, ಹಾಗೆ ನಗುವಾಗ ಮಕ್ಕಳಂತೆ ನಗಬೇಕು. ಮನಸಾರೆ ನಗಬೇಕು, ಅಂತಹ ನಗುವೇ ಆರೋಗ್ಯವರ್ಧಕ. ಈ ದೃಷ್ಟಿಯಲ್ಲಿ ನಗೆ ಕೂಟಗಳು (Laughing Clug) ಮುಂಜಾನೆ ಹೊತ್ತು ನಡೆಯುವ ಸಾಮಾಜಿಕ ನಗು, ಜೋರಾಗಿ ಶಬ್ದಗಳನ್ನಷ್ಟೆ ಹೊರಸೂಸುತ್ತವೆಯೇ ಹೊರತು ಆನಂದದಾಯಕ ಭಾವನೆಗಳನ್ನಲ್ಲ. ಆದಾಗ್ಯೂ, ಇಂತಹ ಒತ್ತಾಯದ ನಗೆಗಳು ನಮ್ಮ ಸ್ನಾಯುಗಳನ್ನು ಹಾಗೂ ಶ್ವಾಸೋಚ್ಛಾಸ ಕ್ರಿಯೆಗಳನ್ನು ಉತ್ತೇನಗೊಳಸಿ ನಮ್ಮ ಆರೋಗ್ಯ ವರ್ಧನೆಗೆ ನೆರವಾಗುತ್ತವೆ, ಎಂಬುದರಲ್ಲಿ ಎರಡು ಮಾತಿಲ್ಲ". ೧೦

ಸಭೆ ಸಮಾರಂಭಗಳಲ್ಲಿ, ಭಾಷಣ ಮಾಡುವಾಗ ಯಾರಾದರೂ ನಗೆ ಚಟಾಕಿ ಹಾರಿಸಿದಾಗ ಕೈ ಚಪ್ಪಾಳೆ ತಟ್ಟಿ, ಸಂತೋಷವಾಗಿ ನಕ್ಕು ಬಿಡಬೇಕು. ಚಪ್ಪಾಳೆ ತಟ್ಟುವುದರಿಂದ ೩ ಲಾಭಗಳವೆ ಎನ್ನುತ್ತಾರೆ.

1. ನೀವು ತಟ್ಟಿದ್ದು ನಿಮ್ಮ ಕೈಗಳನ್ನು ಮಾತ್ರವಲ್ಲ–ಭಾಷಣಗಾರನ, ಕಲಾವಿದನ ಬೆನ್ನನ್ನು ನಿಮ್ಮ ಕೈ ಚಪ್ಪಾಳೆ ಮತ್ತು ಮೆಚ್ಚುಗೆಯ ನಗುವೇ ಅವನಿಗೆ ಪ್ರೋತ್ಸಾಹ ಹಾಗೂ ಅಭಿನಂದನೆ.
2. ಕೈ ಚಪ್ಪಾಳೆ ತಟ್ಟಿ, ನಗುವುದರಿಂದ ದೇಹಕ್ಕಷ್ಟು ವ್ಯಾಯಾಮವಾಗುತ್ತದೆ.
3. ಚಪ್ಪಾಳೆ ತಟ್ಟುವುದರಿಂದ ಸೊಳ್ಳೆಗಳದ್ದರೆ ಅವುಗಳು ನಾಶವಾಗುತ್ತದೆ ಎಂದಿದ್ದಾರೆ.

"ಎಲ್ಲಾ ಕಾಲದಲ್ಲಿ ಎಲ್ಲರಿಗೂ ಅರ್ಥವಾಗಬಲ್ಲ ಏಕೈಕ ಭಾಷೆ ಎಂದರೆ ನಗು, ಆದುದರಿಂದಲೇ ಅದು ಜಾಗತಿಕ ಭಾಷೆ". 'ನಗುವಾಗ ಕುರೂಪಿಗಳೂ ಸುಂದರವಾಗಿ ಕಾಣುತ್ತಾರೆ, ಸಿಟ್ಟು ಮಾಡಿಕೊಂಡಾಗ ಸ್ವರೂಪಿಗಳು ಕುರೂಪಿಗಳು ಕಾಣುತ್ತಾರೆ ! (Even ugly people look beautiful when they imile and even handsome people look ugly when they are angry), ಮೌನ ಕೆಲವೊಂದು ಸಮಸ್ಯೆಗಳನ್ನು ತಪ್ಪಿಸಬಹುದು. ಆದರೆ 'ನಗು' ಕೆಲವಾರು ಸಮಸ್ಯೆಗಳನ್ನು ಬಗೆಹರಿಸಬಹುದು. (Silence can avoid problems; but a smile can solve the problems)"[೧೦] ನಗು, ಚಪ್ಪಾಳೆಯಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ವೃದ್ಧಿಸಿಕೊಳ್ಳಬಹುದು ಎನ್ನಲಾಗುತ್ತದೆ.

ಆರೋಗ್ಯದ ಕುರಿತು ವೈಜ್ಞಾನಿಕ ಚಿಂತನೆಗಳು

ಆರೋಗ್ಯದ ಗುಟ್ಟು:– ಸಕಲ ಭಾಗ್ಯಗಳಲ್ಲಿ ಸರ್ವಶ್ರೇಷ್ಟವಾದುದು ಆರೋಗ್ಯ ಭಾಗ್ಯ. ಆರೋಗ್ಯಭಾಗ್ಯವನ್ನು ಉಳಿಸಿಕೊಳ್ಳುವ ಕಲೆ ಸುಲಭ ಹಾಗೂ ಅಗ್ಗ, ಆದರೆ ಕಳೆದುಕೊಂಡ ಆರೋಗ್ಯವನ್ನು ಮತ್ತೆ ಪಡೆದುಕೊಳ್ಳುವುದು ಕಷ್ಟ ಹಾಗೂ ದುಬಾರಿ. ಅವರವರ ಆರೋಗ್ಯ ಅವರವರ ಜವಾಬ್ದಾರಿ ಯಾಗಿರಬೇಕು. ಹಣ ಸಂಪಾದನೆ ಬೇಕಾದರೇ ಮಾಡಬಹುದು ಆದರೆ ಕಳದುಕೊಂಡ ಆರೋಗ್ಯದ ಸಂಪಾದನೆ ತೀರ ಕಷ್ಟಕರವಾದುದು ಅದಕ್ಕಾಗಿ ಎಲ್ಲರೂ ಅವರವರ ಆರೋಗ್ಯವನ್ನು ಕಾಪಾಡಿಕೊಳ್ಳುವುರು.

ಅವರವರ ಕರ್ತವ್ಯವಾಗಬೇಕು. ಆರೋಗ್ಯವೇ ಭಾಗ್ಯ (Health is wealth) ಎಂಬ ನಾಣ್ಣುಡಿಯೇ ಆರೋಗ್ಯ ಸಾರವನ್ನು ತಿಳಿಸುತ್ತದೆ.

"Restoration of health is difficult and expensive. But the art of preserving health is easy and economical". First we waste our health in search of wealth, next we waste our wealth in search of health". ಎಂಬ ಮಾತಿನಂತೆ, ಜೀವನದಲ್ಲಿ ಮೊದಲು ಸಂಪತ್ತನ್ನು ಪಡೆಯಲು ನಮ್ಮ ಆರೋಗ್ಯವನ್ನು ವ್ಯಯಿಸುತ್ತೇವೆ. ಮುಂದೆ ಆರೋಗ್ಯವನ್ನು ಹುಡುಕುತ್ತಾ, ನಮ್ಮ ಸಂಪತನ್ನು ವ್ಯಯ ಮಾಡುತ್ತೇವೆ.” ಆದ್ದರಿಂದ ಆರೋಗ್ಯವನ್ನು ಉಳಿಸಿಕೊಳ್ಳಲು ಕೆಲವು ಸೂತ್ರಗಳು, ಸೂಚನೆಗಳು ಪ್ರಯೋಜನಕಾರಿಯಾಗಿವೆ. ಆರೋಗ್ಯವನ್ನು ರೂಪಿಸುವ ಅಂಶಗಳೆಂದರೆ

- ನಮ್ಮ ಅನುವಂಶೀಕತೆ
- ಸುತ್ತ ಮುತ್ತಲ ಪರಿಸರ
- ನಮ್ಮ ಸಾಮಾಜಿಕ ಸ್ಥಿತಿಗತಿ
- ನಮ್ಮ ಆಹಾರ
- ವ್ಯಾಯಾಮ ಮತ್ತು ವಿಶ್ರಾಂತಿ

ಅನುವಂಶೀಯತೆ:- ನಮ್ಮ ದೇಹದ ತೂಕ, ರೂಪ, ಲಾವಣ್ಯ, ಬಣ್ಣ ಹಾಗೂ ಮುಂದೆ ಬರುವ ವ್ಯಾದಿಗಳು ಸಹ ಅನುವಂಶಿಕವಾಗಿರುತ್ತವೆ. ಎಂಬುದರಲ್ಲಿ ಸಂಶಯವಿಲ್ಲ. ಈ ಬಗ್ಗೆ ನಾನೇನು ಮಾಡಲು ಸಾಧ್ಯವಿಲ್ಲ. ನಮ್ಮ ಮುಂದಿನ ಪೀಳಿಗೆಯನ್ನು ಆರೋಗ್ಯವಂತವನ್ನಾಗಿಸುವಲ್ಲಿ ಅನುವಂಶೀಯತೆಯ ಮೂಲಕ ನೆರವಾಗಬಹುದು.

ಪರಿಸರ:- ಸ್ವಚ್ಚ ಪರಿಸರ ಆರೋಗ್ಯದಿಂದ ಇರಲು ಅತ್ಯಾವಶ್ಯಕವಾದುದು. ಮನೆಯ ಹಾಗೆಯೇ ಹೊರಗಿನ ಪರಿಸರವನ್ನು ಸ್ವಚ್ಚವಾಗಿಟ್ಟುಕೊಳ್ಳಬೇಕು. ಉದಾ:- ನರೇಂದ್ರ ಮೋದಿಯವರ 'ಸ್ವಚ್ಛಾ ಭಾರತ ಅಭಿಯಾನ' ಕಾರ್ಯವನ್ನು ಸ್ಮರಿಸಿಕೊಳ್ಳಬಹುದು.

ಊಟ ಬಲ್ಲವನಿಗೆ ರೋಗವಿಲ್ಲ ಎಂಬಂತೆ, ಆಹಾರದ ಗುಟ್ಟನ್ನು ಬಲ್ಲವನಿಗೆ ಯಾವುದೇ ರೋಗರುಜಿನಗಳ ಭಯವಿಲ್ಲ. ಆಹಾರವನ್ನು ಹಿತಮಿತವಾಗಿ ಸಕಾಲಕ್ಕೆ ಸರಿಯಾಗಿ ಸೇವನೆ ಮಾಡಬೇಕು. ಹಾಗೆಯೇ ಆಹಾರ ಎಷ್ಟು ಮುಖ್ಯವೋ ಅಷ್ಟೇ ವ್ಯಾಯಾಮವು ಅತ್ಯವಶ್ಯಕವಾಗಿದೆ. ವ್ಯಾಯಾಮವನ್ನು ರೂಡಿಸಿಕೊಳ್ಳುವುದರಿಂದ ಖಾಯಿಲೆಗಳು ಬಹುಬೇಗನೇ ಬರುವುದಿಲ್ಲ. ಏಕೆಂದರೆ ರೋಗ ನಿರೋಧಕ ಶಕ್ತಿಯು ಇದರಿಂದ ಹೆಚ್ಚಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ಕೆಲಸದ ಒತ್ತಡ ಸರ್ವೇ ಸಾಮಾನ್ಯವಾಗಿರುತ್ತದೆ. ಆದ್ದರಿಂದ ವ್ಯಾಯಾಮಗಳನ್ನು ಮಾಡಲು ಸಮಯವಿರುವುದಿಲ್ಲ. ಆದುದ್ದರಿಂದಾಗಿ ಟ್ರೆಡ್ ಮಿಲ್ ಸೈಕ್ಲಿಂಗ್‌ಗಳಂತಹ ವ್ಯಾಯಾಮಗಳನ್ನು ಮಾಡಲು ಹೆಲ್ತ್ ಫಿಟ್ನೆಸ್ ಸೆಂಟರ್‌ನ ಮೊರೆ ಹೋಗುತ್ತಿದ್ದಾರೆ. ಈಜು ಒಂದು ಒಳ್ಳೆಯ ವ್ಯಾಯಾಮ ಆಗಿದೆ, ಹಾಗೆಯೇ ಭಾರಗಳನ್ನು ಎತ್ತುವ ಮೂಲಕ, ಸೂರ್ಯ ನಮಸ್ಕಾರ, ಯೋಗಾಭ್ಯಾಸ, ಕ್ರೀಡೆ ಎಲ್ಲವೂ ಶರೀರಕ್ಕೆ ವ್ಯಾಯಾಮ ನೀಡಬಲ್ಲ ನಾನಾ ಪ್ರಕಾರಗಳು.

"ಯಾವ ಸಾಧನಗಳ ಅವಶ್ಯಕತೆಯೂ ಇಲ್ಲದೇ ಅಲ್ಪ ಕಾಲದಲ್ಲಿ ಮಾಡಬಹುದಾದ ಐಸೋಮ್ಯಾಟ್ರಿಕ್ ವ್ಯಾಯಾಮಗಳಂತೂ (Isometric Exercises) ತುಂಬಾ ಪರಿಣಾಮಕಾರಿ"[13] ಎನ್ನುತ್ತಾರೆ.

ನಗರಗಳಲ್ಲಿರುವ ಆರೋಗ್ಯ ಕೇಂದ್ರಗಳಲ್ಲಿ (Health Fitness Centre) ಬಹುಮುಖಿ ವ್ಯಾಯಾಮ ಯಂತ್ರಗಳನ್ನು (Multi Gym) ಬಳಸಲಾಗುತ್ತದೆ. ಇದರಿಂದಾಗಿ ಶರೀರದ ಎಲ್ಲಾ ಭಾಗಗಳಿಗೂ ನಡೆಯ ಮೂಲಕದ ವೈವಿದ್ಯಮಿಯ ವ್ಯಾಯಾಮ ಸಿಗುತ್ತದೆ. ಹಾಗೇ ಇದರಿಂದ ಶಾರೀರಿಕ ಮತ್ತು ಹೃದಯದ ದೃಡತೆಯ ಪರೀಕ್ಷೆಯನ್ನು ಕೂಡ ಮಾಡಿಕೊಳ್ಳಬಹುದು ಎನ್ನುತ್ತಾರೆ.

ವ್ಯಾಯಾಮ ಎನ್ನುವುದು ನಮ್ಮ ದೇಹಕ್ಕೆ ಒಂದು ವಿಶಿಷ್ಟ ಆಯಾಮವೇ ಆಗಿದೆ. ವ್ಯಾಯಾಮಗಳನ್ನು ಉತ್ತಮವಾಗಿ ರೂಡಿಸಿಕೊಂಡು, ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ದೇಹವು ಸಹ ರೋಗದಿಂದ ಮುಕ್ತವಾಗಿರುತ್ತದೆ. ವ್ಯಾಯಾಮವನ್ನು ಅಳವಡಿಸಿಕೊಂಡರೇ ಯಾವಾಗಲೂ ಚೈತನ್ಯಶೀಲರಾಗಿ ಇರಬಹುದಾಗಿದೆ.

<u>ವಿಶ್ರಾಂತಿ:</u>

ದುಡಿದಾಗ ದೇಹಕ್ಕೆ ಆಯಾಸವಾಗುವುದು ಸಹಜ. ಆರೋಗ್ಯದಿಂದಿರಲು ಆಹಾರ ವ್ಯಾಯಾಮ ಎಷ್ಟು ಮುಖ್ಯವೋ, ವಿಶ್ರಾಂತಿಯೂ ಅಷ್ಟೇ ಮುಖ್ಯವೂ, ಅಗತ್ಯವೂ ಆಗಿದೆ. ವಿಶ್ರಾಂತಿ ಇಲ್ಲದೇ ದುಡಿಯುವುದು ಹಲವು ರೋಗಗಳಿಗೆ ಆಹ್ವಾನ ಕೊಡುತ್ತದೆ. ದುಡಿಯುವ ದೇಹ ಬಲು ಬೇಗ ಬಳಲಿ ಆಯಾಸಗೊಂಡು ಮಾನಸಿಕ ಹಾಗೂ ಶಾರೀರಿಕ ದಣಿವಿನಿಂದ ಮುಕ್ತವಾಗಲು ಬಯಸುತ್ತದೆ. ವಿಶ್ರಾಂತಿಯ ಸಮಯದಲ್ಲಿ ದೇಹದ ಮುಖ್ಯ ಅಂಗಗಳಾದ ಹೃದಯ ಶ್ವಾಸಕೋಶ, ಮೂತ್ರ ಪಿಂಡಗಳು ಪಚನಾಂಗಗಳು, ಕೆಲಸ ಮಾಡುತ್ತಿರುತ್ತವೆ. ಆದರೆ ಶರೀರದ ಸ್ನಾಯುಗಳು, ಹೆಚ್ಚಿನ ಜೀವಕೋಶಗಳು ವಿಶ್ರಾಂತಿಯ ಸ್ಥಿತಿಯಲ್ಲಿರುತ್ತವೆ. ಹೀಗೆ ವ್ಯಾಯಾಮದ ಬಹುಪಾಲು ಶರೀರ ಹಾಗೂ ಮಾನಸಿಕ ಶಕ್ತಿಯನ್ನು ಮತ್ತೆ ಸಂಚಯಿಸಿಕೊಳ್ಳಲು ಹಾಗೂ ಪುನಶ್ಚೇತನಗೊಳಿಸಲು ವಿಶ್ರಾಂತಿ ನೆರವಾಗುತ್ತವೆ ಎಂದಿದ್ದಾರೆ.

"ಮನುಷ್ಯನ ಮನಃಸ್ಥಿತಿಯನ್ನು ೩ ವಿಧಗಳಾಗಿ ವಿಂಗಡಿಸಬಹುದು.

1. ಪ್ರಜ್ಞಾವಂತ ಸ್ಥಿತಿ (Concious State)
2. ಅರೆ ಪ್ರಜ್ಞಾವಂತ ಸ್ಥಿತಿ (Subconsious State)
3. ಪ್ರಜ್ಞಾಹಿತ ಸ್ಥಿತಿ (Unconscious State)" ೧೩

ಈ ಸ್ಥಿತಿಗಳು ಪ್ರಮುಖವಾಗಿ ನಡೆಯುತ್ತಲೇ ಇರುತ್ತವೆ. ನಾವು ವಿಚಾರದಲ್ಲಿರುವಾಗ ಇರುವಂತ ಸ್ಥಿತಿ, ಹಾಗೆಯೇ ನಮಗೆ ಅರಿವಿಲ್ಲದಂತೆಯೇ ನಮ್ಮ ಮೆದುಳಿನೊಳಗೆ ಕೆಲವೊಂದು ಚಟುವಟಿಕೆಗಳು ನಡೆಯುತ್ತಿರುತ್ತವೆ. ಹಾಗೆಯೇ ಕೊನೆಗೆ ಹಲವು ತರಹದ ಖಾಯಿಲೆಗಳ ತೀವ್ರತರ ಸ್ಥಿತಿ ತಲುಪಿದಾಗ ಅಥವಾ ತಲೆ ಮೆದುಳಿಗೆ ಸಂಬಂಧಿಸಿದ ಅಪಘಾತಗಳು ಇಂತಹ ಸ್ಥಿತಿಯನ್ನು ತಂದೊಡ್ಡಬಹುದು ಎಂದು ವೈಜ್ಞಾನಿಕವಾಗಿ ಹೇಳುತ್ತಾರೆ.

ನಿದ್ರೆ:

ವಿಶ್ರಾಂತಿ ಪಡೆಯುವ ಅತ್ಯುತ್ತಮ ವಿರಾಮವೆಂದರೆ ಹಾಯಾಗಿ ನಿದ್ರಿಸುವುದು. ನಿದ್ರೆ ಎಂಬುದು ಎಲ್ಲಾ ಜೀವಿಗಳಿಗೂ ಅತ್ಯವಶ್ಯಕವಾದ ಒಂದು ನೈಸರ್ಗಿಕ ಕ್ರಿಯೆ ಮಾತ್ರವಲ್ಲ ದೈವದತ್ತ ವರ. "ನಿದ್ರಾಯತ್ತಂ ಸುಖಂ, ದುಃಖಂ ಪುಷ್ಟಿಃ ತಾರ್ಷ್ಟ ಬಲಾಬಲಮ್ ವೃಷತಾ, ಕ್ಲೀಬತಾ, ಜ್ಞಾನಮಜ್ಞನಂ ಜೀವಿತಂ ನಚ" ಅಂದರೆ ಸುಖ, ದುಃಖ, ಪುಷ್ಟಿ ಕೃಶತೆ, ಜ್ಞಾನ, ಅಜ್ಞಾನ, ಆರೋಗ್ಯ ಹಾಗೂ ಪೂರ್ಣ ಸುಖ ಜೀವನಕ್ಕೆ ಸುಖ ನಿದ್ರೆಯು ಅವಶ್ಯಕ" ೮ ಎಂದಿದ್ದಾರೆ.

ನಿದ್ರೆಯೊಂದೇ ವಿಶ್ರಾಂತಿ ನೀಡುವ ಏಕ ಮಾತ್ರ ಸಾಧನವಲ್ಲ. ವಿಶ್ರಾಂತಿಯನ್ನೊದಗಿಸುವ ನೀತಿಯು ನಾನಾ ಪ್ರಕಾರಗಳಲ್ಲಿವೆ. ಹಾಯಾಗಿ ಕಣ್ಣು ಮುಚ್ಚಿ ವಿಶ್ರಮಿಸುವ ಪರಿಪಾಠವು ವಿಶ್ರಾಂತಿಯ ಅನುಭವ ತರುತ್ತದೆ. ಹಾಗೆಯೇ ಧ್ಯಾನ, ಮೌನ, ಯೋಗಾಭ್ಯಾಸವು ವಿಶ್ರಾಂತಿಯನ್ನ ನೀಡುತ್ತದೆ. ಇದು ಸಹ ಒಂದು ರೀತಿಯ ವಿಶ್ರಾಂತಿಯ ಆಯಾಮವೇ ಆಗಿದೆ. ಒಟ್ಟಿನಲ್ಲಿ ಸ್ವಚ್ಛ ಪರಿಸರ, ಉತ್ತಮ ಆಹಾರ, ನಿತ್ಯ ಆಯಾಮ, ಸಕಷ್ಟು ವಿಶ್ರಾಂತಿ ಹಾಗೂ ದುಶ್ಚಟ, ದುರಭ್ಯಾಸಗಳಿಂದ ದೂರವಿರುತ್ತದೆ. ಆರೋಗ್ಯದ ಗುಟ್ಟು ಎಂದು ಹೇಳಿದ್ದಾರೆ.

ವೈದ್ಯಕೀಯ ವಿಜ್ಞಾನ ಪ್ರತಿ ನಿತ್ಯ ನಿರಂತರವಾಗಿ ಹೊಸ ಹೊಸ ಆವಿಷ್ಕಾರಗಳೊಂದಿಗೆ ಸಾಗುತ್ತಿರುವ ಕ್ಷೇತ್ರವಾಗಿದೆ. ಇದು ಕೇವಲ ನಿಂತ ನೀರಾಗಿರದೆ ಚಲನಶೀಲವಾಗಿದೆ. ಹಲವಾರು ಸಂಶೋಧನೆಗಳು ಹಲವು ಬಗೆಗಳಲ್ಲಿ ನಡೆಯುತ್ತಿರುವುದು ವೈದ್ಯ ಲೋಕಕ್ಕೆ ಹಿಡಿದ ಕನ್ನಡಿಯಾಗಿದೆ. ಒಟ್ಟಾರೆಯಾಗಿ ಇವರ ವೈಜ್ಞಾನಿಕ ಚಿಂತನೆಗಳು ಪ್ರಸ್ತುತ ಜೀವನಕ್ಕೆ ಹೆಚ್ಚು ಸಮಂಜಸವಾದವುಗಳಾಗಿವೆ.

ವೈಜ್ಞಾನಿಕತೆಗೆ ಸಂಬಂಧಿಸಿದಂತೆ ಮುತ್ತೂರಾಯರ ಕೆಲವು ಆಯ್ದ ಪ್ರಕಟಿತ ಲೇಖನಗಳ ಒಂದು ವಿಶ್ಲೇಷಣೆ:

ಹಾಲು ಎಲ್ಲಾ ಪಾನೀಯಗಳಗಿಂತಲೂ ಮೇಲೂ !

ಸಕಲ ಭಾಗಗಳಲ್ಲಿ ಸರ್ವಶ್ರೇಷ್ಟವಾದುದು ಆರೋಗ್ಯಭಾಗ್ಯ ಇತರ ಏನೇ ಭಾಗ್ಯಗಳು ಇದ್ದು ಆರೋಗ್ಯಭಾಗ್ಯವೇ ಇಲ್ಲದಿದ್ದರೆ ಎಲ್ಲವೂ ವ್ಯರ್ಥ, ಎಲ್ಲವೂ ಅರ್ಥಹೀನ, ಹಾಗೆಯೇ ಆರೋಗ್ಯಭಾಗ್ಯವೇ ದೊಡ್ಡ ಸಂಪತ್ತು ಎನ್ನಬಹುದು. ವಿಶ್ವ ಆರೋಗ್ಯ ಸಂಸ್ಥೆಯವರ ಪ್ರಕಾರ "ಕಣ್ಣಿಗೆ ಕಾಣುವ ರೋಗ ರುಜಿನಗಳು ಇಲ್ಲವೆಂದ ಮಾತ್ರಕ್ಕೆ ಒಬ್ಬ ವ್ಯಕ್ತಿ ಆರೋಗ್ಯವಂತನೆಂದು ಅರ್ಥವಲ್ಲ. ಅವರವರ ವಯಸ್ಸು ಮತ್ತು ವೃತ್ತಿಗೆ ತಕ್ಕಂತಹ ಶಾರೀರಿಕ ಮತ್ತು ಮಾನಸಿಕ ಲವಲವಿಕೆಯನ್ನು ಹೊಂದಿ, ದೈಹಿಕ, ಮಾನಸಿಕ, ನೈತಿಕ, ಆಧ್ಯಾತ್ಮಿಕ, ಸಕಾರಾತ್ಮಕ ಮನೋಸ್ಥಿತಿಯನ್ನು ಹೊಂದಿರುವುದೇ ಆರೋಗ್ಯವಾಗಿದೆ. ರವಿಶಂಕರ್ ಗುರೂಜಿಯವರ ಮಾತಿನಲ್ಲಿ ಹೇಳುವುದಾದರೆ "ರೋಗ ರಹಿತ ದೇಹ, ಚಿಂತೆ ರಹಿತ ಮನಸ್ಸು ಹಾಗೂ ದುಃಖ ರಹಿತ ಆತ್ಮವನ್ನು ಹೊಂದಿರುವುದೇ ನಿಜವಾದ ಆರೋಗ್ಯ". ಅಂದರೆ Disease free body, stress free mind and sarrow free soul. ಎಂದಿದ್ದಾರೆ.

ಇಂತಹ ಆರೋಗ್ಯವನ್ನು ಪಡೆದುಕೊಳ್ಳುವ ಪ್ರಕ್ರಿಯೆ ಹುಟ್ಟಿದ ಕ್ಷಣದಿಂದ ಆರಂಭವಾಗುತ್ತದೆ. ಹುಟ್ಟಿದ ಹಸುಗಳಗೆ ಭಗವಂತ ಸೃಷ್ಟಿಸಿದ ಪ್ರಪ್ರಥಮ ಆಹಾರವೇ ಅಮ್ಮನ ಎದೆ ಹಾಲು. ಇದು ಸಸ್ಯಾಹಾರವೂ ಅಲ್ಲ, ಮಾಂಸಾಹಾರವೂ ಅಲ್ಲ, ಇದೊಂದು ದೈವದತ್ತವಾದ ಆಹಾರ. ಇದರಲ್ಲಿ ಕಂದನ ಬೆಳವಣಿಗೆಗೆ ಬೇಕಾದಂತಹ ಎಲ್ಲಾ ಪೋಷಕಾಂಶಗಳು ಇವೆ.

ಅಮ್ಮನ ಎದೆ ಹಾಲು ಕೊನೆ ಆದ ದಿನದಿಂದ ಸಾಯುವವರೆಗೆ ದಿನ ನಿತ್ಯ ದೊರಕುವ ದ್ರವ ರೂಪದ ಅತ್ಯುತ್ತಮ ಆಹಾರವೇ ಆಕಳ ಹಾಲು. ನಾವು ಸೇವಿಸುವ ಆಹಾರವನ್ನು ಅದು ದೊರಕುವ ಮೂಲಕ್ಕನುಸಾರವಾಗಿ, ಘನರೂಪ, ದ್ರವರೂಪದ ಆಹಾರವೆಂದು ವರ್ಗೀಕರಿಸಬಹುದು. ಆದರೆ ಎಲ್ಲಾ ಆಹಾರಗಳ ಪೈಕಿ ಯಾವುದೇ ಬೇಧವಿಲ್ಲದೆ ಬಡವರಿಂದ ಹಿಡಿದು ಶ್ರೀಮಂತರವರೆಗೆ ಎಲ್ಲರೂ ದಿನ ನಿತ್ಯ ಬಳಸುವ ಸಾತ್ವಿಕ ದ್ರವರೂಪದ ಆಹಾರವೇ ಹಾಲು. ಮಕ್ಕಳಂದ ಹಿಡಿದು ಮುದುಕರವರೆಗೂ, ರೋಗಿಗಳಂದ ಹಿಡಿದು ಯೋಗಿಗಳವರೆಗೂ, ಕ್ರೀಡಾ ಪಟುಗಳಂದ ಹಿಡಿದು ಕುಸ್ತಿ ಪಟುಗಳವರೆಗೆ ಎಲ್ಲರಿಗೂ ಬೇಕೇ ಬೇಕು ಹಾಲು.

ಈ ಹಿನ್ನಲೆಯಲ್ಲಿ ಎಲ್ಲಾ ವಯಸ್ಸಿನವರು ಎಲ್ಲಾ ಕಾಲದಲ್ಲೂ ಕುಡಿಯಲೇ ಬೇಕಾದ ಪಾನೀಯವೆಂದರೆ ಹಾಲು. ನಿತ್ಯ ಕನಿಷ್ಟ 250 ಎಂ.ಎಲ್ ನಷ್ಟು ಹಾಲನ್ನು ಕುಡಿಯುವುದು ಆರೋಗ್ಯ ದೃಷ್ಟಿಯಿಂದ ಒಳ್ಳೆಯದು. ಇಂದಿನ ಮಕ್ಕಳು ಹಾಗೂ ಯುವ ಜನಾಂಗ ಕೃತಕ ಪಾನೀಯಗಳಗೆ ಮಾರು ಹೋಗಿದ್ದಾರೆ. ಅದನ್ನೆಲ್ಲ ತ್ಯಜಿಸಿ ಹಾಲು ಎಂಬ ಅಮೃತ ಪಾನೀಯವನ್ನು ಕುಡಿಯುವುದನ್ನು ಅಭ್ಯಾಸ ಮಾಡಿಕೊಳ್ಳುವುದು ಒಳ್ಳೆಯದು ಎಂದಿದ್ದಾರೆ.[೧೪]

ದೇಹದಾನ – ಮಹಾದಾನ:-

ಪುರಾಣದಲ್ಲಿ ದೇಹದಾನ ಮಾಡಿದ ದಧೀತಿ ಋಷಿಯ ಉಲ್ಲೇಖವಿದೆ. ದೇವತೆಗಳಿಗೆ ಅಸುರರ ಉಪಟಳ ಅತಿಯಾಗಿ ಅವರನ್ನು ಸಂಹರಿಸಲು ನೆರವಾಗುವಂತಹ ವಜ್ರಾಯುಧವನ್ನು ನಿರ್ಮಿಸಲು ತನ್ನ ದೇಹವನ್ನು ತ್ಯಜಿಸಿ, ದಧೀತಿ ಮುನಿ ತನ್ನ ಎಲುಬುಗಳನ್ನು ದಾನ ಮಾಡಿದನೆಂದು ಹೇಳಲಾಗುತ್ತದೆ. ಅವನ ಪರಮ ತ್ಯಾಗದ ಸಂಕೇತವಾಗಿ ಇಂದಿಗೂ "ಪರಮ ವೀರ ಚಕ್ರ" "ವಜ್ರ" ಎನ್ನುವ ಅತ್ಯುತ್ತಮ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಜಗತ್ತಿನ ಕೆಲವು ಧರ್ಮಗಳು ದೇಹದಾನವನ್ನು ಒಪ್ಪಿಕೊಳ್ಳುತ್ತವೆ.

ಯಾವುದೇ ಮನುಷ್ಯ ತನ್ನ ಮರಣ ಪೂರ್ವ (ಜೀವಂತವಾಗಿರುವಾಗ) ದಲ್ಲಿ ರಕ್ತ, ವೀರ್ಯ, ಮೂತ್ರಪಿಂಡವನ್ನು ದಾನ ಮಾಡಬಹುದಾದರೆ ಮರಣಾನಂತರ ತನ್ನ ದೇಹವನ್ನು ಏಕೆ ದಾನ ಮಾಡಬಾರದು, ದಾನ ಮಾಡುವಂತಹ ಮನಃಸ್ಥಿತಿಯನ್ನು ಬೆಳಸಿಕೊಳ್ಳಬೇಕು. ಆಗಲೇ ಮಾನವನ ಜನ್ಮ ಸಾರ್ಥಕ. ಮೃತ ದೇಹದಿಂದ, ದೇಹ ಕೊಳೆಯಲು ಪ್ರಾರಂಭವಾಗುವ ಮುನ್ನ ಕಣ್ಣು, ಚರ್ಮ, ಮೂಳೆ, ಹಲ್ಲು, ಕರ್ಣಪಟಲ ಮುಂತಾದ ಅಂಗಾಂಗಗಳನ್ನು ಬೇರ್ಪಡಿಸಿ ಅವಶ್ಯಕತೆ ಇರುವ ರೋಗಿಗಳಿಗೆ ತಕ್ಷಣ ಹೊಂದಿಸಿಕೊಳ್ಳಬಹುದು ಹಾಗೆಯೇ ಆಘಾತ, ಅಪಘಾತದ ಸಂದರ್ಭದಲ್ಲಿ ಮಿದುಳು ನಿಷ್ಕ್ರಯಗೊಂಡು, ಜೀವ ಉಳಿಸುವ ಉಪಕರಣದ ನೆರವಿನಿಂದ ಇನ್ನೂ ಬದುಕಿ ಉಳಿದಿರುವ ರೋಗಿಯಿಂದಲೂ ಆತನ ಅಂಗಾಂಗಗಳನ್ನು ಬೇರ್ಪಡಿಸಿ ಅದರ ಅವಶ್ಯಕತೆ ಇರುವ ರೋಗಿಗಳಿಗೆ ಕಸಿ ಮಾಡಬಹುದು (Organ Transplanation) ಎಂದಿದ್ದಾರೆ. ಹೃದಯ ಶ್ವಾಸಕೋಶ, ಕರುಳು, ಮೂತ್ರಪಿಂಡ ಮುಂತಾದ ಅಂಗಾಗಳನ್ನು ಅವಶ್ಯಕತೆ ಇರುವ ರೋಗಿಗಳಿಗೆ ಕಸಿ ಮಾಡುವ ಶಸ್ತ್ರಚಿಕಿತ್ಸೆಗಳಂತೂ ಇತ್ತೀಚೆಗೆ ಸರ್ವೆ ಸಾಮಾನ್ಯವಾಗಿಬಿಟ್ಟಿವೆ.

ಮನಸ್ಸಿದ್ದಲ್ಲಿ ತನ್ನ ನಿಕಟ ಸಂಬಂಧಿಗಳ ಒಪ್ಪಿಗೆಯನ್ನು ಪಡೆದು ಆರೋಗ್ಯವಂತ ಯಾವ ವ್ಯಕ್ತಿಯು ಕೂಡ ದೇಹ ದಾನ ಮಾಡಬಹುದು. ಇದಕ್ಕೆ ಲಿಂಗ, ಜಾತಿ, ಮತ, ಬೇಧವಿಲ್ಲ. ಆದರೆ ಟಿ.ಬಿ. ಹೆಚ್.ಐ.ವಿ. ಹೆಪಟೈಟಿಸ್ ಇಂತಹ ಕೆಲವು ಕಾಯಿಲೆಗಳಿಂದ ಮುಕ್ತರಾಗಿರುವವರು ಮಾತ್ರ ದೇಹದಾನ ಮಾಡಲು ಅರ್ಹರು.

ಸ್ವಯಂ ಪ್ರೇರಿತ ದೇಹದಾನವು ಮಾನವ ಕುಲಕ್ಕೆ ನಾವು ನೀಡಬಹುದಾದ ಅತೀ ದೊಡ್ಡ ದಾನ ಎಂದರೆ ದೇಹದಾನ. ದೇಹದಾನವು ಹಲವು ಜೀವಗಳ ಜೀವಧಾನ. ಅನೇಕ ಜೀವಗಳನ್ನು ಉಳಿಸುವ ಮಹಾದಾನವೇ ಆಗಿದೆ ಎಂದಿದ್ದಾರೆ. [೧೫]

ಅಡಿ ಟಿಪ್ಪಣಿ

೧. ಮಾನವ ಮೆದುಳು – ಡಾ|| ಕೆ.ಪಿ. ಪುತ್ತೂರಾಯ, ಜ್ಯೋತಿ ಪ್ರಕಾಶನ, ೨೦೧೦, ಪುಟ ೧೩

೨. ಅದೇ, ಪುಟ ೧೮ ಮತ್ತು ೧೯

೩. ಅದೇ, ಪುಟ ೧೯

೪. ಅದೇ ಪುಟ ೨೫

೫. ನಿಮ್ಮ ದೇಹದ ಬಗ್ಗೆ ನಿಮಗೆಷ್ಟು ಗೊತ್ತು ? ಡಾ|| ಕೆ.ಪಿ. ಪುತ್ತೂರಾಯ, ಕನ್ನಡ ಪುಸ್ತಕ ಪ್ರಾಧಿಕಾರ ೨೦೧೦, ಪುಟ IX

೬. ಅದೇ, ಪುಟ ೧

೭. ನಗು ಅತ್ಯುತ್ತಮ ಔಷಧಿ – ಡಾ|| ಕೆ.ಪಿ. ಪುತ್ತೂರಾಯ, ಕನ್ನಡ ಪುಸ್ತಕ ಪ್ರಧಿಕಾರ ೨೦೧೨, ಪುಟ ೨

೮. ಅಂತರ್ಜಾಲದಿಂದ ಸಂಗ್ರಹ – ಕಗ್ಗ

೯. ನಗು ಅತ್ಯುತ್ತಮ ಔಷಧಿ – ಡಾ|| ಕೆ.ಪಿ. ಪುತ್ತೂರಾಯ, ಕನ್ನಡ ಪುಸ್ತಕ ಪ್ರಾಧಿಕಾರ ೨೦೧೨, ಪುಟ ೪

೧೦. ಅದೇ, ಪುಟ–೫

೧೧. ಮನಮಂಥನ ಶುಭಚಿಂತನ ಜ್ಯೋತಿ ಪ್ರಕಾಶನ ೨೦೦೪, ಪುಟ ೨೩೦

೧೨. ಅದೇ, ಪುಟ ೨೩೬

೧೩.ಅದೇ, ಪುಟ ೨೩೮

೧೪. ಪ್ರಿಯಾಂಕ ಮಾಸ ಪತ್ರಿಕೆ, ಮಾರ್ಚ್ ೨೦೧೩

೧೫. ಸಂಜೀವಿನಿ ಮಾಸ ಪತ್ರಿಕೆ, ಜುಲೈ ೨೦೧೬

ಅಧ್ಯಾಯ : 05

ಸಮಾರೋಪ:

"ಡಾ॥ ಕೆ.ಪಿ. ಪುತ್ತೂರಾಯರ ಸಾಹಿತ್ಯದಲ್ಲಿ ವೈಚಾರಿಕ – ವೈಜ್ಞಾನಿಕ ಪ್ರಜ್ಞೆ ಒಂದು ಅಧ್ಯಯನ" ಈ ಸಂಶೋಧನಾ ಅಧ್ಯಯನದಿಂದ ಕಂಡುಬಂದಿರುವ ಅವರ ಸಾಹಿತ್ಯದ ವಿಶಿಷ್ಟ ಅಂಶಗಳನ್ನು ಅಧ್ಯಯನ ಮಾಡಲಾಗಿದೆ. ಡಾ॥ ಕೆ.ಪಿ. ಪುತ್ತೂರಾಯರವರ ಕೃತಿ, ಸಂಶೋಧನಾ ಲೇಖನಗಳು, ಅಂಕಣಗಳು, ಧ್ವನಿ ಸಾಂದ್ರಿಕೆ ಹಾಗೂ ಇವರ ಸಂದರ್ಶನ ಇವುಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇವರು ರಚಿಸಿರುವ ಕೃತಿಗಳನ್ನು ಆಕರ ಸಾಮಗ್ರಿಯಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಡಾ॥ ಕೆ.ಪಿ. ಪುತ್ತೂರಾಯರವರ ಬಾಲ್ಯದಿಂದ ಮೊದಲಾಗಿ ಆರಂಭಿಕ ವಿದ್ಯಾಭ್ಯಾಸ, ಉನ್ನತ ವ್ಯಾಸಂಗ, ವೃತ್ತಿ ಜೀವನ, ಸಾಹಿತ್ಯ ಕೃಷಿ, ಪದವಿ ಗೌರವ ಹಾಗೂ ಪುರಸ್ಕಾರಗಳು ಈ ಎಲ್ಲಾ ವಿಷಯಗಳನ್ನು ವಿವರವಾಗಿ ದಾಖಲಿಸಿದ್ದೇನೆ. ಈ ಸಂಶೋಧನಾ ನಿಬಂಧದಲ್ಲಿ ಒಟ್ಟು 5 ಅಧ್ಯಾಯಗಳಿವೆ. ಒಂದೊಂದು ಅಧ್ಯಾಯದಲ್ಲು, ಇವರು ರಚಿಸಿರುವ ಸಾಹಿತ್ಯವನ್ನು ಸಿಕ್ಕಿರುವ ಅಕರ ಸಾಮಗ್ರಿಗಳಿಂದ ವಿಶ್ಲೇಷಣೆ ಮಾಡಲಾಗಿದೆ. ಇಲ್ಲಿ ಬಹುಮುಖ್ಯವಾಗಿ ಇವರ ಕೃತಿ, ಲೇಖನಗಳಿಂದ ವೈಚಾರಿಕ–ವೈಜ್ಞಾನಿಕ ಚಿಂತನೆಗಳನ್ನು ತೆಗೆದುಕೊಂಡು, ಅವುಗಳನ್ನು ವಿಶ್ಲೇಷಣೆ ಮಾಡಿ ನಿಬಂಧಕ್ಕೆ ಒಳಪಡಿಸಲಾಗಿದೆ.

ಮೊದಲನೇ ಅಧ್ಯಾಯವಾದ 'ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ' ಇದರಲ್ಲಿ ಅಧ್ಯಯನಕ್ಕೆ ತೊಡಗುವ ಮುನ್ನ, ಆ ಅಧ್ಯಾಯಗಳು ಒಳಗೊಂಡಿರುವ ಎಲ್ಲಾ ಅಂಶಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಅಂದರೆ ಈ ಸಂಶೋಧನಾ ನಿಬಂಧದ ಉದ್ದೇಶ, ಅಧ್ಯಯನದ ವ್ಯಾಪ್ತಿ, ಸಂಶೋಧನಾ ಬಗೆ ಹಾಗೂ ಮಾಹಿತಿ ಸಂಗ್ರಹಣೆಯ ವಿವಿಧ ನೆಲೆಗಳು, ಇವುಗಳ ವಿತರಣೆಯನ್ನು ಒಳಗೊಂಡಿದೆ. ಸಂಶೋಧನೆಯ ಪ್ರಕ್ರಿಯೆಯಲ್ಲಿ ಇಲ್ಲಿಯವರೆಗೂ ಸಿಕ್ಕಿರುವ ಎಲ್ಲಾ ಸಾಮಗ್ರಿಯನ್ನು ಅವರ ಕೃತಿಗಳಿಂದ, ಲೇಖನಗಳಿಂದ ಹಾಗೂ ಸಂದರ್ಶನದಿಂದ ಸಂಗ್ರಹಿಸಿದ್ದೇನೆ.

ಎರಡನೇ ಅಧ್ಯಾಯವಾದ "ಡಾ॥ ಕೆ.ಪಿ. ಪುತ್ತೂರಾಯರ ಜೀವನ ಮತ್ತು ವ್ಯಕ್ತಿತ್ವ ಇದರಲ್ಲಿ ಅವರ ಕೌಟುಂಬಿಕ ಹಿನ್ನಲೆಯನ್ನು ಒಳಗೊಂಡಂತೆ ಹಾಗೂ ವ್ಯಕ್ತಿತ್ವವನ್ನು ಗುರುತಿಸಲಾಗಿದೆ. ಪುತ್ತೂರಾಯರು ಶಿಕ್ಷಣ ತಜ್ಞರು, ಸಾಹಿತಿ, ವಾಗ್ಮಿ ಹಾಗೂ ಚಿಂತಕರು ಹಾಗೂ ಬಹುಮುಖ ಪ್ರತಿಭೆಯುಳ್ಳವರು. ಇವರು ಸರ್ಕಾರಿ ಹುದ್ದೆಯಲ್ಲಿದ್ದೂ, ವೈದ್ಯಕೀಯ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರು ಆಗಿದ್ದರೂ ಸಹ ಕನ್ನಡ ಸಾಹಿತ್ಯದಲ್ಲಿ ಶ್ರಮಿಸುತ್ತಿದ್ದಾರೆ. ಇವರು ಚಿಕ್ಕ ವಯಸ್ಸಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗಲೇ ಅತ್ಯಂತ ಸೂಕ್ಷ್ಮಮತಿ ಉಳ್ಳವರಾಗಿದ್ದರು. ಹಾಗೆಯೇ ಓದುವಾಗಲೆಲ್ಲ ಪ್ರಥಮ ಸ್ಥಾನದಲ್ಲಿ ಉತ್ತೀರ್ಣರಾಗುತ್ತಿದ್ದವರು. ಆದುದರಿಂದಲೇ ಇವರು ಉತ್ತಮ ಭೋದಕರಾಗಿ, ಪರೀಕ್ಷಕರಾಗಿ, ಸಂಶೋಧಕರಾಗಿ, ತಜ್ಞರಾಗಿ, ಆಡಳಿತಾಧಿಕಾರಿಯಾಗಿ ವೃತ್ತಿಯಲ್ಲಿ ಸೇವೆ ಸಲ್ಲಿಸಿರುವುದಲ್ಲದೇ ಪ್ರಸ್ತುತ ಎಂ.ಎಸ್. ರಾಮಯ್ಯ ಅಂ.ರಾ. ಮೆಡಿಕಲ್ ಕಾಲೇಜು ಹಾಗೂ ಆಕ್ಸ್‌ಫರ್ಡ್ ಡೆಂಟಲ್ ಕಾಲೇಜಿನಲ್ಲಿ ಸಂದರ್ಶಕರ ಪ್ರಾಧ್ಯಾಪಕರಾಗಿ ಇಂದಿಗೂ ಸೇವೆ ಸಲ್ಲಿಸುತ್ತಿದ್ದಾರೆ. ವೃತ್ತಿಯಲ್ಲಿ ವೈದ್ಯಕೀಯ ಮಹಾ ವಿದ್ಯಾಲಯಗಳಲ್ಲಿ ಉನ್ನತ ಹುದ್ದೆಯನ್ನು ಅಲಂಕರಿಸಿದ್ದರೂ ಸಹ ಇವರ ಸಾಹಿತ್ಯ ಕೃಷಿ, ಕನ್ನಡದ ಮೇಲೆ ಇವರಿಗಿರುವ

ಭಾಷಾಭಿಮಾನ, ಇವರ ಈ ಸರ್ವತೋಮುಖ ಗುಣಕ್ಕೆ ಎಷ್ಟು ತಲೆಬಾಗಿದರು ಸಾಲದು. ಇಂದಿಗೂ ಇವರ ಸಾಹಿತ್ಯ ಅಪಾರ ಜನಮನ್ನಣೆಯನ್ನು ಪಡೆದಿರುವುದಷ್ಟೆ ಅಲ್ಲದೇ ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಖ್ಯಾತಿ ಪಡೆದಿರುವುದು ಹೆಮ್ಮೆಯ ವಿಷಯವಾಗಿದೆ. ಇವರು ಇದುವರೆಗೆ ಬರೆದ 13 ಕೃತಿಗಳ 40,000 ಪ್ರತಿಗಳು ಓದುಗರ ಕೈ ಸೇರಿರುವುದು ಇವರ ಸಾಹಿತ್ಯ ಕೃಷಿಗೆ ಸಾಕ್ಷಿಯಾಗಿದೆ.

ಇವರ ಎಲ್ಲಾ ವಿಚಾರ ಮಂಥನವನ್ನು ಇವರ ಕೃತಿಗಳಿಂದ, ಸಂದರ್ಶನದಿಂದ, ಅಂತರ್ಜಾಲದಿಂದ ಸಂಗ್ರಹಿಸಿದ ವಿಷಯಗಳು. ಈ ಆಕರಗಳಿಂದಲೇ ಇವರ ಸಾಹಿತ್ಯ ಸಾಧನೆಯನ್ನು ಕಟ್ಟಿಕೊಡಲು ಪ್ರಯತ್ನಿಸಿದ್ದೇನೆ. ಇವರು ಬರೆದಿರುವ ಕೃತಿಗಳ ಬಗೆಗೆ ಇವರ ಅಚ್ಚುಮೆಚ್ಚಿನ ದಾರ್ಶನಿಕರು, ಚಿಂತಕರು, ಸಾಹಿತಿಗಳು ವ್ಯಕ್ತಪಡಿಸಿರುವ ತಮ್ಮ ತಮ್ಮ ಅನಿಸಿಕೆ ಅಭಿಪ್ರಾಯಗಳನ್ನು ಕುರಿತು ಈ ನಿಬಂಧದಲ್ಲಿ ಅಳವಡಿಸಿಕೊಂಡಿರುತ್ತೇನೆ. ಇವರ ಕನ್ನಡ ಪರ ಆಲೋಚನೆಗಳು ವೈಜ್ಞಾನಿಕ ಚಿಂತನೆಗಳು, ಏನೆಂಬುದನ್ನು ಇವರ ಕೃತಿಗಳಿಂದ, ಸಂದರ್ಶನದಿಂದ ಉಪನ್ಯಾಸಗಳಿಂದ, ಧ್ವನಿ ಸಾಂದ್ರಿಕೆಗಳಿಂದ ತಿಳಿದುಕೊಂಡು ಅದನ್ನು ವಿಶ್ಲೇಷಣೆ ಮಾಡಿ ನಿಬಂಧಕ್ಕೆ ಒಳಪಡಿಸಿದೆ. ಮೌಢ್ಯ, ಕಂದಾಚಾರ, ಪಿಡುಗಗಳನ್ನು ತೊಡೆದುಹಾಕುವ ಪ್ರಯತ್ನವನ್ನು ತಮ್ಮ ಉಪನ್ಯಾಸಗಳಲ್ಲಿ, ಸಾಹಿತ್ಯದಲ್ಲಿ, ತಿಳಿ ಹಾಸ್ಯಗಳಲ್ಲಿ ಅಂಕಣ ಬರಹಗಳಲ್ಲಿ ತಿಳಿಸಿರುತ್ತಾರೆ. ಇವುಗಳನ್ನು ಸಹ ವಿಶ್ಲೇಷಣೆ ಮಾಡಿ ಈ ನಿಬಂಧಕ್ಕೆ ಅಳವಡಿಸಿಕೊಂಡಿರುತ್ತೇನೆ.

ಒಟ್ಟಾರೆಯಾಗಿ ಇವುಗಳೆಲ್ಲವುಗಳಿಂದ ಅವರ ವ್ಯಕ್ತಿತ್ವವನ್ನು ಸೂಜ್ಜವಾಗಿ ಕಟ್ಟಿಕೊಡಲಾಗಿದೆ.

ಮೂರನೇ ಅಧ್ಯಾಯದಲ್ಲಿ ಇವರ ಸಾಹಿತ್ಯದಲ್ಲಿ ವೈಚಾರಿಕ ಚಿಂತನೆಗಳನ್ನು ತಿಳಿಸಲಾಗಿದೆ 'ಇವರ ಮನಮಂಥನ ಶಭಚಿಂತನ' ನೂರೆಂಟು ಕಿವಿ ಮಾತುಗಳು, "ಸಭ್ಯತೆ-ಸೌಜನ್ಯ" (ಈ ಕೃತಿಯು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪಠ್ಯ ಪುಸ್ತಕವಾಯಿತು) ಈ ಕೃತಿಗಳ ಮೂಲಕ ಪುತ್ತೂರಾಯರು ಕಟ್ಟಿಕೊಟ್ಟಿರುವ ವೈಚಾರಿಕ ಚಿಂತನೆಗಳನ್ನು ವಿಶ್ಲೇಷಣೆ ಮಾಡಿರುತ್ತೇನೆ. ಹಾಗೂ ಇವರ ವೈಚಾರಿಕ ಚಿಂತನೆಗಳು ಯಾವ ಯಾವ ಕ್ಷೇತ್ರಗಳಲ್ಲಿ ಅಂದರೆ ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ, ನೈತಿಕ, ಆರ್ಥಿಕ ಹೀಗೆ ಹತ್ತು ಹಲವು ಕ್ಷೇತ್ರಗಳ್ಲಲಿ ಹೇಗೆ ವೈಚಾರಿಕತೆಯನ್ನು ಬೆಳಸಿ, ಬಳಸಿ, ಉಳಿಸಿಕೊಳ್ಳಬೇಕೆಂಬುದನ್ನು ತಿಳಿಸಲಾಗಿದೆ. ಹಾಗೆ ವೈಚಾರಕತೆಯು ಇವರ ಆಯ್ದ ಪ್ರಕಟಿತ ಲೇಖನಗಳನ್ನು ಇಲ್ಲಿ ವಿಶ್ಲೇಷಿಸಿ ಮಾಡಲಾಗಿದೆ. ಇವರ ಸಾಹಿತ್ಯ ಕೃಷಿಯಿಂದ ಪ್ರಸ್ತುತ ಮಾನವನ ಬದುಕಿಗೆ ಬೇಕಾದಂತಹ ಮೌಲ್ಯಯುತ ವಿಚಾರಗಳನ್ನು ಅರ್ಥಪೂರ್ಣವಾಗಿ ಸರಳವಾದ ರೀತಿಯಲ್ಲಿ ತಿಳಿಸುವ ಪ್ರಯತ್ನ ಮಾಡಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಇವರ ಸಾಹಿತ್ಯದಲ್ಲಿ ವೈಜ್ಞಾನಿಕ ಚಿಂತನೆಗಳನ್ನು ತಿಳಿಸಲಾಗಿದೆ. ಪ್ರತಿಯೊಬ್ಬ ಮನುಷ್ಯನಿಗೂ ಅವನ ದೇಹದ ಬಗ್ಗೆ ಇರಬೇಕಾದ ಅರಿವು, ಮಿದುಳಿನ ಮಾಯಾ ಲೋಕ, ಹಾಗೂ ನಗು ಮತ್ತು ಚಪ್ಪಾಳೆಯ ವೈಜ್ಞಾನಿಕ ಮಾಹಿತಿ ಬಗ್ಗೆ, ಹಾಗೂ ಇತ್ತೀಚಿನ ವೈದ್ಯಕೀಯ ಲೋಕದ ಬೆಳವಣಿಗೆ ಬಗ್ಗೆ ತಿಳಿಸಲಾಗಿದೆ. ಹಾಗೆಯೇ ಸಂದರ್ಶನದಲ್ಲಿ ಇವರು ನೀಡಿರುವ ವೈಜ್ಞಾನಿಕ ಚಿಂತನೆಗಳ ಬಗ್ಗೆಯೂ ತಿಳಿಸಲಾಗಿದೆ. ಜೊತೆಗೆ ವೈಜ್ಞಾನಿಕತೆಗೆ ಸಂಬಂಧಿಸಿದಂತ ಇವರ ಆಯ್ದ ಪ್ರಕಟಿತ ಲೇಖನಗಳನ್ನು ವಿಶ್ಲೇಷಣೆ ಮಾಡಲಾಗಿದೆ.

ಐದನೇ ಅಧ್ಯಾಯದಲ್ಲಿ ಸಂಶೋಧನಾ ಅಧ್ಯಾಯನದಿಂದ ಕಂಡುಬಂದಿರುವ ವಿಷಿಷ್ಟ ಅಂಶಗಳನ್ನು ಉಪಸಂಹಾರದಲ್ಲಿ ತಿಳಿಸಲಾಗಿದೆ. ಕಲೆಹಾಕಿದ ಸಾಮಗ್ರಿಗಳನ್ನು ವಿಶ್ಲೇಷಿಸಿ ಒಂದು ಕ್ರಮಬದ್ಧತೆಯಲ್ಲಿ ಅಧ್ಯಾಯಗಳನ್ನು ಪ್ರತಿಯೊಂದು ಅಧ್ಯಾಯದಲ್ಲಿ ಹೇಳಲಾಗಿರುವ ವಿಷಯಗಳ ಸಾರಾಂಶ ಮತ್ತು ಅಲ್ಲಿ ಕಂಡುಬರುವ ವಿಶಿಷ್ಟ ಅಂಶಗಳು ವಿವರಿಸಲಾಗಿದೆ. ಹಾಗೆಯೇ ಡಾ॥ ಕೆ.ಪಿ. ಪುತ್ತೂರಾಯರವರು ರಚನೆ ಮಾಡಿರುವ ಸಾಹಿತ್ಯದಲ್ಲಿ ಒಂದೊಂದು ಪ್ರಾಕಾರದಲ್ಲಿ, ಒಂದೊಂದು ವೈಶಿಷ್ಟ್ಯತೆ ಇದ್ದೆ ಇದೆ, ಅದನ್ನು ಇಲ್ಲಿ ವಿವರಿಸಲಾಗಿದೆ.

ಕೊನೆಗೆ ಕ್ಷೇತ್ರ ಕಾರ್ಯದಲ್ಲಿ ಇವರ ಸಂದರ್ಶನ ಮಾಡಿ ಹಲವಾರು ಸಾಹಿತ್ಯದ ವಿಚಾರಗಳನ್ನು, ವೈಚಾರಿಕ ಚಿಂತನೆಗಳನ್ನು ಹಾಗೂ ಹಲವಾರು ವೈಜ್ಞಾನಿಕ ಚಿಂತನೆಗಳನ್ನ ಮಾಹಿತಿಯನ್ನು ಸಂಗ್ರಹಿಸಿದ್ದೇವೆ. ಅದು ಸಹ ಅಧ್ಯಯನದ ಒಂದು ಭಾಗವಾಗಿದೆ, ಇವರ ಅಪರೂಪದ ಛಾಯಾಚಿತ್ರಗಳನ್ನು ಓದು ಓದುಗರಿಗಾಗಿ ನೀಡಲಾಗಿದೆ. ಇದರಿಂದ ಆಸಕ್ತರು ಪುತ್ತೂರಾಯರ ಸಾಹಿತ್ಯದ ನಿಲುವುಗಳೇನು ಎಂಬುದನ್ನು ತಿಳಿಯಲು ಉಪಯುಕ್ತವಾಗುತ್ತದೆ. ನಿಬಂಧದ ಕೊನೆಯಲ್ಲಿ ಅಧ್ಯಯನಕ್ಕೆ ಸಹಾಯಕವಾದ ಪರಾಮರ್ಶನ ಕೃತಿಗಳ ಪಟ್ಟಿಯನ್ನು ನೀಡಲಾಗಿದೆ.

ಒಟ್ಟಾರೆಯಾಗಿ ಡಾ॥ ಕೆ.ಪಿ. ಪುತ್ತೂರಾಯರ ಪ್ರತಿಯೊಂದು ಸಾಹಿತ್ಯ ಪ್ರಕಾರಗಳಲ್ಲಿಯೂ ತಮ್ಮ ಅಪರವಾದ ವಿದ್ವತ್ ಪ್ರತಿಭೆಯನ್ನು ಕಾಣುತ್ತೇವೆ. ಅದನ್ನೆಲ್ಲ ಇಲ್ಲಿ ದಾಖಲಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಇದರಿಂದ ಪ್ರಸ್ತುತ ಮಾನವ ಜೀವನದ ಅಭ್ಯುದಯಕ್ಕೆ ಬೇಕಾದಂತಹ ವೈಚಾರಿಕ ಮೌಲ್ಯಗಳ ಬಗ್ಗೆ ಹಗೂ ವೈಜ್ಞಾನಿಕ ಚಿಂತನೆಗಳ ಬಗ್ಗೆ ತಿಳಿಸಿಕೊಡುವ ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ.

ಕ್ಷೇತ್ರ ಕಾರ್ಯ:

ಡಾ॥ ಕೆ.ಪಿ. ಪುತ್ತೂರಾಯರವರೊಂದಿಗಿನ ಸಂದರ್ಶನ

ಡಾ॥ ಕೆ.ಪಿ. ಪುತ್ತೂರಾಯರ ಸಂದರ್ಶನವನ್ನು ಅಧ್ಯಯನದ ಒಂದು ಭಾಗವಾಗಿ ಆಯ್ಕೆ ಮಾಡಿಕೊಂಡಿದ್ದೇನೆ. ಈಗಾಗಲೇ ತಮ್ಮ ಬರಹಗಳನ್ನು ಸಾಕಷ್ಟು ಓದಿ ಅರ್ಥ ಮಾಡಿಕೊಳ್ಳುವ ಹಾದಿಯಲ್ಲಿದ್ದೇನೆ. ಬಹುಶಃ ಈ ಸಂದರ್ಶನದಿಂದ ಇನ್ನಷ್ಟು ಪಕ್ವವಾಗಲು ಸಾಧ್ಯವಾಗುತ್ತದೆ ಎಂದು ನಿಮ್ಮ ಸಂದರ್ಶನ ಮಾಡಿ ಹಲವಾರು ಮಹತ್ವದ ಮಾಹಿತಿಗಳನ್ನು ಈ ಮೂಲಕ ಸಂಗ್ರಹಿಸುವ ಪ್ರಯತ್ನ ಮಾಡಿದ್ದೇನೆ.

ಪ್ರಶ್ನೆ: ತಮ್ಮ ಕೌಟುಂಬಿಕ ಹಿನ್ನಲೆಯನ್ನು ತಿಳಿಸಿಕೊಡಿ ?

ಈಗಾಗಲೇ ಹುಟ್ಟಿದೆಲ್ಲ ಗೊತ್ತೆ ಇದೆ. ಸ್ವಂತ ಊರು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಆರ್ಯಾಪು ಗ್ರಾಮ, ತಂದೆ ವಾಸುದೇವ ಪುತ್ತೂರಾಯ, ತಾಯಿ ಗಂಗಮ್ಮ. ನಾನು ಓದಿದೆಲ್ಲ ಮುಗಿದ ನಂತರ, ಉದ್ಯೋಗಕ್ಕೆ ಅನುಗುಣವಾದ ವೃತ್ತಿ ಹುಡುಕಾಟ ಆರಂಭಿಸಿ, ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ಟ್ಯೂಟರ್ ಆಗಿ ವೃತ್ತಿ ಆರಂಭಿಸಿ, ನಂತರ ಪಬ್ಲಿಕ್ ಸರ್ವೀಸ್ ಕಮಿಷನ್‌ನಲ್ಲಿ ಸೆಲೆಕ್ಟ್ ಆಗಿ ನೌಕರಿ ಭದ್ರತೆ ಆಯಿತು. ನಂತರ ಶ್ರೀಮತಿ ಜ್ಯೋತಿಯವರನ್ನು ವಿವಾಹ ಆದೆ. ನಮಗೆ ಇಬ್ಬರು ಮಕ್ಕಳಾದರು ಹೀಗೆ ವೃತ್ತಿಯ ಜೊತೆಗೆ, ಪ್ರವೃತ್ತಿಯೂ ಆರಂಭವಾಯಿತು. ಪ್ರಸ್ತುತ ಈಗ ಬೆಂಗಳೂರಿನಲ್ಲೇ ವಾಸವಾಗಿದ್ದೇವೆ.

ಪ್ರಶ್ನೆ: ನಿಮ್ಮ ಮಾತೃಭಾಷೆ ತುಳು ಆಗಿದ್ದರೂ ಕನ್ನಡದ ಭಾಷಾಭಿಮಾನ ಹೆಚ್ಚು, ಏಕೆ ? ಹೇಗೆ ?

ನನ್ನ ಮಾತೃಭಾಷೆ ತುಳು ಆದರೂ ನಾನು ಕನ್ನಡದ ಕಟ್ಟಾಭಿಮಾನಿ, ಕನ್ನಡವನ್ನು ಪ್ರೀತಿಸಲು, ಕನ್ನಡದ ಸೇವೆ ಮಾಡಲು ಮನೆಯೊಳಗಿನ ಮಾತು ಕನ್ನಡವೇ ಆಗಬೇಕೆಂದಿಲ್ಲ. ಮನದೊಳಗಿನ ಮಾತು ಕನ್ನಡವಾಗಿದ್ದರೆ ಸಾಕು, ಅಂತೆಯೇ ಮಾತೃಭಾಷೆ ಕನ್ನಡವೇ ಆಗಬೇಕಂತಿಲ್ಲ. ಹೃದಯದ ಭಾಷೆ ಕನ್ನಡವಾಗಿದ್ದರೆ ಸಾಕು. ಹಾಗಾಗಿ ಕನ್ನಡ ನನ್ನ ಹೃದಯದಭಾಷೆ, ಮನದೊಳಗಿನ ಮಾತು ಎಂದರು. ಇದು ಇವರ ಕನ್ನಡ ಭಾಷಾಭಿಮಾನವನ್ನು ಎತ್ತಿ ತೋರುತ್ತಿದೆ.

ಪ್ರಶ್ನೆ: ನೀವು ವೈದ್ಯಕೀಯ ಮಹಾವಿದ್ಯಾಲಯದ ಶರೀರ ಕ್ರಿಯಾ ಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾಗಿದ್ದರು ಸಾಹಿತ್ಯದ ಒಲುಮೆ ಏಕೆ ಬಂತು ?

ನನ್ನ ವೃತ್ತಿಯೇ ಪ್ರವೃತ್ತಿಗೆ ನಾಂದಿಯಾಯಿತು. ಹೇಗೆಂದರೆ ನಾನು ಭೋಧಕನಾಗಿದ್ದುದ್ದರಿಂದ ಉತ್ತಮ ಮಾತುಗಾರನಾಗಲು, ಭಾಷಣಕಾರನಾಗಲು ಪ್ರೇರಣೆಯಾಯಿತು. ಅಂದಿನ ಆ ಪ್ರೇರಣೆಯೇ ಇಂದು ನಾನು ಸಾಹಿತಿಯಾಗಲು ಕಾರಣವಾಯಿತು.

ಪ್ರಶ್ನೆ: ನಿಮ್ಮ ಸಾಹಿತ್ಯ ಪ್ರೇರಣೆಯಲ್ಲಿ ಮರೆಯಲಾಗದಂತಹ ವ್ಯಕ್ತಿ ಹಾಗೂ ಸಂದರ್ಭ ಯಾವುದು ?

ನನ್ನ ಸಾಹಿತ್ಯ ಪ್ರೇರಣೆಯಲ್ಲಿ ಮರೆಯಲಾಗದಂತಹ ವ್ಯಕ್ತಿ ಕಡಲ ತೀರದ ಭಾರ್ಗವ ಡಾ॥ ಕೆ. ಶಿವರಾಮಕಾರಂತರು. ಮರೆಯಲಾಗದಂತಹ ಸಂದರ್ಭ ಎಂದರೆ ಅವರೊಡನಿದ್ದ ನನ್ನ ಒಡನಾಟ ಹಾಗೂ

ಸಂಪರ್ಕ, ಅವರಲ್ಲಿದ್ದ ಅವರ ಸಾಹಿತ್ಯಸಕ್ತಿ ನೋಡಿ, ನನಗೆ "ಅವರು ಒಬ್ಬ ವ್ಯಕ್ತಿ ಅಲ್ಲ, ಸಾಹಿತ್ಯ ಶಕ್ತಿ" ಯಾಗಿ ಕಂಡಂತಹ ಪರಿ ಮರೆಯಲಾಗದು. ಹಾಗೇ ಅವರು ಹಲವು ಸಂದರ್ಭಗಳಲ್ಲಿ ಸಾಹಿತ್ಯದ ಬಗ್ಗೆ ನೀಡುತ್ತಿದ್ದ ವೈವಿಧ್ಯಮಯ ವಿಚಾರಧಾರೆಗಳು, ಸಾಹಿತ್ಯದ ಆಸಕ್ತಿ ಇದ್ದ ನನ್ನ ಮನಕ್ಕೆ ಸಾಹಿತ್ಯದ ಶಕ್ತಿ ಬೇರೂರಲು, ಶಕ್ತಿಯಾಗಿ ನಿಲ್ಲಲು ಮಹತ್ವದ ಪ್ರೇರಣೆ ಎಂದರು.

ಪ್ರಶ್ನೆ: ನಿಮ್ಮ ಸಾಹಿತ್ಯವು ಯಾವ ಆಶಯಗಳ ಹಿನ್ನೆಲೆಯದ್ದು ?

ಸಾಮಾಜಿಕ ಸಮಸ್ಯೆಗಳನ್ನು ಸರಳ ಕನ್ನಡದಲ್ಲಿ ಸಾಮಾನ್ಯರಿಗೂ ಅರ್ಥವಾಗುವ ರೀತಿಯಲ್ಲಿ ತಿಳಿಸಿ ಅದಕ್ಕೆ ಪರಿಹಾರವನ್ನು ತಿಳಿಸುವ ಪ್ರಾಮಾಣಿಕ ಪ್ರಯತ್ನ. ಉದಾ:- ಆತ್ಮ ಹತ್ಯೆ, ವಿವಾಹ ವಿಚ್ಛೇದನಾ, ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ, ದುಶ್ಚಟಗಳಿಗೆ ದಾಸರಾಗುವುದು, ಖಿನ್ನತೆ, ಅನ್ಯೋನ್ಯತೆ-ಆತ್ಮೀಯತೆಗಳ ಕೊರತೆ, ಜಾತೀಯತೆ, ಭ್ರಷ್ಟಾಚಾರ, ಇವುಗಳಿಗೆ ಸಾಹಿತ್ಯದ ಮೂಲಕ ಪರಿಹಾರ ತಿಳಿಸುವ ಪ್ರಾಮಾಣಿಕ ಪ್ರಯತ್ನವಾಗಿದೆ.

ಪ್ರಶ್ನೆ: ನಿಮಗೆ ಕಾರಂತರಲ್ಲದೇ, ಇತರೇ ಯಾವ ಕನ್ನಡ ಶ್ರೇಷ್ಟ ಸಾಹಿತ್ಯಗಳ ಒಡನಾಟ ಹಾಗೂ ಪ್ರೇರಣೆ ನಿಮ್ಮ ಮೇಲೆ ಹಾಗಿದೆಯೇ ?

ಕಾರಂತರಂತೆಯೇ ನನ್ನ ಸಾಹಿತ್ಯ ಪ್ರೇರಣೆಗಳಲ್ಲಿ, ನಾ ಕಂಡಂತೆ ಕನ್ನಡದ ದೊಡ್ಡ ಸಾಹಿತಿ, ಜ್ಞಾನ ಪೀಠ ಪ್ರಶಸ್ತಿ ವಿಜೇತರಾದ ಡಾ॥ ದ.ರಾ. ಬೇಂದ್ರೆಯವರನ್ನು ನೋಡಿದಾಗ ಅವರ ಜೊತೆ ಮಾತನಾಡಿದಾಗ ಅವರು ನನ್ನನ್ನು ಆತ್ಮೀಯವಾಗಿ ಕಂಡು ಮಾತನಾಡಿದಾಗ ಆ ಶ್ರೇಷ್ಟ ಸಾಹಿತಿಯೊಡನೆ ನಾನು ಕಳೆದ ಆ ಸನ್ನಿವೇಶ ಆತ್ಮ ತೃಪ್ತಿ ತಂದ ದಿನಗಳವು. ಅದೇ ರೀತಿ ಕುವೆಂಪುರವರ ಸಾಹಿತ್ಯ ಚಿಂತನೆಗಳು, ಕಾವ್ಯ ಕಾದಂಬರಿಗಳು, ಬಹಳ ನನಗೆ ಮನಮುಟ್ಟಿದವು, ಸಾಹಿತ್ಯ ಪ್ರೇರಣೆಯನ್ನು ಮತ್ತಷ್ಟು ಹೆಚ್ಚಿಸಿದವು. ಕನ್ನಡದ ಖ್ಯಾತ ಕಾದಂಬರಿಗಾರರಾದ ಎಸ್.ಎಲ್. ಭೈರಪ್ಪನವರ ಜೊತೆಗಿನ ಒಡನಾಟ, ಹಾಗೂ ಅವರ ಜನಪ್ರಿಯ ಕಾದಂಬರಿಗಳು ಸಾಹಿತ್ಯ ಪ್ರೇರಣೆಗೆ ಪೂರಕವಾಗಿದೆ ಎನ್ನಲಡ್ಡಿಯಿಲ್ಲ, ಅದರಂತೆ ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳು ಹಾಗೂ ಮಾಜಿ ಕೇಂದ್ರ ಮಂತ್ರಿ, ಸರಸ್ವತಿ ಸನ್ಮಾನ್ ಪ್ರಶಸ್ತಿ ಪುರಸ್ಕೃತರಾದ ಎಂ. ವೀರಪ್ಪ ಮೊಯ್ಲಿಯವರ ಒಡನಾಟ ಸಂತಸದ ಕ್ಷಣಗಳು ಎಂದರು.

ಪ್ರಶ್ನೆ: ಸಾಹಿತಿಗಳೇ ಅಲ್ಲದೇ, ಇತರೇ ಗಣ್ಯ ವ್ಯಕ್ತಿಗಳ ಒಡನಾಟ ಹಾಗೂ ಅವರ ಹಲವು ಕ್ಷೇತ್ರಗಳ ಸಾಧನೆ ನಿಮ್ಮ ಮೇಲೆ ಪ್ರಭಾವ ಬೀರಿದೆಯೇ................

ಹೌದು, ಕನ್ನಡದ ಶ್ರೇಷ್ಟ ಸರಳ ಹಾಗೂ ಸಜ್ಜನಿಕೆಗೆ ಹೆಸರಾದ ಸರ್ವೋಚ್ಚ ನ್ಯಾಯಾಲಯದ ಶ್ರೇಷ್ಟ ನ್ಯಾಯಾದೀಶರಾಗಿದ್ದ ಶ್ರೀಯುತ ಎಂ.ಎನ್. ವೆಂಕಟಾಚಲಯ್ಯ ಅವರ ಶ್ರೇಷ್ಟ ಸಾಧನೆ ಹಾಗೂ ಅವರೊಂದಿಗಿನ ಒಡನಾಟ ಬಹಳ. ಹಾಗೆಯೇ ಅವರು ನನ್ನ ಹಲವು ಸಾಹಿತ್ಯ ಹಾಗೂ ಸಾಹಿತ್ಯೇತರ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದು, ಭಾಗವಹಿಸುತ್ತಿರುವುದು ನನಗೆ ಸಂತಸದ ಸಂದರ್ಭವಾಗಿದೆ. ಅದೇ ರೀತಿ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ಡಾ॥ ವೀರೇಂದ್ರ ಹೆಗ್ಗಡೆಯವರ ಜೊತೆ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದು, ಹಾಗೇ ನನ್ನ ಸಾಹಿತ್ಯ ವಿಚಾರಧಾರೆಗಳನ್ನು ಆಲಿಸಿದ್ದ ಧರ್ಮದರ್ಶಿಗಳು ಖುದ್ದಾಗಿ ನನ್ನ ಸಾಹಿತ್ಯ ವಿಚಾರಧಾರೆಗಳನ್ನು ಕುರಿತು, ಪತ್ರ ಬರೆದದ್ದು, ಮರೆಯಲಾಗದ ಕ್ಷಣವಾಗಿದೆ. ಅದೇ ರೀತಿ ಉಡುಪಿ ಪೇಜಾವರ ಶ್ರೀಗಳಾದ ಶ್ರೀ ವಿಶ್ವೇಶ್ವರ ತೀರ್ಥ ಸ್ವಾಮೀಜಿಗಳು, ಹಾಗೂ ನಡೆದಾಡುವ ದೇವರು

ಎಂದೇ ಪ್ರಖ್ಯಾತರಾದ ಸಿದ್ಧಗಂಗಾ ಸ್ವಾಮೀಜಿಗಳಾದ ಡಾ॥ ಶಿವಕುಮಾರ ಸ್ವಾಮಿಗಳು ಇವರುಗಳೊಟ್ಟಿಗೆ ಕೆಲ ಕಾರ್ಯಕ್ರಮಗಳಲ್ಲಿ ವೇದಿಕೆ ಹಂಚಿಕೊಂಡಿದ್ದ ಹಾಗೂ ನೇರವಾಗಿ ಹಲವು ಬಾರಿ ಕೆಲ ವಿಚಾರಗಳ ಬಗ್ಗೆ ವಿಚಾರ ವಿನಿಮಯಗೊಂಡಿದ್ದ ಸಂದರ್ಭಗಳು ಮರೆಯಲಾರದ ಕ್ಷಣಗಳು.

ಹಾಗೆಯೇ ಮೈಸೂರು ಮಹಾರಾಜರಾದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್‌ರವರ ಜೊತೆ ವೇದಿಕೆ ಹಂಚಿಕೊಂಡಿದ್ದು, ಅವರೊಡನೆ ಆಡಿದ ಮಾತುಗಳು ಅವರೊಟ್ಟಿಗಿನ ಒಡನಾಟ ಅವಿಸ್ಮರಣೀಯವಾದದ್ದು.

ಪ್ರಶ್ನೆ: ಕನ್ನಡದ ಪ್ರಖ್ಯಾತ ವಿಜ್ಞಾನಿಗಳ ಜೊತೆಗಿನ ಒಡನಾಡವಿತ್ತೇ, ಅವರ ಕುರಿತು ನಿಮ್ಮ ಅಭಿಪ್ರಾಯವೇನು?

ಹೌದು, ಖ್ಯಾತ ಬಾಹ್ಯಾಕಾಶ ವಿಜ್ಞಾನಿ ಯು.ಆರ್. ರಾವ್, ಭೌತವಿಜ್ಞಾನಿ ಸಿ.ಎನ್.ಆರ್. ರಾವ್, ಮಣಿಪಾಲ್ ಸಂಸ್ಥೆಗಳ ಸಂಸ್ಥಾಪಕರಾದ ಟಿ.ಎಂ.ಎ. ಪೈ, ಇವರೊಟ್ಟಿಗೂ ಸಹ ಕೆಲ ಕಾರ್ಯಕ್ರಮಗಳಲ್ಲಿ ವೇದಿಕೆ ಹಂಚಿಕೊಂಡಿದ್ದು ಇದರಿಂದಾಗಿ ನನ್ನ ಸಾಹಿತ್ಯದ ವಿಚಾರಧಾರೆಗಳನ್ನು ಕುರಿತು ಅವರು ನನ್ನೊಟ್ಟಿಗೆ ನಡೆಸಿದ ಹಲವು ಸಂದರ್ಭದ ಮಾತುಕತೆಗಳು ಹೆಚ್ಚು ಸಂತಸವನ್ನು ಉಂಟು ಮಾಡಿದ ಸಂಧರ್ಭಗಳು.

ಪ್ರಶ್ನೆ: ನೀವು ಮೌಢ್ಯ, ಕಂದಾಚಾರಗಳು, ಮೂಢ ನಂಬಿಕೆಗಳ್ನು ವಿರೋಧಿಸುವ ನೀವು, ನಿಮ್ಮ ಅಡಿಪಾಯದಲ್ಲಿ ದೇವರು, ದೈವತ್ವದ ಬಗ್ಗೆ ನಿಮ್ಮ ಅನಿಸಿಕೆ ಏನು ?

ಮೌಢ್ಯ, ಕಂದಾಚಾರಗಳ ಚಿಂತನೆಯೇ ಬೇರೆ, ದೇವರು ಹಾಗೂ ದೈವತ್ವದ ಮನೋಚಿಂತನೆಯೇ ಬೇರೆ. ಈ ದೃಷ್ಟಿಯಿಂದಲೆ ನನ್ನ ಅಂತರಂಗದ ಅಭಿಮಾನಿ ಸದಾ ಅನುಗ್ರಹವನ್ನು ಮಾಡುತ್ತಿರುವ ನನ್ನ ನೆಚ್ಚಿನ ಆರಾಧ್ಯ ದೈವ ಮಂತ್ರಾಲಯದ ಯತಿ, ಶ್ರೀ ಗುರು ರಾಘವೇಂದ್ರ ಸ್ವಾಮಿಗಳು.

ಪ್ರಶ್ನೆ: ನಿಮ್ಮ ಅನಂತ ಜ್ಯೋತಿ ಚಾರಿಟಬಲ್ ಟ್ರಸ್ಟಿನ ಉದ್ದೇಶವೇನು ತಿಳಿಸಿ.

ಸಮಾಜ ಸೇವೆಗೆ ಮುಡಿಪಾದ ಅನಂತ ಜ್ಯೋತಿ ಚಾರಿಟಬಲ್ ಟ್ರಸ್ಟ್ ಜಾತಿ–ಮತ ಬೇಧವಿಲ್ಲದೇ ಬಡವರಿಗೆ, ಅನಾಥರಿಗೆ, ಅಸಹಾಯಕರಿಗೆ, ಅಬಲರಿಗೆ, ಸತ್ಪಾತ್ರರಿಗೆ, ಸಕಾಲದಲ್ಲಿ ಸಂತೋಷವಾಗಿ, ಸಮ ಪ್ರಮಾಣದಲ್ಲಿ, ಯಾವುದೇ ರೀತಿಯ ಪ್ರತಿಫಲಾಪೇಕ್ಷೆಯಿಲ್ಲದೇ ಗಯ್ಯುವ ಸಾಮಾಜಿಕ ಸೇವೆ ಎಂದರು.

ಹಾಗೆಯೇ ನನ್ನ ದೃಷ್ಟಿಯಲ್ಲಿ 'ಸಂಪತ್ತು' ಎನ್ನುವುದು 3 ಹಂತಗಳಲ್ಲಿದೆ

1. ಸಂಪತ್ತಿನ ಸಂಪಾದನೆ
2. ಸಂಪತ್ತಿನ ಸಂಗ್ರಹಣೆ
3. ಸಂಪತ್ತಿನ ಸೂಕ್ತ ವಿತರಣೆ

ಈ ರೀತಿಯ ಸೂಕ್ತ ವಿತರಣೆಯೇ ಅನಂತ ಜ್ಯೋತಿ ಚಾರಿಟಬಲ್ ಟ್ರಸ್ಟ್‌ನ ಉದ್ದೇಶವಾಗಿದೆ ಎಂದು ತುಂಬು ಹೃದಯದಿಂದ ಹೇಳಿದರು.

ಪ್ರಶ್ನೆ: ಇವರೊಂದಿಗೆ, ಇವರ ಶ್ರೀಮತಿ ಜ್ಯೋತಿ ಪುತ್ತೂರಾಯರು, ಪುತ್ತೂರಾಯರ ಬಗ್ಗೆ ತಮ್ಮ ಅನಿಸಿಕೆ ಹಂಚಿಕೊಂಡಿದ್ದು ಹೇಗೆ.

ಬದುಕನ್ನು ಪ್ರಾಯೋಗಿಕವಾಗಿ ಕಲಿಸಿಟ್ಟ ಗುರು. ಹಾಗೆಯೇ ಎಲ್ಲಾ ಕೆಲಸಗಳಿಗೂ ಮುನ್ನುಗ್ಗಿ ಸಾಗು ಎಂದು ಹೇಳುತ್ತಿದ್ದರು. ಜೊತೆಗೆ ಇವರ ಸಹವಾಸದಿಂದ ನಾನು ಇವರ ಬಗ್ಗೆ ಒಂದು ಪುಸ್ತಕವನ್ನು ಬರೆದೆ ಎಂದರು. ಹಾಗೆಯೇ ಪ್ರತಿಯೊಬ್ಬ ಗಂಡಸರು ತಮ್ಮ ತಮ್ಮ ಹೆಂಡತಿಯರಿಗೆ ಸ್ಫೂರ್ತಿ ನೀಡಿದರೆ, ಪ್ರತಿಯೊಂದು ಹೆಣ್ಣು ಏನನ್ನಾದರೂ ಸಾಧಿಸಬಲ್ಲಳು ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಪುತ್ತೂರಾಯರು ನನಗೆ "ಸ್ಪೂರ್ತಿಯ ಚಿಲುಮೆ" ಎಂದು ಮನದುಂಬಿ ನುಡಿದರು. ಹಾಗೆಯೇ ಬದುಕುವ ಕಲೆ ಕಲಿಸಿದವರು ಇವರೇ. ಜೀವನದ ನಂತರವೂ ಬದುಕನ್ನು ನಡೆಸುವುದು ಹೇಗೆ ಎಂದು ಕಲಿಸಿದ್ದಾರೆ.

ಪ್ರಶ್ನೆ: ಸಾಹಿತ್ಯ ಕ್ಷೇತ್ರಕ್ಕೆ ನಿಮ್ಮ ಮುಂದಿನ ಯೋಜನೆ ಏನು ?

ನನ್ನ ಮುಂದಿನ ಯೋಜನೆ ನನ್ನ ಕಾದಂಬರಿಗಳನ್ನು ಹೊರ ತರುವುದು, ಹಾಗೆಯೇ ಹಾಡುಗಳ ಮುಖಾಂತರ ಧ್ವನಿ ಸಾಂದ್ರಿಕೆ ಹೊರತರುವ ಸಂಕಲ್ಪ ನನ್ನದು ಎಂದರು.

ಪ್ರಶ್ನೆ: ಉತ್ತಮ ಆರೋಗ್ಯದ ಕುರಿತು ನೀವು ಜನರಿಗೆ ನೀಡುವ ವೈಜ್ಞಾನಿಕ ಮಾಹಿತಿಗಳೇನು ?

"ಆರೋಗ್ಯವೇ ಭಾಗ್ಯ" ಎಂಬ ನಾಣ್ಣುಡಿ ನಿಮಗೆ ಗೊತ್ತೆ ಇದೆ. ಸಕಲ ಭಾಗ್ಯಗಳಿದ್ದು, ಆರೋಗ್ಯ ಭಾಗ್ಯವಿಲ್ಲದಿದ್ದರೆ ಎಲ್ಲವೂ ವ್ಯರ್ಥ ಎಂದ ಅವರು, ಮಾತನ್ನ ಮುಂದುವರಿಸುತ್ತಾ ಆರೋಗ್ಯದ ಬಗ್ಗೆ ಆಹಾರವು ಗುಣಾತ್ಮಕವಾಗಿದ್ದು, ಅದು ಒಂದು ಸಂಪೂರ್ಣ ಸಮತೋಲನ ಆಹಾರವಾಗಿರಬೇಕು ಎಂಬುದನ್ನು ಹೇಳುತ್ತಾ ಒಂದು ಗುಡ್ಡೆ ಅನ್ನದಲ್ಲಿ, ಒಂದು ಬಕೇಟ್ ತಿಳಿ ಸಾರಿನಲ್ಲಿ ಯಾವುದೇ ಪೋಷಕಾಂಶಗಳು ಇಲ್ಲ, ಬದಲಾಗಿ ಆಹಾರದ ಪ್ರಮಾಣ ಮುಖ್ಯವಲ್ಲ ಅದರ ಗುಣಮಟ್ಟ ಮುಖ್ಯ ಎಂದರು. ಈ ಹಿನ್ನಲೆಯಲ್ಲಿ ನಾವು ಸೇವಿಸುವ ಆಹಾರದಲ್ಲಿ ಪಿಷ್ಟ, ಸಸಾರಜನಕ, ಕೊಬ್ಬು ಲವಣಗಳು, ಜೀವಸತ್ವಗಳು ಹಾಗೂ ಶುದ್ಧವಾದ ನೀರನ್ನು ಹೊಂದಿದ ಸಂಪೂರ್ಣ ಆಹಾರವೇ ಉತ್ತಮ ಆಹಾರ ಎಂಬುದು ಇವರ ಅಭಿಮತ. ಏನನ್ನು ತಿನ್ನಬೇಕು ಎಂಬ ಪರಿಜ್ಞಾನವಿದ್ದವನಿಗೆ ಆರೋಗ್ಯ ಕಟ್ಟಿಟ್ಟ ಬುತ್ತಿ ಎಂದರು.

ಅಕಾಲದಲ್ಲಿ ತಿನ್ನುವುದು, ಆಗಾಗ ತಿನ್ನುವುದು, ಅತಿಯಾಗಿ ತಿನ್ನುವುದು ರೋಗಗಳಿಗೆ ಆಹ್ವಾನ ನೀಡಿದಂತೆ, ಹಾಗೆಯೇ ಆಹಾರದಷ್ಟೇ ವ್ಯಾಯಾಮಕ್ಕೂ ನಾವು ಪ್ರಾಮುಖ್ಯತೆಯನ್ನು ಕೊಡಬೇಕಾದದು ಆರೋಗ್ಯದ ದೃಷ್ಟಿಯಿಂದ ಸದಾ ಒಳಿತು ಎಂದರು. ವ್ಯಾಯಾಮದಿಂದಾಗಿ ಶಾರೀರಿಕ ದಾರ್ಡ್ಯತೆ, ರೋಗ ನಿರೋಧಕ ಶಕ್ತಿ ಹಾಗೂ ಶಕ್ತಿ ಸಾಮರ್ಥ್ಯಗಳು ಹೆಚ್ಚುತ್ತವೆ ಎಂಬುದು ಇವರ ಅಭಿಮತ. ಅಂತೆಯೇ ಸದೃಡವಾಗಿರಲು, ಆರೋಗ್ಯದಿಂದಿರಲು ಸಾಕಷ್ಟು ವಿಶ್ರಾಂತಿ, ಪರಿಶುದ್ಧವಾದ ಪರಿಸರ ಉತ್ತಮವಾದ ಅಭ್ಯಾಸಗಳು ಮಾತ್ರವೇ ಅಲ್ಲ, ದುಶ್ಚಟ, ದುರಾಭ್ಯಾಸಗಳಿಂದ ದೂರವಿರುವುದು ಅತ್ಯವಶ್ಯಕ ಎಂದರು. "Two Kings who can kill a person without a war or smoking and drinking" ಎಂದ ಅವರು, ನಮಗೆ ರೋಗವಿರಲಿ, ಇರದಿರಲಿ ವರುಷಕ್ಕೆ ಒಂದು ಸಲ ಒಂದು ಸಂಪೂರ್ಣ ವೈದ್ಯಕೀಯ ತಪಾಸಣೆ ಅತ್ಯವಶ್ಯಕವಾಗಿ ಮಾಡಿಸಿಕೊಳ್ಳಬೇಕು ಎಂದು ಹೇಳಿದರು.

ಆರೋಗ್ಯವೆಂದರೆ ಅದು ಕೇವಲ ಶಾರೀರಿಕ ಆರೋಗ್ಯ ಮಾತ್ರವಲ್ಲ, ಮಾನಸಿಕ ಆರೋಗ್ಯ ಹಾಗೂ ಆತ್ಮ ಆರೋಗ್ಯವೂ ಸಹ ಆಗಿದೆ. ಇದನ್ನು ನಾವು ಕಾಪಾಡಿಕೊಳ್ಳಬೇಕು. ಒಟ್ಟಿನಲ್ಲಿ ಉತ್ತಮ ಆರೋಗ್ಯವನ್ನು ಗಳಿಸಿಕೊಳ್ಳುವುದು, ಗಳಿಸಿಕೊಂಡ ಆರೋಗ್ಯವನ್ನು ಬೆಳಸಿಕೊಳ್ಳುವುದು, ಬೆಳಸಿಕೊಂಡ ಆರೋಗ್ಯವನ್ನು ಉಳಿಸಿಕೊಳ್ಳುವುದು ಬುದ್ಧಿವಂತರ ಜೀವನ ವಿಧಾನ ಎಂದರು. ಒಟ್ಟಾರೆ ಆರೋಗ್ಯದ ಆಯಾಮವನ್ನೇ ತೆಗೆದಿಟ್ಟರು.

ಇನ್ನೂ ಸಾಕಷ್ಟು ವಿಚಾರಗಳ ಬಗ್ಗೆ ಚರ್ಚೆ ಮಾಡುವಂತಹದ್ದು ಇದ್ದೇ ಇದೆ. ಸಮಯ ಅಭಾವದಲ್ಲೂ ಇಷ್ಟು ಮಹತ್ವದ ವಿಚಾರಗಳನ್ನು ನಮ್ಮೊಂದಿಗೆ ಹಂಚಿಕೊಂಡಿದ್ದಕ್ಕೆ ತುಂಬಾ ಧನ್ಯವಾದಗಳು ಸರ್.

ಡಾ॥ ಕೆ.ಪಿ. ಪುತ್ತೂರಾಯರಿಗೆ ಸಂದ ಪ್ರಶಸ್ತಿಗಳು

1. ಆರ್ಯಭಟ ಪ್ರಶಸ್ತಿ,
2. ಆಳ್ವಾಸ್ ನುಡಿಸಿರಿ 2010
3. ರಾಜೀವ್‌ಗಾಂಧಿ ಏಕತಾ ಪ್ರಶಸ್ತಿ
4. ಐ.ಎಂ.ಎ ಪ್ರಶಸ್ತಿ
5. ಪೇಜಾವರ ಮಠದ ರಾಮವಿಠಲ ಪ್ರಶಸ್ತಿ
6. ಶ್ರೀ ಕೃಷ್ಣನರಸಿಂಹಾನುಗ್ರಹ ಪ್ರಶಸ್ತಿ
7. ಸರ್. ಎಂ. ವಿಶ್ವೇಶ್ವರಯ್ಯ ಸದ್ಭಾವನಾ ಪ್ರಶಸ್ತಿ
8. 2015 ರ ಬುದ್ಧ ಪ್ರಶಸ್ತಿ
9. 2016 ರ ಸ್ವಾಮಿ ವಿವೇಕಾನಂದ ಸದ್ಬಾವನಾ ಪ್ರಶಸ್ತಿ
10. ಸುವರ್ಣ ಕರ್ನಾಟಕ ಜನಶಕ್ತಿ ವೇದಿಕೆಯಿಂದ ಸುವರ್ಣ ಪುರಸ್ಕೃತ ಪ್ರಶಸ್ತಿ
11. ಕರ್ನಾಟಕ ಸಾಂಸ್ಕೃತಿಕ ಪರಿಷತ್ತಿನಿಂದ ಹಾಗೂ ಎ.ಪಿ.ಪಿಐ ನಿಂದ 2016 ರ ಜೀವಮಾನ ಸಾಧನಾ ಪ್ರಶಸ್ತಿ
12. ಕರಾವಳಿ ರತ್ನ ಪ್ರಶಸ್ತಿ
13. ಶ್ರೀ ಟಿ.ವಿ. ಕಪಾಲಿಶಾಸ್ತ್ರಿ ಪ್ರಶಸ್ತಿ
14. ಅಮೇರಿಕದ ಎಂ.ಜಿ. ರಂಗನಾಥನ್ ಸ್ಮಾರಕ ಪುಸ್ತಕ ಪ್ರಶಸ್ತಿ
15. ಅಕ್ಕ ಮತ್ತು ನಾವಿಕ ಕನ್ನಡ ಸಂಘಗಳಿಂದ ಪ್ರಶಸ್ತಿ
16. ಉಡುಪಿಯ ಶ್ರೀ ಕೃಷ್ಣಾನುಗ್ರಹ ಪಶಸ್ತಿ
17. ಬಲಿಯೇಂದ್ರ ಪುರಸ್ಕಾರ
18. ಕೆಂಪೇಗೌಡ ಪ್ರಶಸ್ತಿ
19. ಎಂ.ಎಲ್ ಗುಪ್ತಾ ಪಶಸ್ತಿ
20. ಮೇಜರ್ ಜನರಲ್ ಭಾಟಿಯಾ ಪ್ರಶಸ್ತಿ

ಡಾ॥ ಕೆ.ಪಿ. ಪುತ್ತೂರಾಯರಿಗೆ ಸಂದ ಗೌರವಗಳು

1. ಸ್ನೇಹಸಿಂಹ
2. ವಿಪ್ರರತ್ನ
3. ಸಮಾಜಧುರೀಣ
4. ವಾಕ್‌ವಿಶಾರದ
5. ಆನಂದತಿಲಕ
6. ಪ್ರಜಾಭೂಷಣ
7. ಸಮಾಜರತ್ನ
8. ಸುವರ್ಣ ಕನ್ನಡಿಗ
9. ವಿವೇಕರತ್ನ
10. ಘನ ಹಾಸ್ಯ ವಾಚಸ್ಪತಿ
11. ಆದರ್ಶ ಸೇವಾರತ್ನ
12. ಪ್ರತಿಭಾರತ್ನ
13. ಎ ಜೆಮ್ ಆಫ್ ಕರ್ನಾಟಕ
14. ಕೆನಡಾದ ಕನ್ನಡ ಸಂಘದಿಂದ ಹಾಸ್ಯ ಲೋಕಾಧಿಪತಿ ಎಂಬ ಬಿರುದು
15. ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಡಾ॥ ಪುತ್ತೂರಾಯರ ಗೌರವಾರ್ಥ ರೂ.5/- ಮೌಲ್ಯದ ಅಂಚೆ ಚೀಟಿಯನ್ನು ಬಿಡುಗಡೆ ಮಾಡಿರುವುದು ವಿಶೇಷ

ಆಕರ ಗ್ರಂಥಗಳು/ಕೃತಿ

1. ಮನಮಂಥನ ಶುಭಚಿಂತನ — ಡಾ॥ ಕೆ.ಪಿ. ಪುತ್ತೂರಾಯ
2. ನೂರೆಂಟು ಕಿವಿ ಮಾತುಗಳು — ಡಾ॥ ಕೆ.ಪಿ. ಪುತ್ತೂರಾಯ
3. ಸಭ್ಯತೆ ಸೌಜನ್ಯ — ಡಾ॥ ಕೆ.ಪಿ. ಪುತ್ತೂರಾಯ
4. ನುಡಿ ನಕ್ಷತ್ರಗಳು — ಡಾ॥ ಕೆ.ಪಿ. ಪುತ್ತೂರಾಯ
5. ನುಡಿ ಮುತ್ತುಗಳು — ಡಾ॥ ಕೆ.ಪಿ. ಪುತ್ತೂರಾಯ
6. ಭಾವ ಮಯೂರಿ — ಡಾ॥ ಕೆ.ಪಿ. ಪುತ್ತೂರಾಯ
7. ಅಂತಿಂತವರಲ್ಲ ನಮ್ಮ ಪುತ್ತೂರಾಯರು ಶ್ರೀಮತಿ ಜ್ಯೋತಿ ಪುತ್ತೂರಾಯ
8. ಮಾನವ ಮಿದುಳು — ಡಾ॥ ಕೆ.ಪಿ. ಪುತ್ತೂರಾಯ
9. ನಗು ಅತ್ಯುತ್ತಮ ಔಷಧಿ — ಡಾ॥ ಕೆ.ಪಿ. ಪುತ್ತೂರಾಯ
10. ನಿಮ್ಮ ದೇಹದ ಬಗ್ಗೆ ನಿಮಗೆಷ್ಟು ಗೊತ್ತು ? ಡಾ॥ ಕೆ.ಪಿ. ಪುತ್ತೂರಾಯ
11. Essays on Life 2 Living (Anyone can be happy in Life) — Dr. K.P. Puthuraya

ಭಾವಚಿತ್ರಗಳು



ಡಾ|| ಕೆ.ಪಿ. ಪುತ್ತೂರಾಯರವರ ಭಾವಚಿತ್ರ



ಡಾ|| ಕೆ.ಪಿ. ಪುತ್ತೂರಾಯರವವರು ಮತ್ತು ಶ್ರೀಮತಿ ಜ್ಯೋತಿ ಪುತ್ತೂರಾಯರು



ಕುಟುಂಬದವರೊಂದಿಗೆ ಡಾ|| ಕೆ.ಪಿ. ಪುತ್ತೂರಾಯರು









ಧರ್ಮಸ್ಥಳದಲ್ಲಿ ನಡೆದ ಸರ್ವಧರ್ಮ ಸಾಹಿತ್ಯ ಸಮ್ಮೇಳನದಲ್ಲಿ ಮಾನ್ಯ ಶ್ರೀ ಡಾ॥ ವೀರೇಂದ್ರ ಹೆಗಡೆಯವರ ಸಾನಿಧ್ಯದಲ್ಲಿ



ವಿ ಕ– ಅಮೇರಿಕ ಕನ್ನಡ ಸಂಘದಲ್ಲಿ ಆಮಂತ್ರಿತ ಉಪನ್ಯಾಸಕರಾಗಿ ಡಾ॥ ಕೆ.ಪಿ. ಪುತ್ತೂರಾಯರು



ವಿಂಗ್ ಜಪಾನೀಸ್ ಸ್ಪೀಚ್ ಕಾಂಟೆಂಟ್ಸ್‌ನಲ್ಲಿ ಡಾ॥ ಕೆ.ಪಿ. ಪುತ್ತೂರಾಯರು



ಅಸೋಸಿಯೇಷನ್ ಆಫ್ ಫಿಸಿಯಾಲಸಿಸ್ಟ್ ಮತ್ತು
ಫಾರ್ಮಕಾಲಜಿಸ್ಟ್ ಆಫ್ ಇಂಡಿಯಾ
ಕಾರ್ಯಕ್ರಮದಲ್ಲಿ ಡಾ॥ ಕೆ.ಪಿ. ಪುತ್ತೂರಾಯರು



ಸೇಂಟ್ ಜೋಸೆಫ್ ಇಂಜಿನಿಯರಿಂಗ್ ಕಾಲೇಜ್,
ಮಂಗಳೂರು, ಸ್ಫೂರ್ತಿ 2016 ರ ಕಾರ್ಯಾಗಾರದಲ್ಲಿ
ಡಾ॥ ಕೆ.ಪಿ. ಪುತ್ತೂರಾಯರು



ಪುಣೆಯ ಕನ್ನಡ ಸಂಘದಲ್ಲಿ ನಡೆದ ಉಪನ್ಯಾಸದಲ್ಲಿ
ಡಾ॥ ಕೆ.ಪಿ. ಪುತ್ತೂರಾಯರು









ಕರ್ನಾಟಕ ಸಂಘ ಕತಾರ್‌ನಲ್ಲಿ ನಡೆದ 61ನೇ ಕನ್ನಡ ರಾಜ್ಯೋತ್ಸವದಲ್ಲಿ ಡಾ॥ ಕೆ.ಪಿ. ಪುತ್ತೂರಾಯರು




ಶುಭ ಚಿಂತನ ಧ್ವನಿ ಸಾಂದ್ರಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ಡಾ॥ ಕೆ.ಪಿ. ಪುತ್ತೂರಾಯರು



ಮನಮಂಥನ ಶುಭ ಚಿಂತನ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಪೇಜಾವರ ಶ್ರೀಗಳೊಂದಿಗೆ ಡಾ॥ ಕೆ.ಪಿ. ಪುತ್ತೂರಾಯರು









ಡಾ|| ಕೆ.ಪಿ. ಪುತ್ತೂರಾಯರವರೊಂದಿಗಿನ ಸಂದರ್ಶನ



ಕೆ.ಪಿ. ಪುತ್ತೂರಾಯರವರೊಂದಿಗಿನ
ದರ್ಶನದ ನಂತರ ತೆಗೆದ ಭಾವಚಿತ್ರ